ಉಪನ್ಯಾಸ ಗ್ರಂಥಮಾಲೆ

೪೯

ಜಾಗತಿಕ ಸರಕಾರ

ಸಿ. ವೀರಬಸಣ್ಣ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೭೦

ಉಪನ್ಯಾಸ ಗ್ರಂಥಮಾಲೆ

೪೯

ಜಾಗತಿಕ ಸರಕಾರ

ಸಿ. ವೀರಬಸಣ್ಣ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೬೦

ಪ್ರಕಾಶಕರು:

ಎಸ್. ಎಸ್. ಒಡೆಯರ, ಎಂ. ಎ., ಎಲ್ಎಲ್.ಬಿ.
ರಜಿಸ್ಟ್ರಾರ್,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಫೆಬ್ರುವರಿ, ೧೯೬೬ — ೨,೦೦೦ ಪ್ರತಿಗಳು
ದ್ವಿತೀಯ ಮುದ್ರಣ : ಡಿಸೆಂಬರ, ೧೯೭೦ — ೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು:

ಎಸ್. ಎಮ್. ಜಕರಡ್ಡಿ, ಬಿ. ಎ.
ಸಂಗಮ ಮುದ್ರಣಾಲಯ,
ಸಾಧನಕೇರಿ, ಧಾರವಾಡ

ನಾಲ್ಕನೆಯ ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಗಳ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾನಿಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಲಿಗೆ ಒಯ್ದು ಮುಟ್ಟಿಸ

ಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಉಪನ್ಯಾಸಗಳನ್ನು ಕೊಡಿಸಿದಷ್ಟಕ್ಕೆ ತೃಪ್ತಿಗೊಳ್ಳದೆ, ಇವುಗಳಲ್ಲಿ ಕೆಲವನ್ನಾದರೂ ಗ್ರಂಥರೂಪದಲ್ಲಿ ಬರೆಯಿಸಿ, ಸುಲಭವಾದ ಬೆಲೆಗೆ ಪ್ರಕಟಿಸಿ ಕನ್ನಡ ಜನದಲ್ಲೆಲ್ಲ ಹರಡಬೇಕೆಂಬ ಯೋಜನೆ ಈಗ ಹತ್ತು ವರ್ಷಗಳ ಪೂರ್ವದಲ್ಲಿಯೇ ಈ 'ಉಪನ್ಯಾಸ ಗ್ರಂಥಮಾಲೆ'ಯ ರೂಪದಲ್ಲಿ ಮೂರ್ತಗೊಂಡು ಮುನ್ನಡೆದಿದೆ. ಈ ಮಾಲೆಯಲ್ಲಿ ಇದುವರೆಗೆ ಬೇರೆ ಬೇರೆ ವಿಷಯಗಳನ್ನು ಕುರಿತು ಅನೇಕ ಪುಸ್ತಕಗಳು ಪ್ರಕಟವಾಗಿವೆ. ಅಲ್ಪಾವಧಿಯಲ್ಲಿಯೇ ಈ ಪುಸ್ತಕಗಳ ಸಾವಿರಾರು ಪ್ರತಿಗಳು ಮಾರಾಟಗೊಂಡಿವೆ. ಕೆಲವು ಪುಸ್ತಕಗಳು ನಾಲ್ಕನೆಯ ಆವೃತ್ತಿಯನ್ನೂ ಕಾಣುತ್ತಿರುವದು ಮಾಲೆಯ ಉಪಯುಕ್ತತೆಗೂ, ಜನಪ್ರಿಯತೆಗೂ ಸಾಕ್ಷಿಯಾಗಿದೆ.

ನಮ್ಮ ಪ್ರಾರ್ಥನೆಗೆ ಮನ್ನಣೆಕೊಟ್ಟು, ಉಪನ್ಯಾಸಕರು ಪುಸ್ತಕಗಳನ್ನು ಬರೆದುಕೊಡುತ್ತಿರುವದು ಶ್ಲಾಘ್ಯವಾದ ವಿಷಯ. ಇದಕ್ಕಾಗಿ ಈ ಲೇಖಕ ಮಹಾಶಯರಿಗೆ ವಿಶ್ವವಿದ್ಯಾಲಯದ ವಂದನೆಗಳನ್ನು ಸಂತೋಷದಿಂದ ಸಲ್ಲಿಸುತ್ತೇನೆ. ವಿಶ್ವವಿದಾಲಯ ಧನಸಹಾಯ ಆಯೋಗದವರು ನಮ್ಮ ಈ ಯೋಜನೆಯನ್ನು ಮೆಚ್ಚಿಕೊಂಡು ಉಪನ್ಯಾಸ ಶಿಬಿರಗಳಿಗೂ,

ಈ ಪುಸ್ತಿಕೆಗಳ ಪ್ರಕಟನೆಗೂ ಧನಸಹಾಯಮಾಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ಈ ಕಿರುಹೊತ್ತಿಗೆಗಳ ಪ್ರಸಾರ ನೂರ್ಮಡಿಗೊಂಡು ತನ್ಮೂಲಕ ನಮ್ಮ ಜನತೆಯ ಜ್ಞಾನಾಸಕ್ತಿ ಪುಷ್ಟಿಗೊಳ್ಳಲೆಂದು ಹಾರೈಸುತ್ತೇನೆ.

ಡಿ. ಸಿ. ಪಾವಟೆ
ಕುಲಪತಿ
ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ
೧—೨—೧೯೬೬

ಪ್ರಸ್ತಾವನೆ

ನಮ್ಮ ವಿಶ್ವವಿದ್ಯಾಲಯದ 'ವ್ಯಾಸಂಗ ವಿಸ್ತರಣ ಸಮಿತಿ'ಯು ೧೯೬೪ ರ ಬೇಸಗೆಯಲ್ಲಿ ಮೂಡಲಗಿ ಗ್ರಾಮ (ಬೆಳಗಾವಿ ಜಿಲ್ಲೆ) ದಲ್ಲಿ ಏರ್ಪಡಿಸಿದ ಉಪನ್ಯಾಸ ಶಿಬಿರದ ಅಂಗವಾಗಿ ನಾನು ಮಾಡಿದ ಭಾಷಣವೇ ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿದೆ.

ಮಾನವನಿಗೆ ಸ್ವಾಭಾವಿಕವಾಗಿಯೇ ಅಂಟಿಕೊಂಡಿರುವ ಅನೇಕ ದೋಷಗಳಲ್ಲಿ ಜಗಳಗಂಟತನವೂ ಒಂದು. ಆದರೆ ವಿಜ್ಞಾನವು ಅತಿಯಾಗಿ ಮುಂದುವರೆದಿರುವ ಈ ಇಪ್ಪತ್ತನೆಯ ಶತಮಾನದಲ್ಲಿ ದೇಶ ದೇಶಗಳಲ್ಲಿ ನಡೆಯಬಹುದಾದ ಜಗಳ (ಯುದ್ಧ)ಗಳು ಮಾನವ ಕುಲಕ್ಕೇ ವಿಪತ್ಕಾರಿಯಾಗಿ ಪರಿಣಮಿಸುವವು. ಇಂತಹ ಅನಿಷ್ಟಗಳನ್ನು ತೊಡೆದುಹಾಕಿ ಶಾಂತಿಯುತ ಸಹಜೀವನವನ್ನು ನಡೆಸಿ ಲೋಕಕಲ್ಯಾಣವನ್ನುಂಟುಮಾಡಲು ಇರುವ ಉಪಾಯಗಳಲ್ಲಿ ಜಾಗತಿಕ ಸರಕಾರ ಸ್ಥಾಪನೆಯೂ ಒಂದೆಂಬುದು ವಿಚಾರಶೀಲರನೇಕರ ಅಭಿಪ್ರಾಯ. ಇದರ ಬಗ್ಗೆ ಪರಿಚಯ ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಈ ಪುಸ್ತಕವನ್ನು ಪ್ರಕಟಿಸುವ ಅವಕಾಶ ಕಲ್ಪಿಸಿ ಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರವರ್ಗಕ್ಕೆ ನಾನು ಋಣಿ. ಹಸ್ತಪ್ರತಿಯನ್ನು ಸಿದ್ಧಗೊಳಿಸುವಲ್ಲಿ ನನಗೆ ಅನೇಕ ರೀತಿಯಲ್ಲಿ ನೆರವಾದ ಮಿತ್ರ ಶ್ರೀ ಎಸ್. ಬಿ. ನಾಯಕ ಇವರನ್ನು ನಾನು ಇಲ್ಲಿ ಸ್ಮರಿಸದಿರಲಾರೆ.

ಸರ್ವೋದಯ ದಿನ, ೧೯೬೬ ಸಿ. ವೀರಬಸಣ್ಣ
ಧಾರವಾಡ.

ಪರಿವಿಡಿ

ಜಾಗತಿಕ ಸರಕಾರ

೧. ಸರಕಾರ ಮತ್ತು ಜಾಗತಿಕ ಸರಕಾರ

ಸರಕಾರವೆಂದರೇನು ? ಈ ಮಾತನ್ನು ತಿಳಿಯಬೇಕಾದರೆ ನಾವು ಮೊದಲು 'ರಾಜ್ಯ' (State) ವೆಂದರೇನು ಎಂಬುದನ್ನು ತಿಳಿಯಬೇಕಾಗುವದು. 'ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ಕಾನೂನಿಗಾಗಿ ವ್ಯವಸ್ಥಿತವಾಗಿರುವ ಒಂದು ಜನಾಂಗವೇ ರಾಜ್ಯ ("A state is a people organised for law within a definite territory") ಎಂದು ವುಡ್ರೋವಿಲ್ಸನ್ ಅವರು ರಾಜ್ಯದ ವ್ಯಾಖ್ಯೆಯನ್ನು ಕೊಟ್ಟಿರುವರು. ಅವರು ಹೇಳುವಂತೆ, ಒಂದು ರಾಜ್ಯವೆಂದರೆ ಈ ನಾಲ್ಕು ಅಂಶಗಳಿರಬೇಕು —ಭೂಪ್ರದೇಶ, ಜನತೆ, ಸರಕಾರ ಮತ್ತು ಪರಮಾಧಿಕಾರ. ಇವುಗಳಲ್ಲಿ ಪರಮಾಧಿಕಾರವು ಬಹಳ ಮುಖ್ಯವಾದುದು. ಅದನ್ನು ಸ್ವಲ್ಪ ವಿಶದವಾಗಿ ತಿಳಿಯೋಣ.

ಪರಮಾಧಿಕಾರ

ಸಂಘಜೀವಿಯಾದ ಮಾನವನು ತನ್ನ ಸುಖ ಸಂತೋಷಕ್ಕಾಗಿ ಅನೇಕ ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾನೆ. ಕುಟುಂಬ, ಧಾರ್ಮಿಕ ಸಂಸ್ಥೆಗಳು, ಕ್ಲಬ್ಬುಗಳು, ಔದ್ಯೋಗಿಕ ಸಂಘಗಳು ಅವುಗಳಲ್ಲಿ ಕೆಲವು. 'ರಾಜ್ಯ'ವೂ ಸಹ ಒಂದು ಸಂಘ, ರಾಜಕೀಯ ಸಂಘ. ರಾಜಕೀಯ ಸಂಘವಾದ 'ರಾಜ್ಯ'ಕ್ಕೂ, ಇತರ ಸಂಘಗಳಿಗೂ ಒಂದು ಮುಖ್ಯ ವ್ಯತ್ಯಾಸವಿದೆ. ಅದೇನೆಂದರೆ, ಕಾನೂನುಗಳನ್ನು ಮಾಡಿ, ತನ್ನ ಕಕ್ಷೆಯಲ್ಲಿ ಬರುವ ಜನತೆಯ ಮೇಲೆ ಅವುಗಳನ್ನು ಜಾರಿಗೆ ತರುವ ಅಧಿಕಾರವನ್ನು 'ರಾಜ್ಯ'ವು ಹೊಂದಿದೆ. ಈ ಅಧಿಕಾರವನ್ನು ಮತ್ತಿನ್ನಾವ ಸಂಘವೂ ಹೊಂದಿರುವದಿಲ್ಲ. ಇದನ್ನೇ 'ಪರಮಾಧಿಕಾರ' ಎಂದು ಕರೆದಿರುವರು.

ಪರಮಾಧಿಕಾರಕ್ಕೆ (Sovereignty) ದ್ವಿಮುಖಗಳುಂಟು—ಆಂತರಿಕ ಮತ್ತು ಬಾಹ್ಯ. ಆಂತರಿಕ ಪರಮಾಧಿಕಾರವೆಂದರೆ, ಒಂದು ರಾಜ್ಯದ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ ಎಲ್ಲ ಜನರ ಅಥವಾ ಜನರ ಸಂಘಗಳ ಮೇಲೆ ಆದೇ ರಾಜ್ಯದ ಯಾವನಾದರೊಬ್ಬನು ಅಥವಾ ಹಲವರ ಸಮೂಹವು ವರಿಷ್ಠ ಅಧಿಕಾರವನ್ನು ಹೊಂದಿರುವದು ಎಂದರ್ಥ. ಬಾಹ್ಯ ಪರಮಾಧಿಕಾರವೆಂದರೆ, ಒಂದು ಸಮಗ್ರ ರಾಜ್ಯವು ಇತರ ಎಲ್ಲ ರಾಜ್ಯಗಳಿಂದಲೂ ಸಂಪೂರ್ಣವಾಗಿ ಸ್ವತಂತ್ರವಾಗಿರುವದು ಎಂದರ್ಥ.

ಸರಕಾರ

ಆಂತರಿಕ ಮತ್ತು ಬಾಹ್ಯ ಪರಮಾಧಿಕಾರವನ್ನು ಜಾರಿಗೆ ತರಲು, ಅಂದರೆ ಕಾನೂನುಗಳನ್ನು ಮಾಡಿ ಅವುಗಳನ್ನು ಜನತೆಯ ಮೇಲೆ ಚಲಾಯಿಸಲು ಮತ್ತು ರಾಜ್ಯವನ್ನು ರಕ್ಷಿಸಲು ಯಾವದೇ ರಾಜ್ಯದಲ್ಲಿ ಒಂದು ವರಿಷ್ಠ ಸಂಸ್ಥೆ ಇರಲೇಬೇಕು. ಇದನ್ನೇ ಸರಕಾರವೆಂದು ಕರೆಯುವರು. ಸರಕಾರವು ರಾಜ್ಯವನ್ನು ನಡೆಸುವ ಯಂತ್ರವೆಂದೇ ಹೇಳಬಹುದು; ಅದಿಲ್ಲದೆ ರಾಜ್ಯವು ಅಸ್ತಿತ್ವದಲ್ಲಿರಲು ಸಾಧ್ಯವೇ ಇಲ್ಲ. ಏಕೆಂದರೆ, "ಸರಕಾರವು, ಅಂತಿಮ ಸ್ವರೂಪದಲ್ಲಿ ಒಂದು ವ್ಯವಸ್ಥಿತ ಶಕ್ತಿ." ಸಾಮಾನ್ಯ ಬಳಕೆಯಲ್ಲಿ ನಾವು ಒಂದು ದೇಶದ ಸಚಿವ ಸಂಪುಟವನ್ನೇ ಆ ದೇಶದ ಸರಕಾರವೆಂದು ಕರೆಯುತ್ತೇವಾದರೂ (ಉದಾ:—ಇಂದಿನ ಭಾರತದ ಸಚಿವ ಸಂಪುಟವೇ ಭಾರತ ಸರಕಾರ) ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ, ಸರಕಾರವು ಸಚಿವ ಸಂಪುಟಕ್ಕಿಂತ ಎಷ್ಟೋ ಹಿರಿದೆಂಬುದು ವ್ಯಕ್ತವಾಗುತ್ತದೆ. ವಿಶಾಲ ದೃಷ್ಟಿಯಿಂದ ನೋಡಿದಲ್ಲಿ ಸರಕಾರವು ದೇಶದ ಒಳಗಿನ ಮತ್ತು ಹೊರಗಿನ ಶಾಂತಿ ಮತ್ತು ಭದ್ರತೆಯ ಜವಾಬ್ದಾರಿಯನ್ನು ಹೊತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಸರಕಾರವು, ಮೊದಲನೆಯದಾಗಿ ಸೇನಾಬಲವನ್ನೂ, ಎರಡನೆಯದಾಗಿ ಶಾಸನ ನಿರ್ಮಾಣ ಶಕ್ತಿಯನ್ನೂ, ಮೂರನೆಯದಾಗಿ ಆರ್ಥಿಕ ಶಕ್ತಿ ಅಥವಾ ದೇಶ ರಕ್ಷಣೆಗಾಗಿ ಮತ್ತು ದೇಶದ ಶಾಸನಗಳನ್ನು ಜಾರಿಗೆ ತರಲು ತಗಲುವ ವೆಚ್ಚವನ್ನು ಜನರಿಂದ ಪಡೆಯುವ ಅಧಿಕಾರವನ್ನೂ ಹೊಂದಿರಲೇಬೇಕು. ಒಟ್ಟಿಗೆ

ಹೇಳುವದಾದರೆ, ಸರಕಾರವು ಅದರ ಮೂರು ಅಂಗಗಳೆಂದು ಪರಿಗಣಿಸಲ್ಪಟ್ಟಿರುವ ಶಾಸನಾಧಿಕಾರ, ಕಾರ್ಯಾಧಿಕಾರ ಮತ್ತು ನ್ಯಾಯಾಧಿಕಾರಗಳನ್ನು ಪಡೆದಿರಲೇಬೇಕು.

ಶಾಸನಾಂಗ

ಆಧುನಿಕ ರಾಜ್ಯಗಳ ಪರಮಾಧಿಕಾರ ಚಲಾವಣೆಯಲ್ಲಿ ಮೇಲೆ ಹೇಳಿದ ಸರಕಾರದ ಮೂರೂ ಅಂಗಗಳೂ ಪ್ರಮುಖ ಪಾತ್ರವಹಿಸುವವು. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಈ ಅಂಗಗಳು ಯಾವಾಗಲೂ ನಿಕಟ ಸಂಬಂಧವನ್ನು ಹೊಂದಿರುತ್ತವೆಯಾದರೂ, ಎಲ್ಲ ಕಡೆಯಲ್ಲೂ ಈ ಮೂರೂ ಭಿನ್ನವಾಗಿಯೇ ಇರುವವು. ಶಾಸನ ನಿರ್ಮಾಣವೇ ಶಾಸನಾಂಗದ ಮುಖ್ಯ ಕಾರ್ಯ. ಶಾಸನ ನಿರ್ಮಾಣ ಕಾರ್ಯವು ಅದರ ಅನುಷ್ಠಾನಕ್ಕಿಂತ ಮೊದಲೇ ಆಗಬೇಕಾದುದರಿಂದ, ತರ್ಕಬದ್ಧವಾಗಿ ನೋಡಿದಲ್ಲಿ, ಶಾಸನಗಳನ್ನು ಜಾರಿಗೊಳಿಸುವ ಕಾರ್ಯಾಂಗ ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವ ನ್ಯಾಯಾಂಗಗಳಿಗಿಂತ, ಶಾಸನಾಂಗವು ಹೆಚ್ಚು ಮುಖ್ಯವೆಂಬುದು ವ್ಯಕ್ತವಾಗುವದು. ಆದ್ದರಿಂದಲೇ, ಅಮೇರಿಕದ ಪ್ರಭಾವಿ ಬರೆಹಗಾರರೊಬ್ಬರು ಶಾಸನಾಂಗವನ್ನು "ಪ್ರತಿಯೊಂದು ಸ್ವತಂತ್ರ ಸರಕಾರದ ಪ್ರಮುಖ ಮತ್ತು ಮೇಲಧಿಕಾರವುಳ್ಳ ಅಂಗ" ಎಂದು ಬಣ್ಣಿಸಿದ್ದಾರೆ. ಆಧುನಿಕ ರಾಜ್ಯಗಳಲ್ಲಿ ಶಾಸನಾಧಿಕಾರವು ಸಾಮಾನ್ಯವಾಗಿ ಎರಡು ಮನೆ (Houses) ಗಳುಳ್ಳ ಒಂದು ಶಾಸನಾಂಗದ ಕೈಯಲ್ಲಿರುತ್ತದೆ. ಇವುಗಳಲ್ಲಿ ಒಂದಾದರೂ ಜನರಿಂದ ಚುನಾಯಿತವಾದದ್ದಿರುತ್ತದೆ.

ಕಾರ್ಯಾಂಗ

'ಕಾರ್ಯಾಂಗ' ಎಂಬ ಮಾತನ್ನು ಸಾಮಾನ್ಯವಾಗಿ ಸಡಿಲು ಅರ್ಥದಲ್ಲಿ ಒಂದು ದೇಶದ ಪ್ರಧಾನ ಮಂತ್ರಿ ಅಥವಾ ಆ ಸರಕಾರದ ಅಧಿಕಾರವರ್ಗದವರಿಗಷ್ಟೇ ಅನ್ವಯಿಸುವದುಂಟು. ಈ ಅರ್ಥದಲ್ಲಿ 'ಆಡಳಿತ' ಎಂಬ ಮಾತು ಹೆಚ್ಚು ಸಮಂಜಸವೆನಿಸಬಹುದು. ಸಚಿವ ಸಂಪುಟವನ್ನೊಳಗೊಂಡು ಸರಕಾರದ ಮುಖ್ಯಸ್ಥ ಅಥವಾ ಶಾಸನಾಂಗದಿಂದ ಒಪ್ಪಿಗೆ ಪಡೆದ ಶಾಸನಗಳನ್ನು ಜಾರಿಗೆ ತರಲು ರಾಜ್ಯಘಟನೆಯನ್ವಯ ಯಾವ ಒಂದು ಮಂಡಳಿಯು ಅಧಿಕಾರ ಪಡೆದಿದೆಯೋ ಅದು ಎಂಬ ಅರ್ಥದಲ್ಲಿ ಕಾರ್ಯಾಂಗ ಎಂಬ ಮಾತನ್ನು ನಾವು ಇಲ್ಲಿ ಉಪಯೋಗಿಸುತ್ತಿದ್ದೇವೆ. ಪಾರಿಭಾಷಿಕವಾಗಿ ಶಾಸನಾಂಗವೇ ರಾಜ್ಯನೀತಿಯನ್ನು ಸೂಚಿಸುವ ಹೊಣೆ ಹೊತ್ತಿದೆಯಾದರೂ, ಆಧುನಿಕ ನಡೆವಳಿಕೆಯಲ್ಲಿ ಕಾರ್ಯಾಂಗವೇ ನಿರ್ದಿಷ್ಟ ಸೂಚನೆಗಳನ್ನಿತ್ತು ಶಾಸನಾಂಗದ ಅನುಮತಿಯನ್ನು ಪಡೆಯುವದು.

ಇಂತಹ ಒಂದು ಮಂಡಳಿಯು ಯಾವ ರಾಜ್ಯದಲ್ಲಾದರೂ ಇರಲೇಬೇಕು. ಒಂದು ರಾಷ್ಟ್ರೀಯ ಸಮಾಜದಂತಿರುವ ಆಧುನಿಕ ರಾಜ್ಯದಲ್ಲಂತೂ ಈ ಮಂಡಳಿ ಇರಬೇಕಷ್ಟೇ ಅಲ್ಲ, ಅದರ ಮುಖ್ಯಸ್ಥರು ವ್ಯಾಪಕ ಅಧಿಕಾರವನ್ನೂ ಪಡೆದಿರಬೇಕು. ಶಾಸನಾಂಗ ಮತ್ತು ಕಾರ್ಯಾಂಗಗಳ ರಚನೆಯಲ್ಲಿ ಇರುವ ಒಂದು ಮಹತ್ತರ ವ್ಯತ್ಯಾಸವೆಂದರೆ ಅವುಗಳಲ್ಲಿರುವ ಸದಸ್ಯರ ಸಂಖ್ಯೆಯಲ್ಲಿ ಮಾತ್ರ. ದೇಶದ ಜನತೆಯ ಹಿತಕ್ಕೆ ಸಂಬಂಧಪಟ್ಟ

ಅನೇಕ ವಿಷಯಗಳನ್ನು ಚರ್ಚಿಸಿ ನಿರ್ಣಯ ಕೈಕೊಳ್ಳುವ ಶಾಸನಾಂಗವು ಸಂಖ್ಯಾದೃಷ್ಟಿಯಿಂದ ಒಂದು ದೊಡ್ಡ ಸಭೆ; ಆದರೆ ಶಾಸನಾಂಗದ ತೀರ್ಮಾನಗಳನ್ನು ಶ್ರದ್ಧೆಯಿಂದ ಅಮಲಿನಲ್ಲಿ ತರಲು ಇರುವ ಅನೇಕ ಇಲಾಖೆಗಳ ಮುಖ್ಯಸ್ಥರಾದ ಸಚಿವರನ್ನು ಒಳಗೊಂಡಿರುವ ಕಾರ್ಯಾಂಗವು ಒಂದು ಚಿಕ್ಕ ಮಂಡಳ ಮಾತ್ರ. ಕೆಲವು ಕಡೆ ಕಾರ್ಯಾಂಗವು ಶಾಸನಾಂಗದ ಅಂಕೆಯಲ್ಲಿರುವದು. ಮತ್ತೆ ಕೆಲವೆಡೆ ಅದು ಶಾಸನಾಂಗದಿಂದ ಪ್ರತ್ಯೇಕವಾಗಿರುವದು.

ನ್ಯಾಯಾಂಗ

ತನ್ನ ಅನುಮತಿಯ ಮೇರೆಗೆ ಅಸ್ತಿತ್ವದಲ್ಲಿರುವ, ಅಥವಾ ಶಾಸನಾಂಗವು ಮಾಡಿದ ಕಟ್ಟಳೆಗಳನ್ನು ಉಲ್ಲಂಘಿಸುವವರನ್ನು ಶಿಕ್ಷೆಗೆ ಗುರಿಮಾಡಲು ಇರುವ ಇಲಾಖೆಯೇ ನ್ಯಾಯಾಂಗ. ಒಬ್ಬ ತಜ್ಞನು ಹೇಳುವಂತೆ "ಜಾರಿಯಲ್ಲಿರುವ ಕಾನೂನು-ಗಳನ್ನು ವ್ಯಕ್ತಿಗಳಿಗೆ ಅನ್ವಯಿಸುವುದರ ಬಗ್ಗೆ ನಿರ್ಣಯ ಕೈಕೊಳ್ಳುವದೇ'' ನ್ಯಾಯಾಂಗದ ಕೆಲಸ. ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಕಾರ್ಯ ಮಾಡುವ ನ್ಯಾಯಾ-ಧೀಶರ ಒಂದು ತಂಡವನ್ನೇ ನ್ಯಾಯಾಂಗವು ಹೊಂದಿರುತ್ತದೆ. ಈ ನ್ಯಾಯಾಧೀಶರ ಅಧಿಕಾರವು ದೇಶದೇಶಕ್ಕೆ ಭಿನ್ನವಾಗಿದೆ. ಇಂಗ್ಲಂಡಿನಲ್ಲಿರುವಂತೆ, ಕೆಲವು ದೇಶಗಳಲ್ಲಿ ಶಾಸನಾಂಗವು ವಿಧಿಸಿದ ಎಲ್ಲ ಕಾನೂನುಗಳನ್ನೂ. ಇಂಥ ಕಾನೂನು-ಗಳು ನ್ಯಾಯಾಧೀಶರು ಕೊಟ್ಟಿರಬಹುದಾದ ಅನೇಕ ತೀರ್ಪು-ಗಳಿಗೆ ಪ್ರತಿಕೂಲವಿದ್ದರೂ, ನ್ಯಾಯಾಂಗವು ಆಚರಣೆಗೆ

ತರಲೇಬೇಕು. ಮತ್ತೆ ಹಲವು ಕಡೆಗಳಲ್ಲಿ, ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿಯಂತೆ, ಶಾಸನಾಂಗವು ವಿಧಿಸಿದ ಕಾಯಿದೆಯು ರಾಜ್ಯಘಟನೆಯನ್ನಯ ಇಲ್ಲವೆಂದು ಸಿದ್ಧಪಡಿಸಿ ವರಿಷ್ಠ ನ್ಯಾಯಾಲಯವು ಅವುಗಳ ಆಚರಣೆಯನ್ನು ಬಹಿಷ್ಕರಿಸಲೂ ಬಹುದು. ಅನೇಕ ದೇಶಗಳಲ್ಲಿ ನ್ಯಾಯಾಂಗವು ಒಂದು ರಚನಾತ್ಮಕ ಶಕ್ತಿಯೇ ಆಗಿದೆ. ಏಕೆಂದರೆ, ಅದು ತನ್ನ ಕಾರ್ಯಪಥದಲ್ಲಿಯೇ (ಅಂದರೆ ನ್ಯಾಯಾಧೀಶರು ಕೊಡುವ ತೀರ್ಪುಗಳಿಂದ) ಕಾನೂನುಗಳನ್ನು ವಿಕಾಸಗೊಳಿಸುತ್ತದೆ.

ಜಾಗತಿಕ ಸರಕಾರ

ಬಾಹ್ಯವಾಗಿ, ಹೊರಗಿನ ಶತ್ರುಗಳಿಂದ ದೇಶವನ್ನು ರಕ್ಷಿಸಿ, ಆಂತರಿಕವಾಗಿ ಶಾಸನಗಳನ್ನು ರಚಿಸಿ ಅವುಗಳನ್ನು ಜನತೆಯ ಮೇಲೆ ಜಾರಿಗೆ ತಂದು, ದೇಶದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳಲು, ತನ್ನ ಮೂರು ಅಂಗಗಳಾದ ಶಾಸನಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಮೂಲಕ ಕಾರ್ಯಮಾಡುತ್ತಿರುವ ಸಂಸ್ಥೆಯೇ ಸರಕಾರ ಎಂಬುದನ್ನು ಮೇಲೆಯೇ ತಿಳಿದಿದ್ದೇವೆ. ಜಗತ್ತಿನಲ್ಲಿ ಇಂದು ಅನೇಕ ದೇಶಗಳೂ ಮತ್ತು ಸರಕಾರಗಳೂ ಇವೆಯಾದರೂ ಶಾಂತಿ ಮತ್ತು ಭದ್ರತೆಗಳು ಮಾತ್ರ ಇಲ್ಲ. ಇದಕ್ಕೆ ಕಾರಣ ದೇಶದೇಶಗಳ-ಲ್ಲಿರುವ ಹಲವು ರೀತಿಯ ಅನೇಕ ಘರ್ಷಣೆಗಳು. ಇಂತಹ ಘರ್ಷಣೆಗಳು ಜಗದ ಆದಿಯಿಂದಲೂ ಇದ್ದುವಾದರೂ, ಅವುಗಳಿಂದ ಜಗತ್ತೇ ನಾಶವಾಗುವದೆಂಬ ಭಯವಾಗಲೀ, ಅದಕ್ಕೆ ಕಾರಣವಾಗಲೀ ಹಿಂದೆಂದೂ ಇರಲಿಲ್ಲ. ಆದರೆ "ಅಣುಯುಗ"

ದಲ್ಲಿರುವ ಇಂದಿನ ಜನತೆ ಆ ಬಗ್ಗೆ ವಿಚಾರಮಾಡಬೇಕಾಗಿದೆ. ಮತ್ತೊಂದು ಜಾಗತಿಕ ಯುದ್ಧವಾದಲ್ಲಿ ಜಗತ್ತೇ ನಾಶವಾಗುವದೆಂಬ ಮಾತನ್ನು, ಈ ಶತಮಾನದಲ್ಲಿ ನಡೆದ ಎರಡು ಮಹಾಯುದ್ಧಗಳಿಂದಾದ ಹಾನಿಯನ್ನು ತಿಳಿದ, ಮತ್ತು ಜಗತ್ತು ಇಂದು ಹೊಂದಿರುವ ಶಸ್ತ್ರಾಸ್ತ್ರಗಳ ಮಾರಕಶಕ್ತಿಯು ಕಲ್ಪನೆಯಿರುವ ಯಾವನೇ ಒಬ್ಬ ಮನುಷ್ಯನು ಸ್ವಲ್ಪವೂ ಸಂಶಯವಿಲ್ಲದೆ ಒಪ್ಪಿಕೊಳ್ಳುವನು. ಹೀಗಿರುವದರಿಂದ, ಜಗತ್ತನ್ನು ಉಳಿಸಬೇಕಾದರೆ ದೇಶ-ದೇಶಗಳಲ್ಲಿಯ ವೈರವನ್ನು ತೊಡೆದು ಹಾಕಲೇಬೇಕು. ಆದರೆ ಇದೊಂದು ದೊಡ್ಡ ಸಮಸ್ಯೆ. ಜಾಗತಿಕ ಸರಕಾರ ರಚನೆಯೇ ಈ ಸಮಸ್ಯೆಗೆ ಉಚಿತ ಪರಿಹಾರ.

ಜಾಗತಿಕ ಸರಕಾರವು ಅಸ್ತಿತ್ವದಲ್ಲಿ ಬರುವದೇ ಆದರೆ ಅದು ಹೊಂದಬೇಕಾದ ರೂಪರಚನೆಯ ಬಗ್ಗೆ ಹಲವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಎರಡನ್ನು ಮಾತ್ರ ನಾವು ಇಲ್ಲಿ ವಿವರಿಸಬಹುದು. ಎಲ್ಲ ರಾಷ್ಟ್ರೀಯ ವ್ಯಕ್ತಿತ್ವವನ್ನೂ ಬಿಟ್ಟುಕೊಟ್ಟ ಒಂದು ಜಾಗತಿಕ ರಾಜ್ಯ (World State) ಸ್ಥಾಪನೆಯನ್ನು ಹಲವರು ಸೂಚಿಸಿರುವರು. ಇದಕ್ಕಾಗಿ ಒಂದು ಸನದನ್ನು (Charter) ತಯಾರಿಸುವುದೇನೋ ಸುಲಭ; ಆದರೆ ಇಂತಹ ಒಂದು ಘಟನೆ ಎಷ್ಟೇ ನಿಸ್ಪೃಹ ಮನಸ್ಸಿನಿಂದ ತಯಾರಿಸಲ್ಪಟ್ಟರೂ, ಯಾವ ಜನತೆಗಾಗಿ ರೂಪಿತವಾಗಿದೆಯೋ ಅವರ ಅಭೀಷ್ಟವನ್ನು ಪೂರೈಸದಿದ್ದರೆ, ನಾವು ಇತಿಹಾಸದಲ್ಲಿ ಅನೇಕ ಬಾರಿ ಕಾಣು ವಂತೆ, ಅದು ಒಂದು ನಿರುಪಯುಕ್ತ ಚೀಟಿಯಾಗಿ ಪರಿಣಮಿಸು-

ವದು. ಹೀಗಿರುವಾಗ ಜಾಗತಿಕ ರಾಜ್ಯದಂತಹ ಅತಿ ಕೇಂದ್ರೀಕೃತವಾದ ಮತ್ತು ವ್ಯಕ್ತಿಸ್ವರೂಪವಿಲ್ಲದ ಸರಕಾರವು ಉಪಯೋಗವಾಗುವದಿಲ್ಲವೆಂಬುದು ನಿಶ್ಚಿತ. ಅಷ್ಟೇ ಅಲ್ಲ ಇಂತಹ ಒಂದು ಸರಕಾರವು ಅಂತರರಾಷ್ಟ್ರೀಯ ಯುದ್ಧಸಂಭವವನ್ನು ತಡೆದು ಹಾಕುವುದಾದರೂ, ಅಷ್ಟೇ ಗಂಡಾಂತರಕಾರಿಯಾದ ಅಂತರ್ಯುದ್ಧಗಳಿಗೆ ಎಡೆಕೊಡುವದು ಸಹಜ. ಶಾಂತಿ ಮತ್ತು ಭದ್ರತೆಗಳನ್ನು ಸಾಧಿಸುವುದಕ್ಕಾದರೂ ಇಂತಹ ಕೇಂದ್ರೀಕೃತ ಜಾಗತಿಕ ರಾಜ್ಯದ ಅವಶ್ಯಕತೆಯಿಲ್ಲ.

ಕೂಲಂಕಷವಾಗಿ ವಿಚಾರ ಮಾಡಿದಲ್ಲಿ, ಜಗತ್ತನ್ನು ಹತೋಟಿಯಲ್ಲಿಡುವ ಗುರಿ ಸಾಧಿಸಲು ಬೇಕಾದದ್ದು ಭೂಪ್ರದೇಶಗಳ ಏಕೀಕರಣವಲ್ಲ, ಕರ್ತವ್ಯಗಳ ಆಂಶಿಕ ಅನ್ಯೋನ್ಯತೆ ಮಾತ್ರ ಎಂಬ ಅಂಶ ವೇದ್ಯವಾಗುವದು. ಅಂತರ ರಾಷ್ಟ್ರೀಯ ವಿಚಾರಗಳಿಗೆ ಸಂಯುಕ್ತ ರಾಷ್ಟ್ರತತ್ವ (Federalism) ವನ್ನು ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಈ ಅನ್ಯೋನ್ಯತೆಯನ್ನು ಸಂಪೂರ್ಣವಾಗಿ ಪಡೆಯಬಹುದಾಗಿದೆ. ಆದರೆ ಸಂಯುಕ್ತರಾಷ್ಟ್ರತತ್ವವು ಒಂದು ಪ್ರಗತಿಪರ ರಾಜಕೀಯ ಪದ್ಧತಿಯಾದ್ದರಿಂದ ಬರಿಯ ಹಾರೈಕೆಯಿಂದಾಗಲೀ ಅಥವಾ ಶುಷ್ಕತರ್ಕದಿಂದಾಗಲೀ ಕಾರ್ಯವು ಸಾಗದು. ಮುಂದುವರಿದ ರಾಷ್ಟ್ರಗಳು ಈ ತತ್ವವನ್ನು ತಾಳ್ಮೆಯಿಂದ ಪೋಷಿಸಿ, ಪ್ರೇರಿಸಿ ಅಳವಡಿಸಿಕೊಳ್ಳಲು ಯತ್ನಿಸಬೇಕು. ಈ ಯೋಜನೆಯಂತೆ ರಾಷ್ಟ್ರಸರಕಾರಗಳು ತಮ್ಮ ಪರಮಾಧಿಕಾರದ ಕೊಂಚ ಭಾಗವನ್ನು ಕಳೆದುಕೊಳ್ಳುವವು.

ಹೀಗೆ, ರಾಷ್ಟ್ರಗಳು ಹೊಂದಿರುವ ಬಾಹ್ಯ ಪರಮಾಧಿಕಾರವನ್ನು ತಾನು ಪಡೆದುಕೊಂಡ ಒಂದು ರಾಷ್ಟ್ರಾತೀತ ಸಂಸ್ಥೆ (Supranational authority) ಯ ಸಂಸ್ಥಾಪನೆಯೇ ನಮ್ಮ ಅಂತಿಮ ಗುರಿಯಾಗಬೇಕೇ ಹೊರತು ಒಂದು ಅಂತರರಾಷ್ಟ್ರೀಯ ಸಂಸ್ಥೆಯನ್ನು ರಚಿಸುವದಲ್ಲ. ರಾಷ್ಟ್ರ ರಾಜ್ಯ (nation-state) ದ ಪರಮಾಧಿಕಾರವು, ಹೆಚ್ಚೆಂದರೆ, ಒಂದು ಭ್ರಾಂತಿಯ ಅಸ್ತ್ರ ಮಾತ್ರ. ಇದಿಲ್ಲದೆ ಅನುಭವಿಸಬಹುದಾದ ರಾಜಕೀಯ ಸುಖ ಸಂತೋಷ ಬೇಕಾದಷ್ಟಿವೆ. ನೆರೆಹೊರೆಯವರೊಡನೆ ತನಗೆ ಬೇಕಾದ ಹಾಗೆ ತಾನು ವರ್ತಿಸಬಹುದು ಎಂಬ ಅರ್ಥವುಳ್ಳ ಪರಮಾಧಿಕಾರವು ಅದರ ಬಾಹ್ಯ ಸ್ವರೂಪದಲ್ಲಿ ರಾಷ್ಟ್ರಗಳಿಗೆ ನಿಜವಾಗಿಯೂ ಬೇಕಾಗಿಲ್ಲ. ರಾಷ್ಟ್ರಗಳಿಗೆ ಬೇಕಾದುದು ತಮ್ಮ ಸ್ಥಳೀಯ ವ್ಯವಹಾರಗಳನ್ನು ಹಿಡಿತ-ದಲ್ಲಿಟ್ಟುಕೊಳ್ಳಲು ನೆರವಾಗುವ ಸ್ವಾತಂತ್ರ್ಯ (autonomy) ಮಾತ್ರ. ಅಂತೂ ನಾವು ಇಷ್ಟು ಮಾತ್ರ ಹೇಳಬಹುದು— ರಾಷ್ಟ್ರೀಯತೆಯು ಒಳ್ಳೆಯ ಮತ್ತು ಕೆಟ್ಟ ಎರಡೂ ಮುಖಗಳನ್ನು ಹೊಂದಿದೆ. ನಿರಂತರ ಅಂತರರಾಷ್ಟ್ರೀಯ ಶಾಂತಿಯನ್ನು ಸಾಧಿಸುವ ಸಲುವಾಗಿ, ಮಾನವಜನಾಂಗಕ್ಕೆ ತನ್ನ ಉಪ-ಯುಕ್ತತೆಯು ಸ್ವಲ್ಪವೂ ಕಡಮೆಯಾಗದಂತೆ, ರಾಷ್ಟ್ರರಾಜ್ಯವು ತನ್ನ ಕುತ್ಸಿತ ಗುಣಗಳನ್ನು ತ್ಯಜಿಸುವದು ಸಾಧ್ಯವಿದೆ.

ನ್ಯಾಯಪರಿಪಾಲನೆ ಮತ್ತು ಶಿಸ್ತಿಗಾಗಿ ಜನರನ್ನು ಹೇಗೆ ಒಂದು ಸಂಸ್ಥೆ ಅಥವಾ ಸರಕಾರದ ಅಂಕೆಯಲ್ಲಿಟ್ಟರುವರೋ, ಅದೇ ರೀತಿ ದೇಶಗಳನ್ನು ಯಾವುದಾದರೊಂದು ಸಾರ್ವಜನಿಕ

ಸಂಸ್ಥೆಯು ಅಂಕೆಯಲ್ಲಿಡುವ ಪ್ರಯತ್ನ ಇಪ್ಪತ್ತನೆಯ ಶತಮಾನದ ಹೊಸ ಕಲ್ಪನೆಯೇನಲ್ಲ. ಇಂತಹ ವಿಚಾರಗಳು, ಪ್ರಾರಂಭದಲ್ಲಿ, ಕೆಲ ಪ್ರಾಜ್ಞರ ಕಲ್ಪನೆಗಷ್ಟೇ ಸೀಮಿತವಾಗಿದ್ದುವಾದರೂ, ಅನೇಕರು ತಮ್ಮ ಬರೆಹಗಳ ಮೂಲಕ ಈ ಬಗ್ಗೆ ಜನತೆಯಲ್ಲಿ ತಿಳಿವಳಿಕೆಯನ್ನುಂಟುಮಾಡಲು ಯತ್ನಿಸಿರುವರು. ಹದಿನಾಲ್ಕನೆ ಶತಮಾನದಲ್ಲಿ ಪೆರಿಡ್ಯೂಬಾ (Pierre Dubois) ಎಂಬಾತನೂ, ಹದಿನಾರನೆಯ ಶತಮಾನದಲ್ಲಿ ಇರಾಸ್ಮಸ್ (Erasmus) ಎಂಬಾತನೂ, ಹದಿನೇಳನೆಯ ಶತಮಾನದಲ್ಲಿ ಹೆನ್ರಿ ಆಫ್ ನವರೆ (Henry of Navarre) ಎಂಬಾತನೂ, ಹದಿನೆಂಟನೆಯ ಶತಮಾನದಲ್ಲಿ ಅಬ್ಬೆ ಡಿ. ಸೇಂಟ್ ಪೀಯರ್ (Abbe de st Pierre), ರೂಸೋ (Rousseau) ಮತ್ತು ಕಾಂಟ್ (Kant) ಎಂಬವರೂ, ದೇಶಗಳನ್ನೊಳಗೊಂಡ ಸಾರ್ವಜನಿಕ ಸಂಸ್ಥೆಯೊಂದರ ಬಗ್ಗೆ ವಿಚಾರಿಸಿದ್ದರು.

ಆದರೂ ಈ ಸಂಸ್ಥೆ ಪ್ರಾಜ್ಞರ ಕಲ್ಪನೆಯಿಂದ ಕೃತಿಗಿಳಿದುದು ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ. ಅಂದಿನಿಂದ ಇಂದಿನವರೆಗೆ ಜಗತ್ತು ಇಂತಹ ಮೂರು ಸಂಸ್ಥೆಗಳನ್ನು ಕಂಡಿದೆ. ಹೋಲಿ ಅಲಾಯನ್ಸ್, ಯುಕ್ತ ರಾಷ್ಟ್ರ ಸಂಘ (ಲೀಗ್ ಆಫ್ ನೇಷನ್ಸ್) ಮತ್ತು ಸಂಯುಕ್ತ ರಾಷ್ಟ್ರ ಸಂಸ್ಥೆ (ಯು. ಎನ್. ಒ.)— ಈ ಮೂರೂ ಸಂಸ್ಥೆಗಳನ್ನು ಸರಕಾರವೆಂದು ಪರಿಗಣಿಸಲು ಸಾಧ್ಯವಿಲ್ಲವಾದರೂ — ಅವು ಸರ್ವಸ್ವತಂತ್ರ ರಾಷ್ಟ್ರಗಳು, ಸ್ವಪ್ರೇರಣೆಯಿಂದ ಮಾಡಿಕೊಂಡ

ಸಂಘಗಳು ಮಾತ್ರ-ಜಾಗತಿಕ ಸರಕಾರ ರಚನೆಯ ದಿಶೆಯಲ್ಲಿ ಇವು ಪ್ರಮುಖ ಹೆಜ್ಜೆಗಳೆಂದೇ ಹೇಳಬಹುದು. ಈ ಸಂಸ್ಥೆಗಳ ಇತಿಹಾಸವನ್ನೂ ಮತ್ತು ಅವು ಮುಟ್ಟಿದ, ಮುಟ್ಟಬೇಕೆಂದಿದ್ದ ಗುರಿಯನ್ನೂ ಸ್ಥೂಲವಾಗಿ ಮುಂದಿನ ಪುಟಗಳಲ್ಲಿ ಪರಿಚಯ ಮಾಡಿಕೊಡಲಾಗಿದೆ.

———

೧. ಯುರೋಪದಲ್ಲಿ ಪ್ರಗತಿಪರ ವಿಚಾರಗಳ ಉದಯ

ಕ್ರಿ. ಶ. ೧೭೮೯ ರಿಂದ ೧೮೧೫ ರ ವರೆಗಿನ ಅವಧಿಯಲ್ಲಿ ಯುರೋಪದ ಎಲ್ಲ ಜನರ ದೃಷ್ಟಿಯು ಒಂದೇ ರಾಜ್ಯದ ಮೇಲೆ, ಒಂದೇ ಘಟನೆಯ ಮೇಲೆ ಮತ್ತು ಒಬ್ಬನೇ ವ್ಯಕ್ತಿಯ ಮೇಲೆ ಕೇಂದ್ರೀಕೃತವಾಗಿತ್ತು. ಫ್ರಾನ್ಸ್, ಫ್ರಾನ್ಸದ ಮಹಾಕ್ರಾಂತಿ ಮತ್ತು ನೆಪೋಲಿಯನ್ ಇವೆ ಆ ಮೂರು. ಈ ಅವಧಿಯಲ್ಲಿ ಯುರೋಪದಲ್ಲಿ ನಡೆದ ಪ್ರತಿಯೊಂದು ಮುಖ್ಯ ಘಟನೆಗೂ ಫ್ರಾನ್ಸೇ ಕಾರಣವಾಗಿತ್ತು. ಆದ್ದರಿಂದ ಈ ಕಾಲವನ್ನು "ಯುರೋಪದಲ್ಲಿ ಫ್ರಾನ್ಸದ ಪ್ರಾಬಲ್ಯದ ಕಾಲ" ಎಂದು ಕರೆಯಬಹುದು.

ಫ್ರಾನ್ಸದ ಮಹಾಕ್ರಾಂತಿ

೧೭೮೯ ರಲ್ಲಿ ಫ್ರಾನ್ಸದಲ್ಲಿ ಪ್ರಾರಂಭವಾದ ಕ್ರಾಂತಿಯೊಂದಿಗೆ ಅನೇಕ ಹೊಸ ವಿಚಾರಗಳು ಉದಿಸಿದವು. ದೇಶದ ಜನರ ಬಡತನ, ರಾಜನ ದಬ್ಬಾಳಿಕೆ, ರಾಜನ ವಿಲಾಸ ಲೋಲುಪತೆ, ರಾಜ್ಯದ ಬೊಕ್ಕಸವೆಲ್ಲ ರಾಜನ ವಿಲಾಸಕ್ಕಾಗಿ ಮತ್ತು ಪ್ರಭಾವೀ ವರ್ಗಗಳ ಅನುಕೂಲಕ್ಕಾಗಿ ವಿನಿಯೋಗವಾಗುತ್ತಿದ್ದುದು, ಎಲ್ಲಕ್ಕೂ ಹೆಚ್ಚಾಗಿ ರೂಸೊ (Rousseau) ಎಂಬ ಮಹಾ ವ್ಯಕ್ತಿಯು ತನ್ನ ಬರವಣಿಗೆಗಳಿಂದ ಮತ್ತು ಸಿದ್ಧಾಂತಗಳಿಂದ ಬೀರಿದ ಪ್ರಭಾವ ಇವೇ ಫ್ರಾನ್ಸದಲ್ಲಿ ಕ್ರಾಂತಿಯಾಗಲು ಕಾರಣಗಳು.

ಆ ದಿನಗಳ ಫ್ರಾನ್ಸದ ಸಾಮಾನ್ಯ ಮನುಷ್ಯನ ಬಡತನ, ಆತನು ಅನುಭವಿಸುತ್ತಿದ್ದ ಕಷ್ಟಕಾರ್ಪಣ್ಯಗಳು ಇವನ್ನು ಕುರಿತು ಕಾರ್ಲೈಲನು ಹೀಗೆ ಬರೆದಿದ್ದಾನೆ— ‘‘ಅವರಲ್ಲಿ (ಸಾಮಾನ್ಯಜನರು) ಮೂರನೆ ಒಂದು ಭಾಗದಷ್ಟು ಜನರಿಗೆ ವರ್ಷದ ಮೂರನೆಯ ಒಂದು ಭಾಗದಲ್ಲಿ, ತಿನ್ನಲು ಮೂರನೆಯ ದರ್ಜೆಯ ಬಟಾಟೆಗಳಲ್ಲದೆ ಮತ್ತೇನೂ ಸಿಗುತ್ತಿರಲಿಲ್ಲ.” “ಅವರಲ್ಲಿ ಅನೇಕರು ತೌಡಿನ ಅಥವಾ ಕುದಿಸಿದ ಹುಲ್ಲಿನ ಊಟದಿಂದಲೇ ತೃಪ್ತರಾಗಬೇಕಾಗುತ್ತಿತ್ತು” ಎಂದು ಮತ್ತೊಬ್ಬನು ಬರೆದಿದ್ದಾನೆ. ಆರ್ಥರ್‌ಯಂಗ್ ಎಂಬ ಒಬ್ಬ ಇಂಗ್ಲೀಷ್ ಪ್ರವಾಸಿಯು ಕ್ರಾಂತಿಯ ಹಿಂದಿನ ದಿನಗಳಲ್ಲಿ ಫ್ರಾನ್ಸದಲ್ಲಿ ತಾನು ಕಂಡ ಜನತೆಯ ಬಗ್ಗೆ, “ದೈವವು, ೮ಣ ಹದ್ದುಗಳ ತುತ್ತಾಗಲೆಂದೇ ಪಾರಿವಾಳಗಳನ್ನು ಸೃಷ್ಟಿಸಿರುವಂತೆ, ಪೀಡಕ ನಿರಂಕುಶ ಪ್ರಭುಗಳ ತುತ್ತಿಗಾಗಿಯೇ ಜನತೆಯನ್ನು ಸೃಷ್ಟಿಸಿತೋ!” ಎಂದು ಉದ್ಗಾರ ತೆಗೆದಿದ್ದಾನೆ.

ಫ್ರಾನ್ಸ ದೇಶದಲ್ಲಿ ಜನತೆಯನ್ನು ವಿಶೇಷ ಹಕ್ಕುಳ್ಳವರು (privileged) ಮತ್ತು ಸಾಮಾನ್ಯರು (unprivileged) ಎಂದು ವಿಭಾಗಿಸಲಾಗಿದ್ದಿತು. ಶ್ರೀಮಂತರು (nobles) ಮತ್ತು ಪಾದರಿಗಳು (clergy) ಮೊದಲನೆಯ ವರ್ಗದವರಾಗಿದ್ದು, ಅವರು ಸರಕಾರಕ್ಕೆ ಯಾವ ಕರವನ್ನೂ ಕೊಡಬೇಕಾಗಿರಲಿಲ್ಲ. ಎರಡನೆಯ ವರ್ಗಕ್ಕೆ ಸೇರಿದ ಸಾಮಾನ್ಯರೇ ಸರಕಾರಕ್ಕೆ ಬೇಕಾದ ಹಣವನ್ನೆಲ್ಲ ತೆರಿಗೆಯ ರೂಪದಲ್ಲಿ ಒದಗಿಸಬೇಕಾಗಿತ್ತು. ಇಂತಹ ಸ್ಥಿತಿ ಫ್ರಾನ್ಸದಲ್ಲಿ ಎಷ್ಟೋ ಕಾಲ ನಡೆದುಬಂತು.

ಈ ಅವ್ಯವಸ್ಥೆ ಇಲ್ಲಿಗೇ ಮುಗಿಯಲಿಲ್ಲ. ರಾಜನ ಬೊಕ್ಕಸದ ಹಣವನ್ನು ಮನಬಂದಂತೆ ವಿನಿಯೋಗಿಸುತ್ತಿದ್ದನು. ರಾಜಧಾನಿ ಪ್ಯಾರಿಸ್ ನಗರದಿಂದ ಹದಿನಾಲ್ಕು ಮೈಲು ದೂರವಿರುವ ವರ್ಸಾಯಿಲ್ಸ್ (Versailles) ಎಂಬಲ್ಲಿ ಅರಮನೆಗಳು, ಸೌಧಗಳು, ತೋಟಗಳು, ಕೋಟೆ–ಕೊತ್ತಲಗಳು ಉಳ್ಳ ಒಂದು ನಗರವನ್ನೇ ನಿರ್ಮಿಸಿಕೊಂಡು ರಾಜನು ವಿಲಾಸದಲ್ಲಿ ತೇಲಾಡುತ್ತಿದ್ದನು. ದೊರೆಯ ವಿಲಾಸಕ್ಕೆ ಅಥವಾ ಆತನ ರೀತಿ ನೀತಿಗಳಿಗೆ ಅಡ್ಡಬಂದ ಯಾರನ್ನೇ ಆಗಲಿ ಬಂಧಿಸಿ ವಿಚಾರಣೆಯಿಲ್ಲದೆ ಅನಿಯಮಿತವಾಗಿ 'ಬ್ಯಾಸ್ಟೈಲ್' (Bastille) ಎಂಬ ಕಾರಾಗೃಹದಲ್ಲಿ ಇಡಲಾಗುತ್ತಿತ್ತು. ಜನತೆಯ ಕಲ್ಯಾಣದ ಕೆಲಸಗಳಿಗಂತೂ ದೊರೆಯು ಗಮನವನ್ನೇ ಕೊಡುತ್ತಿರಲಿಲ್ಲ. ಅಂದರೆ ಆಗಿನ ಸರಕಾರವು ತಾನು ನಿಜವಾಗಿಯೂ ಮಾಡಬೇಕಾದ ಕೆಲಸಗಳನ್ನಷ್ಟು ಬಿಟ್ಟು ಏನೆಲ್ಲಾ ಕಾರ್ಯವನ್ನು ಮಾಡುತ್ತಿತ್ತು.

ಸಾಮಾನ್ಯ ಜನರಿಗೆ ಆಗುತ್ತಿದ್ದ ಈ ಅನ್ಯಾಯಗಳ ವಿರುದ್ಧ ವಾಲ್ಟೇರ್ (Voltaire), ಮಾಂಟೆಸ್ಕ್ಯೂ (Monte Squeau), ದಿದಿರೊ (Diderot) ರೂಸೋ (Rousseau) ಮೊದಲಾದ ಅನೇಕರು ತಮ್ಮ ಕ್ರಾಂತಿಕಾರೀ ಬರವಣಿಗೆಯ ಮೂಲಕ ಪ್ರತಿಭಟಿಸಿದರು; ಜನತೆಯಲ್ಲಿ ವಿಚಾರವಾದವನ್ನು ಪ್ರಾರಂಭಿಸಿದರು. ಇವರಲ್ಲಿ ಅತಿ ಮುಖ್ಯನಾದ ರೂಸೋನ ಬರವಣಿಗೆಯೇ ಫ್ರಾನ್ಸದ ಮಹಾಕ್ರಾಂತಿಯನ್ನೆಬ್ಬಿಸಿತು ಎಂದರೆ ತಪ್ಪಾಗದು. "ರೂಸೋ ಇಲ್ಲದಿದ್ದರೆ ಫ್ರಾನ್ಸದ ಕ್ರಾಂತಿಯೇ

ಆಗುತ್ತಿರಲಿಲ್ಲ" ಎಂದು ನೆಪೋಲಿಯನ್ ಮಹಾಶಯನೇ ಬರೆದಿರುವನು.

ರೂಸೋ ಬರೆದುದು ಒಂದು ಸರಳವಾದ, ಆದರೆ ಆ ಕಾಲದಲ್ಲಿ ಅನೇಕರಿಗೆ ತಿಳಿಯದ, ವಿಷಯದ ಬಗ್ಗೆ. ಸರಕಾರವು ಜನತೆಗಾಗಿ ಇದೆ ಎಂಬುದನ್ನು ಆತನು ತನ್ನ "ಸೋಶಿಯಲ್ ಕಾಂಟ್ರಾಕ್ಟ" (Social Contract) ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದನು. ಆತನ ವಿಚಾರಗಳು ಸಾಮಾನ್ಯವಾಗಿ ಹೀಗಿವೆ:—

ಸರಕಾರವೇ ಇಲ್ಲದ, ಪ್ರತಿಯೊಬ್ಬ ಮನುಷ್ಯನೂ ತನ್ನ ರಕ್ಷಣೆಯ ಹೊಣೆಯನ್ನು ತಾನೇ ಹೊತ್ತಿದ್ದ, ಪ್ರಕೃತಿದತ್ತವಾದ ರಾಜ್ಯ ಅಥವಾ ಸಮಾಜ ಹಿಂದೆ ಒಂದು ಕಾಲದಲ್ಲಿ ಇತ್ತು. ಆಗ ಮತ್ಸ್ಯನ್ಯಾಯ ವಿಧಿಯೇ ಪ್ರಕೃತಿಯು ಜನತೆಗೆ ಕೊಟ್ಟಿದ್ದ ಕಟ್ಟಳೆ. ಈ ಕಟ್ಟಳೆಯನ್ನೇ ಎಲ್ಲ ವ್ಯವಹಾರಗಳೂ ನಿಯಂತ್ರಿತವಾಗಿದ್ದವು. ಆದರೆ ಮಾನವನ ಬುದ್ಧಿಯು ಸ್ವಲ್ಪ ಹೆಚ್ಚಾಗಿ ಬೆಳೆದ ಮೇಲೆ, ಮತ್ಸ್ಯನ್ಯಾಯದನ್ವಯ ಅನೇಕರ ಜೀವನವು ಸುರಕ್ಷಿತವಾಗಿಲ್ಲವೆಂತಲೂ, ಮತ್ಸ್ಯನ್ಯಾಯಕ್ಕಿಂತ ಉತ್ತಮವಾದ ನ್ಯಾಯವೊಂದನ್ನು ರಚಿಸಿಕೊಳ್ಳಬೇಕೆಂತಲೂ, ಮತ್ತು ನ್ಯಾಯ ಪರಿಪಾಲನೆಗೆ ಒಂದು ಸಂಘವನ್ನೋ, ಸಂಸ್ಥೆಯನ್ನೋ ಕಟ್ಟಿಕೊಳ್ಳಬೇಕೆಂತಲೂ ಆತನಿಗೆ ಅನ್ನಿಸಿತು. ಅಂತೆಯೇ ಸರಕಾರವೆಂಬ ಸಾರ್ವಜನಿಕ ಸಂಸ್ಥೆಯನ್ನು ರಚಿಸಿಕೊಂಡನು. ಆಗ ಪ್ರತಿಯೊಬ್ಬ ಮನುಷ್ಯನೂ ತಾನು ಹೊಂದಿದ್ದ, ತನ್ನನ್ನು ರಕ್ಷಿಸಿಕೊಳ್ಳುವ ಅಧಿಕಾರವನ್ನು ಈ

ಸರಕಾರಕ್ಕೆ ಕೊಟ್ಟನು. ಎಲ್ಲರೂ ಕೊಟ್ಟ ಈ ಅಧಿಕಾರವೇ ಸರಕಾರವು ಪಡೆದಿರುವ ಬಲ. ಹೀಗೆ ಸರಕಾರವೆಂಬುದು ಜನರ ಅನುಮತಿಯ ಮೇರೆಗೆ, ಅವರ ಅಧಿಕಾರವನ್ನೇ ಪಡೆದು ಅಸ್ತಿತ್ವದಲ್ಲಿರುವ ಮತ್ತು ಎಲ್ಲರ ಒಳ್ಳೆಯದಕ್ಕಾಗಿರುವ ಒಂದು ಸಂಸ್ಥೆ ಎಂಬುದನ್ನು ರೂಸೋ ತೋರಿಸಿಕೊಟ್ಟನು.

ಈ ತತ್ವವನ್ನು ಫ್ರೆಂಚ್ ಸರಕಾರಕ್ಕೆ ಅನ್ವಯಿಸಲಾಯಿತು. ಹಲವರ ಸುಖಸಂತೋಷಗಳಿಗಾಗಿ ಅನೇಕ ಬಡ ಜನರನ್ನು ಬಲಿ ಕೊಡುತ್ತಿದ್ದ ಫ್ರೆಂಚ್ ಸರಕಾರವು ತನ್ನ ಅಸ್ತಿತ್ವದ ಹಕ್ಕನ್ನೇ ಕಳೆದುಕೊಂಡಿದೆ ಎಂದು ವಾದಿಸಲಾಯಿತು. ಸರಕಾರವು ಹೀಗೆ ಕರ್ತವ್ಯಚ್ಯುತವಾದಾಗ ಜನತೆಯೆಲ್ಲ ಒಂದುಗೂಡಿ ಅದನ್ನು ಕಿತ್ತೊಗೆದು ಬೇರೊಂದು ಸರಕಾರವನ್ನು ರಚಿಸುವದು ಸೂಕ್ತವೆಂದು ಬಗೆದ ಜನ ರೊಚ್ಚಿಗೆದ್ದು ಕ್ರಾಂತಿ ಮಾಡಿದರು.

ಫ್ರಾನ್ಸದ ಮಹಾಕ್ರಾಂತಿಗಿಂತ ಮೊದಲು ಅಮೇರಿಕದಲ್ಲಿ ಸ್ವಾತಂತ್ರ್ಯಯುದ್ಧ ನಡೆದು ಕ್ರಿ. ಶ. ೧೭೮೩ ರಲ್ಲಿ ಅಮೇರಿಕವು ಸ್ವಾತಂತ್ರ್ಯ ಪಡೆದಿದ್ದಿತು. ಬ್ರಿಟಿಷರಿಗೂ ಮತ್ತು ಅಮೇರಿಕನ್ನರಿಗೂ ನಡೆದ ಈ ಯುದ್ಧದಲ್ಲಿ. ಬ್ರಿಟನ್ನಿನ ಸಂಪ್ರದಾಯಬದ್ಧ ಶತ್ರುವಾದ ಫ್ರಾನ್ಸು ಅಮೇರಿಕನ್ನರೊಂದಿಗೆ ಅವರ ಸ್ವಾತಂತ್ರ್ಯಕ್ಕಾಗಿ ಹೋರಾಡಿತ್ತು. ಆ ಯುದ್ಧದ ನಂತರ ತಾಯ್ನಾಡಿಗೆ ಮರಳಿದ ಅನೇಕ ಫ್ರೆಂಚ್ ಸೈನಿಕರು, ತಮ್ಮ ದೇಶದ ಅವ್ಯವಸ್ಥೆಯನ್ನು ಹೋಗಲಾಡಿಸುವದಕ್ಕಾಗಿ, ತಾವೂ ಅಮೇರಿಕನ್ನರಂತೆ ಒಂದು ಕ್ರಾಂತಿಯನ್ನೇ ಎಬ್ಬಿಸಬಾರದೇಕೆ ?

ಅಮೇರಿಕನ್ನರು ಯುದ್ಧದ ನಂತರ ಅಳವಡಿಸಿಕೊಂಡ ಪ್ರಜಾ-ಪ್ರಭುತ್ವವನ್ನೇ ತಾವೂ ಅಳವಡಿಸಿಕೊಳ್ಳಬಾರದೇಕೆ ?–ಎಂದು ವಿಚಾರಿಸಹತ್ತಿದರು. ಹೀಗೆ, ಫ್ರೆಂಚ್ ಜನತೆಯು ತಾವು ಹೊಂದಿದ್ದ ರಾಜಪ್ರಭುತ್ವವನ್ನು ಕಿತ್ತೊಗೆದನಂತರ ಪಡೆಯಬಹುದಾದ ಸರಕಾರದ ಮಾದರಿಯೊಂದನ್ನು ಅಮೇರಿಕವು ಒದಗಿಸಿತು.

೧೭೮೯ ರಲ್ಲಿ ಫ್ರಾನ್ಸದಲ್ಲಿ ಮಹಾಕ್ರಾಂತಿ ಪ್ರಾರಂಭವಾಯಿತು. ಕ್ರಾಂತಿಕಾರರು ಬ್ಯಾಸ್ಟೈಲವನ್ನು ಮುತ್ತಿದರು. ರಾಜ-ರಾಣಿಯರನ್ನು ವರ್ಸಾಯಿಲ್ಸ್ ಅರಮನೆಯಿಂದ ಹಿಡಿದು ತಂದು ಪ್ಯಾರಿಸಿನಲ್ಲಿ ಸೆರೆಯಲ್ಲಿಟ್ಟರು. ತಾವು ಮಾಡುತ್ತಿದ್ದ ರಾಜಕೀಯ ಹೋಮಕ್ಕೆ ರಾಜ-ರಾಣಿಯರ ತಲೆಗಳನ್ನೇ ಬಲಿಕೊಟ್ಟರು. ರಾಜ-ರಾಣಿಯರ ಅಥವಾ ರಾಜಪ್ರಭುತ್ವದ ಪಕ್ಷಪಾತಿಗಳನ್ನು ಸಾಮೂಹಿಕವಾಗಿ ಮರಣದಂಡನೆಗೆ ಗುರಿಮಾಡಿದರು. ಕೊನೆಗೆ ೧೭೯೨ ರಲ್ಲಿ ಪ್ರಜಾಪ್ರಭುತ್ವವನ್ನು ಜಾರಿಗೆ ತಂದರು.

ಫ್ರಾನ್ಸದ ಕ್ರಾಂತಿಯು ಜಳ. ಕ್ರಾಂತಿಕಾರರ ಉನ್ಮಾದಾವಸ್ಥೆಯಿಂದಾಗಿ, ಯುರೋಪದ ಅನೇಕ ರಾಜ್ಯಗಳಿಗೆ ತಗುಲಿತು. ತಮ್ಮ ದೇಶದಲ್ಲಿ ರಾಜಪ್ರಭುತ್ವವನ್ನು ಯಶಸ್ವಿಯಾಗಿ ಕೊನೆಗೊಳಿಸಿದ ಫ್ರಾನ್ಸದ ಕ್ರಾಂತಿಕಾರರು ಅದು ಇರುವೆಡೆಯಲ್ಲೆಲ್ಲಾ ಅದನ್ನು ಕಿತ್ತುಹಾಕುವ ಸಂಕಲ್ಪ ಮಾಡಿದರು. ಆದರೆ ರಾಜರೂ ಮತ್ತು ರಾಜಪ್ರಭುತ್ವವಾದಿಗಳೂ ಸುಮ್ಮನೆ ಕೂಡಲಿಲ್ಲ. ರಾಜಪ್ರಭುತ್ವವನ್ನು ಎಲ್ಲೆಲ್ಲಿಯೂ ಉಳಿಸಿ-ಕೊಳ್ಳುವುದರ ಸಲುವಾಗಿ ಸಂಘಟನೆಯೇ ನಡೆಯಿತು. ಆಸ್ಟ್ರಿಯ, ಪ್ರಶಿಯಾ, ಜರ್ಮನಿಯ ಅನೇಕ ರಾಜ್ಯಗಳು, ಬ್ರಿಟನ್,

ಹಾಲೆಂಡ್, ಸ್ಪೇನ್ ದೇಶಗಳು ಒಟ್ಟಾಗಿ ಫ್ರಾನ್ಸದ ಕ್ರಾಂತಿಕಾರರ ಮೇಲೆ ಯುದ್ಧವನ್ನೇ ಹೂಡಿದವು. ಹಲವು ತಿಂಗಳುಗಳ ವರೆಗೆ ನಡೆದ ಈ ಯುದ್ಧಗಳು "ಫ್ರಾನ್ಸದ ಮಹಾಕ್ರಾಂತಿಯ ಯುದ್ಧಗಳು" ಎಂದು ಪ್ರಸಿದ್ಧಿ ಪಡೆದಿರುವವು.

ಈ ಯುದ್ಧಗಳಿಂದ ಫ್ರಾನ್ಸದಲ್ಲಿ ಅನಾಯಕತ್ವ ಉಂಟಾಯಿತು. ದೇಶದಲ್ಲಿ ವ್ಯವಸ್ಥಿತವಾದ ಒಂದು ಸರಕಾರವಿರಲಿಲ್ಲ; ಪ್ರಜಾಪ್ರಭುತ್ವವನ್ನು ಆಗ ತಾನೇ ಅಳವಡಿಸಿಕೊಂಡಿದ್ದ ಫ್ರೆಂಚರಿಗೆ ಅದನ್ನು ಚೆನ್ನಾಗಿ ನಡೆಸಿಕೊಂಡು ಹೋಗುವ ಅನುಭವವೂ ಇರಲಿಲ್ಲ. ಇವೆಲ್ಲದರ ಜೊತೆಗೆ ಪ್ರಜಾಪ್ರಭುತ್ವವಾದಿಗಳು ಮತ್ತು ರಾಜಪ್ರಭುತ್ವವಾದಿಗಳು ಎಂಬ ಎರಡು ರಾಜಕೀಯ ಪಕ್ಷಗಳು ರಾಜ್ಯದಲ್ಲಿ ತಲೆದೋರಿದವು. ಮೊದಲಿನವರು ಫ್ರಾನ್ಸದ ವೈರಿಗಳೊಂದಿಗೆ ಸೇರಿ ಪುನಃ ರಾಜಪ್ರಭುತ್ವವನ್ನು ಸ್ಥಾಪಿಸಲು ಯತ್ನಿಸುತ್ತಿದ್ದರು. ಕ್ರಾಂತಿಯ ಫಲವಾಗಿ ಆರೇಳು ವರ್ಷಗಳ ವರೆಗೆ ದೇಶವು ಅನುಭವಿಸುತ್ತಿದ್ದ ಅನಾಯಕತೆ, ಅರಾಜಕತೆ, ಅವ್ಯವಸ್ಥೆಗಳಿಂದಾಗಿ ಬೇಸತ್ತ ಜನತೆ, ಯಾವುದಾದರೊಂದು ವ್ಯವಸ್ಥಿತ ಬಲಯುತ ಸರಕಾರವನ್ನು ಒಪ್ಪಿಕೊಳ್ಳಲು ತಯಾರಾಗಿತ್ತು. ಈ ಅನಾಯಕತ್ವ ಮತ್ತು ಅವ್ಯವಸ್ಥೆಯ ಫಲವಾಗಿ ೧೭೯೯ರಲ್ಲಿ ನೆಪೋಲಿಯನ್ನನು ಅಧಿಕಾರಕ್ಕೆ ಬಂದನು.

ನೆಪೋಲಿಯನ್ ಮಹಾಶಯ

'ರೂಸೋ ಇಲ್ಲದಿದ್ದರೆ ಫ್ರಾನ್ಸದ ಮಹಾಕ್ರಾಂತಿಯೇ ಆಗುತ್ತಿರಲಿಲ್ಲ' ಎಂದು ನೆಪೋಲಿಯನ್ನನು ಬರೆದನು. ಫ್ರಾನ್ಸದ

ಮಹಾಕ್ರಾಂತಿಯಾಗದಿದ್ದಲ್ಲಿ ನೆಪೋಲಿಯನ್ನನು ಅನಾಮಧೇಯ ನಾಗಿ ಉಳಿಯುತ್ತಿದ್ದನೋ ಏನೋ! ನೆಪೋಲಿಯನ್ನನಲ್ಲಿ [illegible] ಶಕ್ತಿಯಿತ್ತು; ಫ್ರಾನ್ಸಿನ ಮಹಾಕ್ರಾಂತಿಯಿಂದಾದ ಅನುಕೂಲತೆ ಆತನ ಶಕ್ತಿಗೆ ಸಹಕರಿಸಿತು. ಅಂತೂ, ನೆಪೋಲಿಯನ್ನನು ಒಬ್ಬ ಜಗತ್ಪ್ರಸಿದ್ಧ ವ್ಯಕ್ತಿಯಾದನು.

ಒಂದು ಬಡಕುಟುಂಬದಲ್ಲಿ ಜನಿಸಿದ ನೆಪೋಲಿಯನ್ನನು ಸೈನಿಕನಾಗಬೇಕೆಂಬ ಆಶೆಯನ್ನು ಹೊಂದಿದ್ದು, ಚಿಕ್ಕವಯಸ್ಸಿನಲ್ಲಿಯೇ ಮಿಲಿಟರಿ ಶಿಕ್ಷಣ ಪಡೆದು ಸೈನ್ಯವನ್ನು ಸೇರಿದನು. ಬಹಳ ದಕ್ಷನೂ, ಧೈರ್ಯಶಾಲಿಯೂ ಆದ ಇವನು ಕ್ರಾಂತಿಯ ಪ್ರಾರಂಭದಲ್ಲಿ ಅದನ್ನು ಬೆಂಬಲಿಸಿದನು. ಮತ್ತು ಆ ವೇಳೆಯಲ್ಲುಂಟಾದ ಅವ್ಯವಸ್ಥೆಯ ಪ್ರಯೋಜನವನ್ನು ಪೂರ್ಣವಾಗಿ ಪಡೆದುಕೊಂಡು ಅಧಿಕಾರಕ್ಕೆ ಬಂದನು. ಕೆಲವು ವರ್ಷಗಳ ಅವಧಿಗಾಗಿ 'ಕಾನ್ಸಲ' (Concul) ನೆಂದು (ಆಗಿನ ಸರಕಾರದ ಮುಖ್ಯಸ್ಥನು 'ಕಾನ್ಸಲ'ನೆಂದು ಕರೆಯಲ್ಪಟ್ಟನು) ನೇಮಿಸಲ್ಪಟ್ಟ ನೆಪೋಲಿಯನ್ನನು ೧೮೦೨ ರಲ್ಲಿ ಜೀವನ ಪರ್ಯಂತ ಕಾನ್ಸಲನೆಂದು ನಿಯೋಜಿತನಾದದ್ದಲ್ಲದೆ, ತನ್ನ ಉತ್ತರಾಧಿಕಾರಿಯನ್ನು ನೇಮಿಸುವ ಅಧಿಕಾರವನ್ನು ಪಡೆದನು. ೧೮೦೪ ರಲ್ಲಿ ಫ್ರೆಂಚರು ಈತನನ್ನು ಸಾಮ್ರಾಟ (Emperor) ನೆಂದು ಒಪ್ಪಿಕೊಂಡರು. ೧೮೧೫ ರ ವರೆಗೆ ಫ್ರಾನ್ಸ್ ದೇಶವನ್ನಾಳಿದ ಈತನು ಸಂಪೂರ್ಣ ಯುರೋಪವನ್ನೇ ತಳಮಳಗೊಳಿಸಿದನು. ಆದ್ದರಿಂದ ೧೭೯೯ ರಿಂದ ೧೮೧೫ ರ ನಡುವಿನ ಕಾಲವನ್ನು ಯುರೋಪದ ಇತಿಹಾಸದಲ್ಲಿ "ನೆಪೋಲಿಯನ್ನನ ಯುಗ" ಎಂದು ಕರೆದಿರುವರು.

ಕೇವಲ ಫ್ರಾನ್ಸ್ ದೇಶವೊಂದನ್ನೇ ಆಳುವದರಿಂದ ನೆಪೋಲಿಯನ್ನನಿಗೆ ತೃಪ್ತಿಯಾಗಲಿಲ್ಲ. ಸಂಪೂರ್ಣ ಯುರೋಪವನ್ನೇ ತನ್ನ ವಶಪಡಿಸಿಕೊಂಡು ಅದರ ಅಧಿಪತಿಯಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಈತನು ಇಟ್ಟುಕೊಂಡಿದ್ದನು. ಯುದ್ಧದಿಂದುಂಟಾದ ಅರಾಜಕತೆಯ ಫಲವಾಗಿ ಪದವಿಗೇರಿದ ಇವನು ಯುದ್ಧವನ್ನು ಕೊನೆಗೊಳಿಸಲೂ ಸಿದ್ಧನಿರಲಿಲ್ಲ. ಏಕೆಂದರೆ, ಶಾಂತಿ ಸ್ಥಾಪನೆಯಾದೊಡನೆ ಫ್ರೆಂಚರು ತನ್ನನ್ನೆಲ್ಲಿ ಪದಚ್ಯುತಗೊಳಿಸುವರೋ ಎಂಬ ಭಯ ಆತನನ್ನು ಕಾಡುತ್ತಲೇ ಇತ್ತು. ಯುದ್ಧದಲ್ಲಿ ಯಾವಾಗಲೂ ಜಯವನ್ನೇ ಗಳಿಸುತ್ತಿದ್ದ ಇವನು ಕೊನೆಗೊಮ್ಮೆ ಯುದ್ಧದಲ್ಲಿಯೇ ತನ್ನ ಸರ್ವಸ್ವವನ್ನೂ ಕಳೆದುಕೊಳ್ಳಬೇಕಾಯಿತು.

ಇಟಲಿ, ಜರ್ಮನಿ, ಆಸ್ಟ್ರಿಯ, ಪ್ರಶಿಯ, ರಶಿಯಗಳನ್ನು ಗೆದ್ದ ನೆಪೋಲಿಯನ್ನನು ಯುರೋಪದ ಆಧಿಪತ್ಯವನ್ನು ಸಾಧಿಸಲು ಇನ್ನೊಂದು ರಾಷ್ಟ್ರವನ್ನು ಮಾತ್ರ ಗೆಲ್ಲಬೇಕಾಗಿತ್ತು; ಅದೇ ಇಂಗ್ಲಂಡು. ಇಂಗ್ಲಂಡಿನದು ಪ್ರಪಂಚದಲ್ಲೇ ಅದ್ವಿತೀಯ ನೌಕಾಬಲವಾಗಿತ್ತು. ನೆಪೋಲಿಯನ್ನನು ಪರಮಶ್ರೇಷ್ಠ ಸೇನೆಯನ್ನು ಹೊಂದಿದ್ದನು. ಇಂಗ್ಲಂಡವನ್ನು ಯುದ್ಧದಲ್ಲಿ ಸೋಲಿಸಲು ಅನೇಕ ಬಾರಿ ಪ್ರಯತ್ನಿಸಿ ಸಾಧ್ಯವಾಗದಾಗ ಆತನು "ಕಾಂಟಿನೆಂಟಲ್ ಸಿಸ್ಟಂ" (Continental System) ಎಂಬ ಒಂದು ಹೊಸ ಮಾರ್ಗವನ್ನೇ ಅದಕ್ಕಾಗಿ ಹುಡುಕಿದನು. ಈ ಯೋಜನೆಯನ್ವಯ, ತನ್ನ ಆಧೀನದಲ್ಲಿದ್ದ ಯುರೋಪದ ಯಾವದೇ ರಾಷ್ಟ್ರವು ಪ್ರಮುಖ ವ್ಯಾಪಾರೀ ರಾಷ್ಟ್ರವಾದ

ಇಂಗ್ಲಂಡದೊಡನೆ ವ್ಯಾಪಾರೀ ಸಂಪರ್ಕವನ್ನು ಇಟ್ಟುಕೊಳ್ಳ ಕೂಡದೆಂಬ ನಿರ್ಬಂಧ ಹೇರಲಾಯಿತು. ಆದರೆ ಇದರಿಂದಾಗಿ ಕಳ್ಳವ್ಯಾಪಾರ ಪ್ರಾರಂಭವಾಯಿತು. ಇಂಗ್ಲಂಡು ಮಾತ್ರ ಮಣಿಯಲಿಲ್ಲ.

ತನ್ನ ಯೋಜನೆಯು ಫಲಿಸದಿದ್ದುದನ್ನು ಕಂಡ ನೆಪೋಲಿಯನ್ನನು, ಕಳ್ಳವ್ಯಾಪಾರಕ್ಕೆ ಎಡೆಕೊಟ್ಟ ರಶಿಯಾವನ್ನು ಶಿಕ್ಷಿಸಲೋಸುಗ ಅದರ ಮೇಲೆ ಏರಿಹೋದನು. ಇವನ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಸ್ಪೇನದಲ್ಲೂ ತೊಂದರೆ ಪ್ರಾರಂಭವಾಯಿತು. ಇಂಗ್ಲಂಡದೊಡನೆ ವ್ಯಾಪಾರೀ ಯುದ್ಧ (Commercial War) ವಂತೂ ನಡೆದೇ ಇತ್ತು. ನಾನಾ ರೀತಿಯಲ್ಲಿ ತೊಂದರೆಗೊಳಗಾಗಿದ್ದ ನೆಪೋಲಿಯನ್ನನ ಮೇಲೆ ಸೇಡು ತೀರಿಸಿಕೊಳ್ಳಲು ಆಸ್ಟ್ರಿಯಾವು ಸಮಯ ಸಾಧಿಸಿ ಹವಣಿಸಿತು. ಅನೇಕ ರಾಷ್ಟ್ರಗಳು ಒಂದುಗೂಡಿ "ರಾಷ್ಟ್ರಗಳ ಯುದ್ಧ" ವೆಂದು ಪ್ರಸಿದ್ಧಿಪಡೆದಿರುವ ಲಿಪ್ಜಿಗ್ (Leipzig) ಕಾಳಗದಲ್ಲಿ ೧೮೧೩ ರಲ್ಲಿ ನೆಪೋಲಿಯನ್ನನನ್ನು ಸೋಲಿಸಿದುವು. ಈ ಯುದ್ಧದ ಫಲವಾಗಿ ನೆಪೋಲಿಯನ್ನನನ್ನು ಫ್ರೆಂಚ್ ದೊರೆತನದಿಂದ ಕಿತ್ತುಹಾಕಲಾಯಿತು. ಆದರೂ ಆತನು ಮತ್ತೊಮ್ಮೆ ಯುದ್ಧಮಾಡಲು ಪ್ರಯತ್ನಿಸಿ, ಕೊನೆಗೆ, ವಾಟರ್ಲೂ (Waterloo) ಎಂಬಲ್ಲಿ ೧೮೧೫ ರ ಜೂನ್ ಹದಿನೇಳರಂದು ಸೋತು ಸೇಂಟ್‌ಹೆಲೆನಾ ಎಂಬ ದ್ವೀಪದಲ್ಲಿ ಬಂದಿಯಾದನು.

೩. ಸಮ್ಮೇಳನ ಸರಕಾರ

ಹದಿನೆಂಟನೆಯ ಶತಮಾನದ ಯುರೋಪದಲ್ಲಿ ಅನೇಕ ಹೊಸ ವಿಚಾರಗಳ ಚಾಲನೆಗೆ ಪ್ರೋತ್ಸಾಹ ಕೊಟ್ಟ ಕೀರ್ತಿ ಫ್ರಾನ್ಸಕ್ಕೆ ಸಲ್ಲಬೇಕು. ರಾಜಪ್ರಭುತ್ವವನ್ನು ಸಾಂಪ್ರದಾಯಿಕವಾಗಿ ಬೆಳಸಿಕೊಂಡು ಬಂದ ಯುರೋಪದಲ್ಲಿ ಪ್ರಜಾಪ್ರಭುತ್ವತತ್ತ್ವವು ಒಂದು ಅಪವಿತ್ರ ತತ್ತ್ವವೆಂದೇ ಪರಿಗಣಿಸಲ್ಪಟ್ಟಿತ್ತು. ಆದರೆ ಫ್ರಾನ್ಸವು ಈ ತತ್ತ್ವವನ್ನು ತಾನು ಒಪ್ಪಿಕೊಂಡದ್ದಷ್ಟೇ ಅಲ್ಲ. ಅದನ್ನು ಯುರೋಪದಲ್ಲೆಲ್ಲ ಹರಡಲು ಪ್ರಯತ್ನಿಸಿತು. ಈ ವೇಳೆಗೆ ಫ್ರಾನ್ಸದಲ್ಲಿ ಅಧಿಕಾರಕ್ಕೆ ಬಂದ ನೆಪೋಲಿಯನ್ನನು ಯುರೋಪದ ಅನೇಕ ರಾಜರನ್ನು ಪದಚ್ಯುತಗೊಳಿಸಿ, ಫ್ರಾನ್ಸದ ಎಲ್ಲೆಗಳನ್ನೆಲ್ಲ ವಿಸ್ತರಿಸಿ, ಇಡಿಯ ಯುರೋಪ ಖಂಡವನ್ನೇ ತನ್ನ ಅಂಕಿಯಲ್ಲಿ ತರಲು ಹವಣಿಸಿದನು. ಅನೇಕ ರಾಜ್ಯಗಳನ್ನು ಈತನು ಗೆದ್ದುಕೊಂಡನಾದ್ದರಿಂದ ಯುರೋಪದ ಭೂಪಟವನ್ನೇ ವಿಕಾರಗೊಳಿಸಿದನೆಂದು ಅಲ್ಲಿಯ ಪ್ರಭಾವೀ ದೊರೆಗಳೂ ಮುತ್ಸದ್ದಿಗಳೂ ಬಗೆದರು. ಅಲ್ಲದೆ, ಸಾಮಾನ್ಯನಾಗಿ ಹುಟ್ಟಿದ ಮನುಷ್ಯನೊಬ್ಬನು ರಾಜಪದವಿಗೇರಿದುದು ಇವರಿಗೆ ಅಪವಿತ್ರವಾಗಿಯೇ ತೋರಿತು. ಅಂತೂ, ಎಲ್ಲರೂ ಸೇರಿ ನೆಪೋಲಿಯನ್ನನನ್ನು ಪದಚ್ಯುತಗೊಳಿಸಿದ ನಂತರ, ವಿಕಾರಗೊಂಡಿದ್ದ ಯುರೋಪವನ್ನು ಸಾಕಾರಗೊಳಿಸಲು, ಸಾಂಪ್ರದಾಯಿಕ ರಾಜ ವಂಶಗಳನ್ನು ಮತ್ತೆ ತಮ್ಮ ಸ್ವಸ್ಥಾನ

ಗಳಲ್ಲಿ ಸ್ಥಾಪಿಸಲು, ಆಸ್ಟ್ರಿಯಾದ ರಾಜಧಾನಿ ವ್ಹಿಯೆನ್ನದಲ್ಲಿ ವಿಜಯೀ ರಾಷ್ಟ್ರಗಳು ಸಭೆ ಸೇರಿದವು. ಇದೇ ವ್ಹಿಯೆನ್ನ ಕಾಂಗ್ರೆಸ್.

ವ್ಹಿಯೆನ್ನ ಕಾಂಗ್ರೆಸ್

ರಶಿಯಾದ ದೊರೆ ಝಾರ ಅಲೆಗ್ಝಾಂಡರನೂ, ಫ್ರಾನ್ಸದ ಪ್ರತಿನಿಧಿಯಾದ ಟ್ಯಾಲೀರ್‍ಯಾಂಡನೂ ಈ ಕಾಂಗ್ರೆಸ್ಸಿನಲ್ಲಿ ಪ್ರಮುಖ ವ್ಯಕ್ತಿಗಳಾಗಿದ್ದರು, ಮತ್ತು ಅಲ್ಲಿ ತೆಗೆದುಕೊಂಡ ನಿರ್ಣಯಗಳಿಗೆಲ್ಲ ಕಾರಣೀಭೂತರಾಗಿದ್ದರು. ಈ ಕಾಂಗ್ರೆಸ್ಸಿನ ನಿರ್ಣಯಗಳೆಲ್ಲ ಕ್ರಮಬದ್ಧತೆ (Legitimacy) ಮತ್ತು ಪೂರ್ವಾಚಾರಪ್ರಿಯತೆ (Conservatism) ಎಂಬ ಎರಡು ತತ್ವಗಳ ಮೇಲೆಯೇ ಆಧರಿತವಾಗಿದ್ದವು. ಫ್ರಾನ್ಸದ ಮಹಾ ಕ್ರಾಂತಿಯಂತಹ ಕ್ರಾಂತಿ ಮತ್ತೊಮ್ಮೆ ತಲೆದೋರದಂತೆ ಮಾಡಬೇಕೆಂದು ಇಚ್ಛಿಸಿದ ಈ ಸಭೆ ಕೆಳಗಿನಂತೆ ಭೂಪ್ರದೇಶ ಗಳ ವ್ಯವಸ್ಥೆಯನ್ನು ಮಾಡಿತು.

ನೆಪೋಲಿಯನ್ನನ ಆಳಿಕೆಯಿಂದ ಬಹುವಾಗಿ ವಿಸ್ತರಿಸಲ್ಪಟ್ಟಿದ್ದ ಫ್ರಾನ್ಸು ೧೭೯೨ರಲ್ಲಿದ್ದ ತನ್ನ ಎಲ್ಲೆಗಳಿಗೆ ಸೀಮಿತವಾಗ ಬೇಕಾಯಿತು. ರಾಜ್ಯಕ್ರಾಂತಿಯ ಫಲವಾಗಿ ಪದಚ್ಯುತ ಗೊಳಿಸಲ್ಪಟ್ಟಿದ್ದ ಬೋರ್ಬನ್ (Bourbon) ರಾಜವಂಶವು ಫ್ರಾನ್ಸದಲ್ಲಿ ಪುನಃ ಸ್ಥಾಪಿಸಲ್ಪಟ್ಟಿತು.

ಜರ್ಮನಿಯಲ್ಲಿ ಮೂವತ್ತೊಂಬತ್ತು ಸಾರ್ವಭೌಮ ದೊರೆಗಳನ್ನೂ ಸ್ವತಂತ್ರ ನಗರಗಳನ್ನೂ ಒಪ್ಪಿಕೊಳ್ಳಲಾಯಿತು.

ದೇಶದ ರಕ್ಷಣೆಯ ದೃಷ್ಟಿಯಿಂದ ಈ ಎಲ್ಲ ರಾಜ್ಯಗಳನ್ನು ಸೇರಿಸಿ ಆಸ್ಟ್ರಿಯದ ಅಧ್ಯಕ್ಷತೆಯಲ್ಲಿ 'ನಿರಂತರ ಜರ್ಮನ್ ಒಕ್ಕೂಟ'ವೊಂದನ್ನು ಸ್ಥಾಪಿಸಲಾಯಿತು. ನೆಪೋಲಿಯನ್ನನು ಆಸ್ಟ್ರಿಯದಿಂದ ಬೇರ್ಪಡಿಸಿದ್ದ ಜರ್ಮನ್ ರಾಷ್ಟ್ರವು ಮತ್ತೆ ಆಸ್ಟ್ರಿಯದ ಅಂಕೆಯಲ್ಲಿ ಬಂತು.

ಮೆಟರ್ನಿಕ (Metternich) ನ ನೇತೃತ್ವದಲ್ಲಿ ರೂಪಗೊಳ್ಳುತ್ತಿದ್ದ ಆಸ್ಟ್ರಿಯವು ವೆನಿಸ್, ಲೊಂಬಾರ್ಡಿ, ಇಲ್ಲೀರಿಯ, ಬವೇರಿಯ ಮೊದಲಾದ ಪ್ರಾಂತಗಳನ್ನು ಪಡೆಯುವದರ ಮೂಲಕ ಮತ್ತೆ ತನ್ನ ಹಿಂದಿನ ವೈಭವದ ಸ್ಥಿತಿಗೆ ಬಂತು. ಈ ಪ್ರಕಾರ ಆಸ್ಟ್ರಿಯ ದೇಶವು ಬೊಹೀಮಿಯನ್ನರು, ಹಂಗೇರಿಯನ್ನರು, ಇಟಾಲಿಯನ್ನರು, ಪೋಲರು, ಸರ್ಬಿನಿಯನ್ನರು, ರೂಮಾನಿಯನ್ನರು ಮುಂತಾದ ಅನೇಕ ರಾಷ್ಟ್ರೀಯರನ್ನೊಳಗೊಂಡಿತು.

ಇಟಲಿಯು ಅನೇಕ ರಾಜ್ಯಗಳಾಗಿ ಒಡೆಯಲ್ಪಟ್ಟು, ಮುಖ್ಯವಾಗಿ ಆಸ್ಟ್ರಿಯದ ನಿಯಂತ್ರಣದಲ್ಲಾಯಿತು. ನೆಪೋಲಿಯನ್ನನ ಉದಯಪೂರ್ವದಲ್ಲಿ ಅಲ್ಲಿ ಆಳುತ್ತಿದ್ದ ಎಲ್ಲ ರಾಜವಂಶಗಳನ್ನು ಪುನಃ ಸ್ಥಾಪಿಸಲಾಯಿತು. ಕೆಲವು ರಾಜ್ಯಗಳನ್ನು ಪೋಪನ ಆಳಿಕೆಗೆ ಕೊಡಲಾಯಿತು. ಇಟಲಿಯು ಒಂದು ರಾಷ್ಟ್ರವೆಂಬುದೇ ಮರೆತುಹೋಯಿತು.

ಮತ್ತೊಮ್ಮೆ ಫ್ರಾನ್ಸದಲ್ಲಿ ಕ್ರಾಂತಿಯಾಗಬಾರದೆಂದೆಣಿಸಿದ ಪೂರ್ವಾಚಾರೀ ಮುತ್ಸದ್ದಿಗಳು ಫ್ರಾನ್ಸದ ಉತ್ತರದ ಎಲ್ಲೆಯಲ್ಲಿ ಎರಡು ಪ್ರಬಲ ರಾಜ್ಯಗಳನ್ನು ಸ್ಥಾಪಿಸಲೆತ್ನಿಸಿದರು. ಕ್ಯಾಥೋ

ಲಿಕ್ ಬೆಲ್ಜಿಯಂ ಮತ್ತು ಪ್ರಾಟೆಸ್ಟಂಟ್ ಹಾಲೆಂಡ್ ಈ ಎರಡೂ ದೇಶಗಳಲ್ಲಿ ಅನೇಕ ಭಿನ್ನತೆ ಮತ್ತು ಬಿನ್ನಾಭಿಪ್ರಾಯಗಳು ಇದ್ದುವಾದರೂ, ಡಚ್ ದೊರೆಯ ನೇತೃತ್ವದಲ್ಲಿ ಅವನ್ನು ಒಂದುಗೂಡಿಸಲಾಯಿತು. ನಾರ್ವೆ ಮತ್ತು ಸ್ವೀಡನ್ನಗಳನ್ನು, ಜನತೆಯ ಇಷ್ಟದ ವಿರುದ್ಧ ಒಂದುಗೂಡಿಸಿ ಬೆರ್ನೊಡೆಟ್ ಎಂಬವನ ಆಳ್ವಿಕೆಗೊಳಪಡಿಸಲಾಯಿತು.

ರಶಿಯವು ಗೆದ್ದುಕೊಂಡಿದ್ದ ಫಿನ್‌ಲ್ಯಾಂಡನ್ನು ರಶಿಯದ ಭಾಗವೆಂದು ಅಂಗೀಕರಿಸಲಾಯಿತು. ವಾರ್ಸಾ ಸಂಸ್ಥಾನವು ಸಂಪೂರ್ಣವಾಗಿ ರಝಾರನ ಕೈಸೇರಿತು. ಇಂಗ್ಲಂಡು, ಹೆಲಿಗೋಲ್ಯಾಂಡ್ ಮತ್ತು ಮಾಲ್ಟಾಗಳ ಜೊತೆಗೆ ಅಯೋನಿಯಾನ್ ದ್ವೀಪಗಳ ಒಡೆತನವನ್ನು ಪಡೆಯಿತು.

ಒಟ್ಟಿಗೆ ಹೇಳುವದಾದರೆ, ಯುರೋಪದ ಸಂಪ್ರದಾಯಬದ್ಧ ರಾಜಕೀಯ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಭರದಲ್ಲಿ ಮುತ್ಸದ್ದಿಗಳು, ಫ್ರಾನ್ಸಿನ ಮಹಾಕ್ರಾಂತಿ ಮತ್ತು ನೆಪೋಲಿಯನ್ನನ ಆಳ್ವಿಕೆಯಿಂದುದಿಸಿದ ಎಲ್ಲ ಪ್ರಗತಿಪರ ವಿಚಾರಗಳನ್ನು ಬದಿಗೊತ್ತಲೆತ್ನಿಸಿದರು. ಸ್ವಾತಂತ್ರ್ಯ, ಸಮತೆ, ಭ್ರಾತೃತ್ವ, ಪ್ರಜಾಪ್ರಭುತ್ವ, ಪ್ರಗತಿ, ಮಾನವತೆ ಈ ಎಲ್ಲ ಮಾತುಗಳೂ ವ್ಹಿಯೆನ್ನದ ಮುತ್ಸದ್ದಿಗಳಿಗೆ ಅಪಾಯದ ಒಡನಾಡಿಗಳಾಗಿ ತೋರಿದವು. ನೆಪೋಲಿಯನ್ನನ ಆಳ್ವಿಕೆಯ ಫಲವಾಗಿ ರೂಪುಗೊಂಡಿದ್ದ ರಾಷ್ಟ್ರೀಯತೆಗೆ ಇವರು ಸ್ವಲ್ಪವೂ ಬೆಲೆ ಕೊಡಲಿಲ್ಲ; ಚಿಕ್ಕ ದೇಶಗಳ ಇಷ್ಟಾರ್ಥಗಳನ್ನಂತೂ ಕಡೆಗಣಿಸಲಾಯಿತು. ಕಾಲಪ್ರವಾಹದ ಸೆಳೆತಕ್ಕೆ ವಿರುದ್ಧವಾಗಿ ಈಸಲೆತ್ನಿಸಿದ ವ್ಹಿಯೆನ್ನ

ಮುತ್ಸದ್ದಿಗಳ ಕಾರ್ಯ ಸಹಜವಾಗಿಯೇ ಬಹಳ ದಿನಗಳುಳಿಯುವಂತಹದ್ದಾಗಿರಲಿಲ್ಲ.

ಹೋಲಿ ಅಲಾಯನ್ಸ್ (Holy Alliance)

ವಿಯೆನ್ನದಲ್ಲಿ ಮಾಡಲಾಗಿದ್ದ ರಾಜಕೀಯ ವ್ಯವಸ್ಥೆಯನ್ನು ಕಾಯ್ದುಕೊಳ್ಳುವದಕ್ಕಾಗಿ ಮತ್ತು ಯುರೋಪಕ್ಕೆ ಸಂಬಂಧಿಸಿದ್ದಂತೆ ಅಂತರರಾಷ್ಟ್ರೀಯ ಮೇಲ್ವಿಚಾರಣೆಗಾಗಿ, ಹಾಗೂ ಫ್ರಾನ್ಸದಲ್ಲಿ ಇನ್ನೊಮ್ಮೆ ಕ್ರಾಂತಿಯಾಗದಂತೆ ನೋಡಿಕೊಳ್ಳಲು, ನಾಲ್ಕು ಪ್ರಮುಖ ಕ್ರಿಶ್ಚಿಯನ್ ದೊರೆಗಳು ಸೇರಿ ಒಂದು ಒಪ್ಪಂದವನ್ನು ಮಾಡಿಕೊಂಡರು. ಹೋಲಿ ಅಲಾಯನ್ಸ್ ಅಥವಾ 'ಪವಿತ್ರ ಮೈತ್ರಿ' ಎಂದು ಕರೆಯಲ್ಪಟ್ಟ ಈ ಒಡಂಬಡಿಕೆಯು ಕ್ರಿಸ್ತನ ಉಪದೇಶಕ್ಕನುಸಾರವಾಗಿ ದಯೆ, ಶಾಂತಿ ಮತ್ತು ಪ್ರೀತಿಗಳ ಮೇಲೆ ರಚಿಸಲಾಗಿದ್ದ ಒಂದು ಕೂಟವಾಗಿದ್ದಿತು. ಆಸ್ಟ್ರಿಯ, ಪ್ರಶಿಯ, ರಶಿಯ, ಇಂಗ್ಲಂಡ್– ಈ ನಾಲ್ಕೂ ದೇಶಗಳ ದೊರೆಗಳು ೧೮೧೫ ರಲ್ಲಿ ಮಾಡಿಕೊಂಡ ಈ ಒಡಂಬಡಿಕೆಯು ರಶಿಯದ ದೊರೆಯಾದ ಝಾರ ಅಲೆಗ್ಝಾಂಡರನಿಂದ ಪ್ರತಿಪಾದಿಸಲ್ಪಟ್ಟದ್ದಿತು. ಯುರೋಪದ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಪರಿಶೀಲಿಸುವುದಕ್ಕಾಗಿ ಆಗಿಂದಾಗ್ಗೆ ಸಮ್ಮೇಳನ (Congress) ಗಳನ್ನು ಏರ್ಪಡಿಸಬೇಕೆಂದು ಇವರೆಲ್ಲರೂ ಒಪ್ಪಿಕೊಂಡರು. ಈ ರೀತಿ ಕಾಲಕಾಲಕ್ಕೆ ಸೇರುವ ಸಮ್ಮೇಳನಗಳ ಮೂಲಕ ಅಂತರರಾಷ್ಟ್ರೀಯ ಸಂಬಂಧವನ್ನು ನಿಯಂತ್ರಿಸಲೆತ್ನಿಸಿದ ಈ ಯೋಜನೆಯನ್ನು

ಸಮ್ಮೇಳನ ಸರಕಾರ (Congressional Government) ಎಂದು ಹಲವರು ಕರೆದಿರುವರು.

ಈ ಒಪ್ಪಂದದ ಅರ್ಥವಿವರಣೆಯ ಬಗ್ಗೆ ಇಂಗ್ಲಂಡಿನ ಪ್ರತಿನಿಧಿಯಾದ ಕ್ಯಾಸಲ್ರೀ (Castlereagh) ಮತ್ತು ಆಸ್ಟ್ರಿಯದ ಪ್ರತಿನಿಧಿಯಾದ ಮೆಟರ್ನಿಕ್ (Metternich) ಇವರಿಬ್ಬರಲ್ಲಿ ಪ್ರಾರಂಭದಿಂದಲೂ ಭಿನ್ನಾಭಿಪ್ರಾಯವಿತ್ತು. ಆದರೂ ಅಂತರರಾಷ್ಟ್ರೀಯ ನಿಯಂತ್ರಣವು ಕೆಲಕಾಲ ಚೆನ್ನಾಗಿಯೇ ನಡೆಯಿತೆಂದು ಹೇಳಬಹುದು. ಯುರೋಪದ ಪ್ರಮುಖ ಮುತ್ಸದ್ದಿಗಳು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತಿದ್ದರು. ಮತ್ತು ಅವರೆಲ್ಲರಿಗೂ ಬೇಕಾದದ್ದು, ಫ್ರಾನ್ಸು ಶಾಂತವಾಗಿರಬೇಕೆಂಬುದೇ ಆಗಿತ್ತು. ೧೮೧೮ ರಲ್ಲಿ ಏಕ್ಸ್ - ಲಾ - ಚೇಪಲ್ (Aix-la-Chapelle) ಎಂಬಲ್ಲಿ ಕೂಡಿದ ಮೊದಲನೆಯ ಸಮ್ಮೇಳನವು ಫ್ರಾನ್ಸದ ನಡತೆಯ ಬಗ್ಗೆ ಸಮಾಧಾನ ವ್ಯಕ್ತಪಡಿಸಿತಲ್ಲದೆ, ಅದಕ್ಕೆ ಮೊದಲಿನಂತೆ, ಮಹಾರಾಷ್ಟ್ರಗಳ ಸಾಲಿನಲ್ಲಿ ಸ್ಥಾನವನ್ನು ಕೊಟ್ಟಿತು.

ಮತ್ತೆರಡು ವರ್ಷಗಳ ವರೆಗೆ ಸಮಾಧಾನಕಾರಕವಾಗಿಯೇ ನಡೆದ ಹೋಲಿ ಅಲಾಯನ್ಸಿಗೆ ೧೮೨೦ ರಲ್ಲಿ ಒಂದು ವಜ್ರಾಘಾತವೇ ಒದಗಿತು. ಸ್ಪೇನದಲ್ಲಿ ಒಂದು ಸೈನಿಕ ಕ್ರಾಂತಿಯಾಗಿ, ಪ್ರಜಾಪ್ರಭುತ್ವ ತತ್ವದ ಮೇಲೆ ಆಧರಿತವಾದ ಘಟನೆಯೊಂದನ್ನು ದೊರೆಯು ಕೊಡಬೇಕೆಂದೂ, ಆ ಘಟನೆಯನ್ನನುಸರಿಸಿ ಆಡಳಿತ ನಡೆಸಬೇಕೆಂದೂ ಕ್ರಾಂತಿಕಾರರು ತಗಾದೆ ಮಾಡಿದರು. ದೊರೆಯು ತನ್ನ ಜೀವವೇ ಗಂಡಾಂತರದಲ್ಲಿರುವುದನ್ನರಿತು, ಅವರ ಎಲ್ಲ ಕೋರಿಕೆ, ಅಪೇಕ್ಷೆಗಳನ್ನು ಈಡೇರಿಸಲು ಒಪ್ಪಿ

ಕೊಂಡನು. ಈ ಸುದ್ದಿಯನ್ನು ಕೇಳಿದ ಝಾರ ಅಲೆಗ್ಝಾಂಡರನಿಗೆ ಗಾಬರಿಯಾಯಿತು. ಸೈನ್ಯ ಮತ್ತು ಪ್ರಜಾಪ್ರಭುತ್ವವೆಂದರೆ ಆತನಿಗೆ ಬಹಳ ಹೆದರಿಕೆಯಿತ್ತು. ಆದ್ದರಿಂದ ತಕ್ಷಣವೇ ಹೋಲಿ ಅಲಾಯನ್ಸ ಸಮ್ಮೇಳನವು ಸೇರಬೇಕೆಂದೂ, ಅವಶ್ಯವಿದ್ದ ಕ್ರಮ ಕೈಕೊಂಡು ಸ್ಪೇನದ ದೊರೆಯ ಘನತೆಯನ್ನುಳಿಸಬೇಕೆಂದೂ ಝಾರನು ಒಂದು ಪ್ರಕಟನೆ ಹೊರಡಿಸಿದನು.

ಇದನ್ನು ಕಂಡ ಕ್ಯಾಸಲ್ರೀ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕಾಯಿತು. ನೆಪೋಲಿಯನ್ನನಾಗಲೀ ಅಥವಾ ಆತನ ವಂಶಜರಾಗಲೀ ತಿರುಗಿ ಫ್ರಾನ್ಸದಲ್ಲಿ ಅಧಿಕಾರಕ್ಕೆ ಬಾರದಂತೆ ನೋಡಿಕೊಳ್ಳುವದು ಮತ್ತು ವ್ಹಿಯೆನ್ನದ ರಾಜಕೀಯ ವ್ಯವಸ್ಥೆಯನ್ನು ಉಳಿಸುವದು ಇವೆರಡೇ ತನ್ನ ದೇಶವು ಹೋಲಿ ಅಲಾಯನ್ಸ ಒಪ್ಪಂದದನ್ವಯ ಒಪ್ಪಿಕೊಂಡಿರುವ ಜವಾಬ್ದಾರಿ ಎಂದು ಅವನು ತಿಳಿಸಿದನು. ಬೇರೆಯ ದೇಶಗಳಿಗೆ ಅಪಾಯಕರವಲ್ಲದ ಸ್ಪೇನದ ಆಂತರಿಕ ಕ್ರಾಂತಿಯು ಹೋಲಿ ಅಲಾಯನ್ಸದ ಕಕ್ಷೆಯಲ್ಲಿ ಬರುವದಿಲ್ಲವೆಂದೂ ತಿಳಿಸಿದನು.

ಇಂಗ್ಲಂಡು ಶ್ರದ್ಧಾಪೂರ್ವಕವಾಗಿ ವರ್ತಿಸುತ್ತಿಲ್ಲವೆಂದು ಯುರೋಪದ ಮುತ್ಸದ್ದಿಗಳು ಪ್ರಥಮದಲ್ಲಿ ಅಂದುಕೊಂಡರು. ಮುಂದೆ, ನೇಪಲ್ಸ್, ಪೀಡ್ಮಾಂಟ್ ಮತ್ತು ಪೋರ್ತುಗಾಲ್‌ಗಳಲ್ಲಿಯೂ ಪ್ರಜಾಪ್ರಭುತ್ವದ ಕ್ರಾಂತಿಗಳೆದ್ದವು. ಈ ಮೂರೂ ಕಡೆಗಳಲ್ಲಿ ಕ್ರಾಂತಿಕಾರರು ಉದಾರ ಘಟನೆ (Liberal Constitution) ಗಳನ್ನು ಬಯಸಿದರು. ಮೊದಲನೆಯ ಎರಡು ಕ್ರಾಂತಿಗಳು ಮೆಟರ್ನಿಕನಿಗೆ ಸಂಬಂಧಪಟ್ಟಿದ್ದವು. ಆದ್ದರಿಂದ ರಶಿಯವು ಸೂಚಿಸಿದ್ದ ಸಮ್ಮೇಳನದ ವಿಚಾರವನ್ನು ಅವನು

ಒಪ್ಪಿಕೊಂಡನು. ಕ್ಯಾಸಲ್ರೀಗೆ ಸಮ್ಮೇಳನವು ಬೇಕಾಗಿರಲಿಲ್ಲವಾದ್ದರಿಂದ, ಅದರಲ್ಲಿ ಇಂಗ್ಲಂಡನ್ನು ಪ್ರತಿನಿಧಿಸಲು ಕೆಲ ಗೌಣ ಅಧಿಕಾರಿಗಳನ್ನು ಕಳುಹಿಸಿದನು.

೧೮೨೦ರ ಕೊನೆಯಲ್ಲಿ ಟ್ರೊಪೌ (Troppau) ಎಂಬಲ್ಲಿ ಸಮ್ಮೇಳನವು ಕೂಡಿತು. ಬಹಳವಾಗಿ ಸಿಟ್ಟಿಗೆದ್ದ ರಷ್ಯಾರ ಅಲೆಗ್ಝಾಂಡರನು ಮೆಟರ್ನಿಕ್ ಮತ್ತು ಪ್ರಶಿಯಾಗಳನ್ನು ಒಪ್ಪಿಸಿ ಮತ್ತೊಂದು ಪ್ರಕಟನೆಯನ್ನು ಹೊರಡಿಸಿದನು. ಯಾವುದೇ ಜನತೆಯು ತನ್ನ ರಾಜನ ಮೇಲೆ ಬಂಡೆಬ್ಬಿಸುವ ಅಧಿಕಾರ ಪಡೆದಿಲ್ಲವೆಂದೂ, ಇಂತಹ ಕ್ರಾಂತಿಯು ಎಲ್ಲಿ ತಲೆದೋರಿದರಲ್ಲಿ ಅದನ್ನು ಹತ್ತಿಕ್ಕಲು ತಾವು ಯುದ್ಧವನ್ನೇ ಹೂಡುವುದಾಗಿಯೂ ಈ ಮೂರೂ ದೊರೆಗಳು ಪ್ರಕಟನೆಯಲ್ಲಿ ತಿಳಿಸಿದರು. ಈ ಭಾವನೆಗಳನ್ನು ತಿಳಿದ ಕ್ಯಾಸಲ್ರೀಯು, ಟ್ರೊಪೌ ಪ್ರಕಟನೆಯು 'ವ್ಯವಹಾರಜ್ಞಾನರಹಿತ'ವಾಗಿದೆ ಎಂದು ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟನು.

ಮಿತ್ರ ರಾಷ್ಟ್ರಗಳ ಒಡಕು ದಿನೇ ದಿನೇ ಹೆಚ್ಚಾಯಿತು. ಆದರೂ ನೇಪಲ್ಸ್ ಮತ್ತು ಪೀಡ್ಮಾಂಟ್‌ಗಳಲ್ಲಿಯ ಕ್ರಾಂತಿ-ಗಳನ್ನು ಹತ್ತಿಕ್ಕಲು ಅಲೆಗ್ಝಾಂಡರನು ಮೆಟರ್ನಿಕ್‌ನನ್ನು ಹೋಲಿ ಅಲಾಯನ್ಸ್‌ದ ಪ್ರತಿನಿಧಿಯೆಂದು ನೇಮಿಸಿದನು. ೧೮೨೧ರಲ್ಲಿ ಆಸ್ಟ್ರಿಯಾದ ಸೈನ್ಯವು ಇಟಲಿಯೊಳನುಗ್ಗಿ, ಪೀಡ್ಮಾಂಟ್ ಮತ್ತು ನೇಪಲ್ಸಗಳಲ್ಲಿಯ ಕ್ರಾಂತಿಗಳನ್ನು ಬಗ್ಗುಬಡಿದು, ಅಲ್ಲಿಯ ರಾಜರನ್ನು ಪುನಃ ಅಧಿಕಾರಕ್ಕೆ ತಂದಿತು. ಈ ಕಾರ್ಯದಲ್ಲಿ ತನ್ನದೇನೂ ಸಂಬಂಧವಿಲ್ಲವೆಂದು ಕ್ಯಾಸಲ್ರೀಯು ಬಹಿರಂಗ ಹೇಳಿಕೆ ಕೊಟ್ಟನು.

ಅಂತರ ರಾಷ್ಟ್ರೀಯ ಸರಕಾರವು ಇಲ್ಲಿಗೆ ಕೊನೆಗೊಂಡಿತೆಂದು ಅನೇಕರು ಭಾವಿಸಬಹುದು. ಆದರೆ ಪರಿಸ್ಥಿತಿಯು ಇನ್ನೂ ಅಷ್ಟಕ್ಕೆ ಬಂದಿರಲಿಲ್ಲ. ೧೮೨೧ ರಲ್ಲಿ ಗ್ರೀಕರು, ತಮ್ಮನ್ನಾಳುತ್ತಿದ್ದ ಟರ್ಕಿಯ ಸುಲ್ತಾನನ ವಿರುದ್ಧ ಕ್ರಾಂತಿ ನಡೆಸಿದಾಗ ಮೆಟರ್ನಿಕನು ರಾಜಪ್ರಭುತ್ವವನ್ನುಳಿಸಲೋಸುಗ, ಸುಲ್ತಾನನ ಸಹಾಯಕ್ಕೆ ಹೋಗಲು ತಯಾರಾದನು. ಆದರೆ ರಶಿಯವು ಮಾತ್ರ, ತನ್ನ ಜಾತಿಯವರೇ ಆದ ಗ್ರೀಕರಿಗೆ ನೆರವಾಗಿ, ಕ್ರಾಂತಿಯನ್ನು ಬೆಂಬಲಿಸಲು ಸಿದ್ಧವಾಗಿತ್ತು. ಈ ಸಂದಿಗ್ಧ ಸಮಯದಲ್ಲಿ ಮತ್ತೊಂದು ಸಮ್ಮೇಳನವನ್ನು ಕರೆಯಲಾಯಿತು.

೧೮೨೨ ರ ಶರತ್ಕಾಲದಲ್ಲಿ ಸಮ್ಮೇಳನವು ವೆರೋನಾ (Verona) ಎಂಬಲ್ಲಿ ಕೂಡಿತು. ಯಾವುದೇ ದೇಶದ ಒಳ ಆಡಳಿತದಲ್ಲಿ ಕೈಹಾಕಲು ತಾನು ಮಾತ್ರ ತನ್ನ ದೇಶ ಸಿದ್ಧವಿಲ್ಲವೆಂದು ಇಂಗ್ಲಂಡದ ಪ್ರತಿನಿಧಿಯಾದ ಕ್ಯಾನಿಂಗನು (ಕ್ಯಾಸಲ್ರೀಯು ತೀರಿಕೊಂಡಿದ್ದನು) ಸ್ಪಷ್ಟಪಡಿಸಿದನು. ಈ ಮನೋಭಾವನೆಯಿಂದಾಗಿ ಸಮ್ಮೇಳನ ಸರಕಾರಕ್ಕೆ ಧಕ್ಕೆಯಾಯಿತಾದರೂ ಅದಿನ್ನೂ ಕೊನೆಗೊಳ್ಳಲಿಲ್ಲ. ೧೮೨೪ರಲ್ಲಿ ಅಲೆಗ್ಝಾಂಡರನು ಮತ್ತೊಂದು ಸಮ್ಮೇಳನವನ್ನು ಕರೆದನು. ಇಂಗ್ಲಂಡು ಈ ಕರೆಯನ್ನು ಮನ್ನಿಸಲಿಲ್ಲ. ಆದ್ದರಿಂದ ಉಳಿದ ದೊರೆಗಳಷ್ಟೇ ೧೮೨೫ರ ಜನವರಿಯಲ್ಲಿ ಸೇಂಟ್‌ಪೀಟರ್ಸ್‌ಬರ್ಗದಲ್ಲಿ ಸಭೆ ಸೇರಿ ಏನನ್ನೂ ನಿರ್ಣಯಿಸಲಾಗದೆ ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಚದುರಿದರು. ಇಲ್ಲಿಗೆ ಸಮ್ಮೇಳನ ಸರಕಾರವು ಕೊನೆಗೊಂಡಿತೆಂದು ಹೇಳಬಹುದು.

ಬಲಪ್ರಯೋಗದಿಂದ ಬೇರೆ ಬೇರೆ ದೇಶಗಳ ಅಂತರಿಕ ವಿಷಯಗಳಲ್ಲಿ ಕೈಹಾಕಲೆಳಸಿದ, ಚಿಕ್ಕ ರಾಷ್ಟ್ರಗಳನ್ನು ಪ್ರತಿನಿಧಿಸದ ಮತ್ತು ಅವರ ಇಷ್ಟಾರ್ಥಗಳಿಗೆ ಬೆಲೆ ಕೊಡದ ಹೋಲಿ ಅಲಾಯನ್ಸ್ ಬಹಳ ದಿನಗಳ ವರೆಗೆ ಬಾಳುವುದು ಸಾಧ್ಯವಿರಲಿಲ್ಲ. ದೊರೆಗಳ ವೈಯಕ್ತಿಕ ಸಮಾಲೋಚನೆ ಮತ್ತು ಪರಸ್ಪರ ನಂಬಿಗೆಯಿಂದ ಕಾರ್ಯವಾಡಲೆಳಸಿದ 'ಹೋಲಿ ಅಲಾಯನ್ಸ್'ದ ವಿಚಾರವೇನೋ ಪ್ರಶಂಸಾರ್ಹವಾದುದು. ಕ್ಯಾಸಲ್ರೀ ಮತ್ತು ಮೆಟರ್ನಿಕ್ ಇಬ್ಬರೂ ಈ ಸಂಸ್ಥೆಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟರಾದರೂ ಝಾರ ಅಲೆಗ್ಝಾಂಡರನ ಓಟವು ಇವರಿಬ್ಬರಿಗೂ ನಿಲುಕದಂತಹದಾಗಿತ್ತು. ೧೮೨೨ ರಿಂದ ಮುಂದೆ ಸಮ್ಮೇಳನ ಸರಕಾರವು, ಜನತೆಯ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಮಾಡಿಕೊಂಡ ದೊರೆಗಳ ಒಂದು ಕೂಟವಾಗಿ ಪರಿಣಮಿಸಿತು. ಜನಾಭಿಪ್ರಾಯದ ಆಧಾರದ ಮೇಲೆಯೇ ರಚಿತವಾದ ಸರಕಾರವನ್ನು ಹೊಂದಿದ ಇಂಗ್ಲಂಡು, ಇಂತಹ ಒಂದು ಸಂಸ್ಥೆಯ ಮುಂದುವರಿಯುವಿಕೆಯನ್ನು ಕಂಡು ಸುಮ್ಮನಿರಲು ಸಾಧ್ಯವಿರಲಿಲ್ಲ. ಈ ಸಂಸ್ಥೆಯಲ್ಲಿ ಪ್ರಾತಿನಿಧ್ಯವಿಲ್ಲದ ಅನೇಕ ಚಿಕ್ಕ ರಾಷ್ಟ್ರಗಳು ಸಹಜವಾಗಿಯೇ ಇದನ್ನು ವಿರೋಧಿಸಿದವು. ಕೇವಲ ಸ್ವಾರ್ಥ ಸಾಧನೆಗಾಗಿಯೇ ಕಟ್ಟಿಕೊಂಡ ಯಾವ ಸಂಸ್ಥೆಯ ಹಣೆಬರೆಹವಾದರೂ ಇಷ್ಟೇ.

---

೪. ಅಂತರರಾಷ್ಟ್ರೀಯ ವಿಪ್ಲವ ಕಾಲ

ಹೋಲಿ ಅಲಾಯನ್ಸ್, ಏನೇ ಕುಂದುಕೊರತೆಗಳನ್ನು ಹೊಂದಿದ್ದರೂ ಸಹ, ೧೮೧೫ ಮತ್ತು ೧೮೪೮ ರ ನಡುವಿನ ಕಾಲದಲ್ಲಿ ಯುರೋಪದಲ್ಲಿ ಯಾವುದೇ ದೊಡ್ಡ ಯುದ್ಧಕ್ಕೆ ಇದು ಎಡೆಕೊಡದುದು ಗಮನಾರ್ಹವಾದ ವಿಷಯ. ಯುರೋಪದಲ್ಲಿ ಎಲ್ಲ ಪ್ರಗತಿಪರ ವಿಚಾರಗಳನ್ನು ಹತ್ತಿಕ್ಕಲು, ಕ್ರಾಂತಿಯಾಗದಂತೆ ನೋಡಿಕೊಳ್ಳಲು, ವಿಯೆನ್ನಾದ ರಾಜಕೀಯ ವ್ಯವಸ್ಥೆ ಸ್ವಲ್ಪವೂ ಬದಲಾಗದಂತೆ ಕಾಪಾಡಿಕೊಳ್ಳಲು, ಹೋಲಿ ಅಲಾಯನ್ಸ್‌ದ ಪ್ರಮುಖನಾದ ಮೆಟರ್ನಿಕನು ಬಹು ಪರಿಶ್ರಮಪಟ್ಟನಾದರೂ, ನಿರಂತರವಾಗಿ ಈ ಕಾರ್ಯ ಸಾಗಿಸುವುದು ಸಾಧ್ಯವಿರಲಿಲ್ಲ. ಅಂತೆಯೇ, ೧೮೪೮ ರಲ್ಲಿ ಫ್ರಾನ್ಸ್, ಇಟಲಿ, ಜರ್ಮನಿ, ಹಂಗೇರಿ, ಬೊಹೀಮಿಯಾ ಮತ್ತು ಇತರೆಡೆಗಳಲ್ಲಿ ಕ್ರಾಂತಿಯು ತಲೆ ಎತ್ತಿ ಮೆಟರ್ನಿಕನನ್ನೂ ಅವನ ವ್ಯವಸ್ಥೆಯನ್ನೂ ಕೊನೆಗೊಳಿಸಿತು.

೧೯ ನೆಯ ಶತಮಾನದ ಉತ್ತರಾರ್ಧದಲ್ಲಿ, ಅಂದರೆ ಮೆಟರ್ನಿಕನ ನಂತರದ ಯುರೋಪದಲ್ಲಿ, ರಾಷ್ಟ್ರೀಯತೆಯು ಒಂದು ಬಹು ತೀಕ್ಷ್ಣವಾದ ಶಕ್ತಿಯಾಗಿ ಪರಿಣಮಿಸಿತು. ಒಂದೇ ಬುಡಕಟ್ಟಿಗೆ ಸೇರಿದ ಎಲ್ಲ ಜನರೂ ಒಂದು ನಿರ್ದಿಷ್ಟ ಭೂ-ಪ್ರದೇಶದಲ್ಲಿ ವ್ಯವಸ್ಥಿತವಾಗಿ ತಮ್ಮದೇ ಸರಕಾರವನ್ನು ಹೊಂದುವುದರ ಮೂಲಕ ಸರ್ವ-ಸ್ವತಂತ್ರ ರಾಷ್ಟ್ರ-ರಾಜ್ಯಗಳನ್ನು ಹೊಂದಬೇಕು ಎಂಬ ಒಂದು ತತ್ವವು ಕ್ರಮೇಣವಾಗಿ

ತಲೆ ಎತ್ತಿತು. ಈ ತತ್ವವು ಆಚರಣೆಗೆ ಬರಬೇಕಿದ್ದರೆ ಟರ್ಕಿ ಮತ್ತು ಆಸ್ಟ್ರಿಯಾ ಸಾಮ್ರಾಜ್ಯಗಳಂಥ ಕೆಲ ಸಾಮ್ರಾಜ್ಯಗಳು ಒಡೆದು, ಅದರಲ್ಲಿದ್ದ ಅನೇಕ ಜನಾಂಗಗಳು ಸ್ವತಂತ್ರ ರಾಷ್ಟ್ರಗಳನ್ನು ರಚಿಸಿಕೊಳ್ಳಬೇಕಿತ್ತು. ಮತ್ತು ಇಟಲಿ ಮತ್ತು ಜರ್ಮನಿಗಳಂಥ ಹರಿದು ಹಂಚಿಹೋಗಿದ್ದ ಅನೇಕ ರಾಷ್ಟ್ರಗಳು ಒಂದುಗೂಡಬೇಕಿತ್ತು. ೧೮೪೮ ರಿಂದ ಮುಂದೆ ಸುಮಾರು ೧೮೭೧ರ ವರೆಗೆ ಯುರೋಪದಲ್ಲಿ ಇಂತಹ ಚಳವಳಿಯು ಒಂದು ಕಾಲವೇ ಒದಗಿ ಬಂತೆಂದರೆ ತಪ್ಪಾಗದು. ಈ ವೇಳೆಯಲ್ಲಿ ಕವೂರ (Cavour) ನ ನೇತೃತ್ವದಲ್ಲಿ ಐಕ್ಯವನ್ನು ಸಾಧಿಸಿದ ಇಟಲಿ, ಮತ್ತು ಬಿಸ್ಮಾರ್ಕ (Bismarck) ನ ನಾಯಕತ್ವದಲ್ಲಿ ಒಂದುಗೂಡಿದ ಜರ್ಮನಿ ಇವೆರಡೂ ಯುರೋಪದ ಪ್ರಮುಖ ರಾಷ್ಟ್ರಗಳಾಗಿ ಪರಿಣಮಿಸಿದವು.

೧೯ ನೆಯ ಶತಮಾನದಲ್ಲಿ ತನ್ನ ಪ್ರಭಾವವನ್ನು ಬಹುವಾಗಿ ಬೀರಿದ ಇನ್ನೊಂದು ಘಟನೆಯೆಂದರೆ ಔದ್ಯೋಗಿಕ ಕ್ರಾಂತಿ. ವಸ್ತುಗಳನ್ನು ತಯಾರಿಸುವಲ್ಲಿ ಮಾನವನ ಕೈಯ ಬದಲು ಯಂತ್ರೋಪಕರಣಗಳನ್ನು ಬಳಸುವ ಪದ್ಧತಿಯು ಹೆಚ್ಚು ಹೆಚ್ಚಾಗಿ ಬೆಳೆದುಬಂದು, ಯುರೋಪದ ಅನೇಕ ರಾಷ್ಟ್ರಗಳು ಔದ್ಯೋಗೀಕರಣಕ್ಕೊಳಗಾದವು. ಇದರಿಂದಾಗಿ ಈ ರಾಷ್ಟ್ರಗಳು ಮುಖ್ಯವಾಗಿ ಎರಡು ಸಮಸ್ಯೆಗಳನ್ನೆದುರಿಸಬೇಕಾಯಿತು — ಯಂತ್ರಗಳಿಗೆ ಬೇಕಾಗುವ ಅಪಾರವಾದ ಕಚ್ಚಾ ಮಾಲನ್ನು ಒದಗಿಸುವದು ಮತ್ತು ಯಂತ್ರಗಳಿಂದ ತಯಾರಾದ ಹೆಚ್ಚಿನ ಸಿದ್ಧ ವಸ್ತುಗಳನ್ನು ಮಾರುವದು. ಈ ಎರಡೂ ಸಮಸ್ಯೆಗಳಿಗೆ ಉತ್ತರವಾಗಿ ರಾಷ್ಟ್ರಗಳು 'ವಸಾ–

ಹತು'ಗಳನ್ನು ಹುಡುಕಲುಪಕ್ರಮಿಸಿದವು. ಇದೇ ವೇಳೆಗೆ ಆಫ್ರಿಕಾ ಖಂಡವು ಕಂಡುಹಿಡಿಯಲ್ಪಟ್ಟಿತಾದ್ದರಿಂದ ಅಲ್ಲಿ ವಸಾಹತುಗಳನ್ನು ಸಂಪಾದಿಸುವುದಕ್ಕೋಸ್ಕರ ಯುರೋಪದ ಪ್ರಮುಖ ರಾಷ್ಟ್ರಗಳಲ್ಲಿ ಪೈಪೋಟಿ ಪ್ರಾರಂಭವಾಯಿತು.

ಇಟಲಿ ಮತ್ತು ಜರ್ಮನಿ ರಾಷ್ಟ್ರಗಳೇರ್ಪಟ್ಟಂದಿನಿಂದ (೧೮೭೧) ಯುರೋಪದಲ್ಲಿ ರಾಷ್ಟ್ರಗಳ ಗುಂಪುಗಾರಿಕೆಯು ಪ್ರಾರಂಭವಾಯಿತೆಂದರೆ ತಪ್ಪಾಗದು. ಪ್ರತಿಯೊಂದು ರಾಷ್ಟ್ರವೂ ತನ್ನ ಸುರಕ್ಷತೆಯ ಸಲುವಾಗಿ ಹಲವು ರಾಷ್ಟ್ರಗಳ ಸ್ನೇಹವನ್ನು ಗಳಿಸಲೆತ್ನಿಸಿತು. ಇದರಿಂದಾಗಿ ಸುಮಾರು ೧೯೦೭ ರ ವೇಳೆಗೆ ಯುರೋಪದ ಆರು ಪ್ರಮುಖ ರಾಷ್ಟ್ರಗಳು ಎರಡು ಗುಂಪಾಗಿ ಒಡೆಯಲ್ಪಟ್ಟವು — ಟ್ರಿಪಲ್ ಅಲಾಯನ್ಸ್ (Triple Alliance) ಎಂದು ಕರೆಯಲ್ಪಟ್ಟ ಜರ್ಮನಿ, ಇಟಲಿ ಮತ್ತು ಆಸ್ಟ್ರಿಯದ ಒಂದು ಗುಂಪು; ಟ್ರಿಪಲ್ ಎಂತೆಂತ್ (Triple Entente) ಎಂದು ಕರೆಯಲ್ಪಟ್ಟ ಇಂಗ್ಲಂಡು, ರಶಿಯಾ ಮತ್ತು ಫ್ರಾನ್ಸದ ಗುಂಪು.

ಈ ಎರಡು ಗುಂಪುಗಳಲ್ಲಿ ಸಾಕಷ್ಟು ಮಾತ್ಸರ್ಯ ಮತ್ತು ಘರ್ಷಣೆಗಳಿದ್ದವು. ೧೯ನೆಯ ಶತಮಾನದ ಕೊನೆಯ ವರ್ಷಗಳ ಮತ್ತು ಇಪ್ಪತ್ತನೆಯ ಶತಮಾನದ ಪ್ರಾರಂಭದ ವರ್ಷಗಳ ಅಂತರರಾಷ್ಟ್ರೀಯ ವ್ಯವಹಾರ ನಿರ್ವಹಣೆಯನ್ನು ಪರಿಶೀಲಿಸಿದಲ್ಲಿ, ಈ ಎರಡೂ ಗುಂಪುಗಳಲ್ಲಿ ಇದ್ದ ಯುದ್ಧಸನ್ನಾಹ ಸ್ಪರ್ಧೆಯು ವ್ಯಕ್ತವಾಗುವದು. ಪ್ರತಿಯೊಂದು ರಾಷ್ಟ್ರವೂ ತನ್ನ

ಸೇನಾಬಲವನ್ನು ಹೆಚ್ಚಿಸುವದರಲ್ಲಿಯೂ ಮತ್ತು ಸೈನಿಕರಿಗೆ ಅತ್ಯಾಧುನಿಕ ಯುದ್ಧೋಪಕರಣಗಳನ್ನೊದಗಿಸುವುದರಲ್ಲಿಯೂ ಮಗ್ನವಾಗಿದ್ದಿತು. ಇಂಗ್ಲೆಂಡ ಮತ್ತು ಜರ್ಮನಿಗಳಲ್ಲಂತೂ ಹೊಸ ಹೊಸ ನೌಕಾ ಸಾಮಗ್ರಿಗಳನ್ನೊದಗಿಸಿಕೊಳ್ಳುವಲ್ಲಿ ಒಂದು ಸ್ಪರ್ಧೆಯೇ ನಡೆದಿತ್ತು.

ಯುದ್ಧಸನ್ನಾಹಕ್ಕೆ ಹಣವು ಬಹುದೊಡ್ಡ ಮೊತ್ತಗಳಲ್ಲಿ ಖರ್ಚಾಯಿತು. ಇದನ್ನು ಕಂಡ ರಶಿಯದ ಝಾರನು (ಎರಡನೆಯ ನಿಕೊಲಸ್) ೧೮೯೯ ರಲ್ಲಿ ಹೇಗ್ (The Hague) ಎಂಬಲ್ಲಿ ಜಗತ್ತಿನ ಎಲ್ಲ ಸರ್ವಸ್ವತಂತ್ರ ರಾಷ್ಟ್ರಗಳ ಪ್ರತಿನಿಧಿಗಳ ಸಮ್ಮೇಳನವೊಂದನ್ನು ಕೂಡಿಸಿ, ನಿಶ್ಶಸ್ತ್ರೀಕರಣ ಪ್ರಶ್ನೆಯನ್ನು ಚರ್ಚಿಸಲೆತ್ನಿಸಿದನು. ನಿಶ್ಶಸ್ತ್ರೀಕರಣವು ಒಂದು ಉಪಯುಕ್ತ ಯೋಜನೆ ಎಂಬುದನ್ನು ಸಮ್ಮೇಳನಕ್ಕೆ ಬಂದಿದ್ದ ಎಲ್ಲರೂ ಒಪ್ಪಿಕೊಂಡರು. ಅಂತರರಾಷ್ಟ್ರೀಯ ಕಲಹಗಳನ್ನು ಬಗೆಹರಿಸಲು ಒಂದು ಖಾಯಂ ನ್ಯಾಯಾಲಯವನ್ನು ಈ ಸಭೆ ಸ್ಥಾಪಿಸಿತು.

ಆದರೂ ಯುದ್ಧ ಸನ್ನಾಹಕ್ಕೆ ಆಗುತ್ತಿದ್ದ ಖರ್ಚು ಮಾತ್ರ ದಿನೇ ದಿನೇ ಹೆಚ್ಚುತ್ತ ಹೋಯಿತು. ರಶಿಯದ ಝಾರನಿಂದಲೇ ಕರೆಯಲ್ಪಟ್ಟ ಎರಡನೆಯ ನಿಶ್ಶಸ್ತ್ರೀಕರಣ ಸಮ್ಮೇಳನವು ೧೯೦೭ ರಲ್ಲಿ ಮತ್ತೆ ಕೂಡಿತು. ಇದರಿಂದಲೂ ಯಾವ ಹೆಚ್ಚಿನ ಉಪಯೋಗವಾಗಲಿಲ್ಲ.

೧೫ ಮತ್ತು ೧೬ನೆಯ ಶತಮಾನದಲ್ಲಿ ಬಹು ವಿಸ್ತಾರವಾಗಿದ್ದ ಟರ್ಕಿ ಸಾಮ್ರಾಜ್ಯವು, ೧೯ ನೆಯ ಶತಮಾನದಲ್ಲಿ,

ತನ್ನ ಅಧೀನ ಜನಾಂಗಗಳ ಸ್ವಾಂತತ್ರ್ಯಗಳಿಕೆಯಿಂದಾಗಿ, ಕ್ರಮೇಣ ಕರಗುತ್ತ ಬಂತು. ಹಾಳಾಗುತ್ತಿದ್ದ ಟರ್ಕಿ ಸಾಮ್ರಾಜ್ಯದ ಸ್ಥಾನವನ್ನು ಪಡೆಯಲು ಆಸ್ಟ್ರಿಯ ಮತ್ತು ರಶಿಯಗಳು ಹಾತೊರೆಯುತ್ತಿದ್ದವು. ಹೀಗಾಗಿ ಇವರೀರ್ವರ ಮಧ್ಯೆ ವೈಷಮ್ಯವಿತ್ತು. ಮೊದಲಿಗೆ ಟರ್ಕಿ ಸಾಮ್ರಾಜ್ಯದ ಅಧೀನದಲ್ಲಿದ್ದು, ಸ್ವಾತಂತ್ರ್ಯಗಳಿಸಿದ್ದ ಸರ್ಬಿಯವು ' ಸ್ಲಾವ ' (Slavs, Pan-Slavism) ಜನಾಂಗದ ಅಭ್ಯುದಯಕ್ಕಾಗಿ ಶ್ರಮಿಸುತ್ತಿತ್ತು. ಮುಖ್ಯವಾಗಿ ' ಸ್ಲಾವ ' ಜನಾಂಗವನ್ನೇ ಹೊಂದಿದ್ದ ಬೋಸ್ನಿಯ - ಹರ್ಜಿಗೋವಿನ (Bosnia-Herzegovina) ಪ್ರಾಂತಗಳನ್ನು ಪಡೆದು ತನ್ನ ಜನಾಂಗವನ್ನೆಲ್ಲ ಒಂದುಗೂಡಿಸುವ ಹವಣಿಕೆಯಲ್ಲಿತ್ತು. ಇದೇ ವೇಳೆಗೆ ಆ ಪ್ರಾಂತಗಳನ್ನು ಆಸ್ಟ್ರಿಯವು ತನ್ನ ಸ್ವಾಧೀನಪಡಿಸಿಕೊಂಡಿತು. ತನ್ನ ಜನಾಂಗದ ಪ್ರಾಂತಗಳ ಸಲುವಾಗಿ ಹೋರಾಡಲು ಸರ್ಬಿಯವು ಸಿದ್ಧವಾಗಿತ್ತು. ಅದರ ನೆರವಿಗೆ ನಿಲ್ಲಲು ರಶಿಯವೂ ತಯಾರಾಗಿತ್ತು. ರಶಿಯವು ಸರ್ಬಿಯದ ಪರವಾಗಿ ಆಸ್ಟ್ರಿಯದೆದುರು ನಿಲ್ಲುವದಾದರೆ, ತಾನು ಆಸ್ಟ್ರಿಯದ ಪಕ್ಷವಹಿಸುವುದಾಗಿ ಜರ್ಮನಿಯು ಈ ಸಂದರ್ಭದಲ್ಲಿ ತಿಳಿಸಿತಾದ್ದರಿಂದ, ಒದಗಬಹುದಾಗಿದ್ದ ಒಂದು ಅಂತರ ರಾಷ್ಟ್ರೀಯ ಕದನಕ್ಕೆ ತಡೆಬಿತ್ತು.

೧೯೧೨-೧೩ ರ "ಬಾಲ್ಕನ್ ಯುದ್ಧಗಳ" ಪರಿಣಾಮವಾಗಿ ಸರ್ಬಿಯವು ಬಹಳಷ್ಟು ಭೂಪ್ರದೇಶವನ್ನು ಪಡೆಯಿತು. ಅದು ಗಳಿಸಿದ ಪ್ರತಿಷ್ಠೆಯನ್ನು ಸಹಿಸಲು ಆಸ್ಟ್ರಿಯಕ್ಕೆ ಅಸಾಧ್ಯವಾಯಿತು. ಏಕೆಂದರೆ, ಪ್ರಬಲ ಸರ್ಬಿಯವು ಆಸ್ಟ್ರಿಯದ

ಏಳಿಗೆಗೆ ಅಡ್ಡಿಯಾಗುವದು. ಹೀಗಾಗಿ ಸರ್ಬಿಯುವನ್ನು ಹತ್ತಿಕ್ಕಲು ಸರಿಯಾದ ಅವಕಾಶವನ್ನೆದುರುನೋಡುತ್ತ ಆಸ್ಟ್ರಿಯುವು ಕಾಳಿತಿತು.

ಇಂತಹ ಅವಕಾಶವೊದಗಲು ಬಹಳ ದಿನಗಳೇನೂ ಹಿಡಿಯಲಿಲ್ಲ. ಜೂನ ೧೯೧೪ ರಲ್ಲಿ ಆದ "ಸೆರಜೇವ್ಹೋ ಕೊಲೆ"ಯು ಈ ಎರಡೂ ರಾಷ್ಟ್ರಗಳಲ್ಲಿದ್ದ ಮಾತ್ಸರ್ಯವನ್ನು ಕದಡಿತು. ಆಸ್ಟ್ರಿಯ ಸಿಂಹಾಸನದ ಉತ್ತರಾಧಿಕಾರಿಯಾಗಿದ್ದ ಫ್ರಾನ್ಸಿಸ್ ಫರ್ಡಿನಂಡ್ (Francis Ferdinand) ಮತ್ತು ಆತನ ಹೆಂಡತಿಯು ಬೋಸ್ನಿಯದ ರಾಜಧಾನಿಯಾದ ಸೆರಜೇವ್ಹೋಕ್ಕೆ ಭೆಟ್ಟಿಕೊಟ್ಟಾಗ, ಅಲ್ಲಿ ಅವರೀರ್ವರೂ ಕೊಲೆಗೈಯಲ್ಪಟ್ಟರು. ಕೊಲೆಗಡುಕನು ಆಸ್ಟ್ರಿಯ ಸಾಮ್ರಾಜ್ಯದ ಪ್ರಜೆಯಾಗಿದ್ದನಾದರೂ, 'ಸ್ಲಾವ' ಜನಾಂಗದವನಿದ್ದನು. ಆದ್ದರಿಂದ, ಸರ್ಬಿಯದ ಸರಕಾರದಿಂದಲೇ ಈ ಕೊಲೆಯು ಪ್ರಚೋದಿತವಾಗಿದೆಯೆಂದು ಆಸ್ಟ್ರಿಯ ಸರಕಾರವು ಪರಿಗಣಿಸಿ, ತನ್ನ ಅಂತಿಮ ನಿರ್ಧಾರ (Ultimatum) ವನ್ನು ಸರ್ಬಿಯಕ್ಕೆ ತಿಳಿಸಿತು. ಅದೇನೆಂದರೆ, ಸರ್ಬಿಯವು ಕ್ಷಮಾಯಾಚನೆ ಮಾಡಬೇಕು. ಇಲ್ಲವೆ ಯುದ್ಧಕ್ಕೆ ಸಿದ್ಧವಾಗಬೇಕು ಎಂದು. ಸರ್ಬಿಯವು ಕೂಡಲೇ ಉತ್ತರವನ್ನು ಕಳಿಸಿತು. ಉತ್ತರವು ಸಮಂಜಸವಾಗಿಲ್ಲವೆಂದು ಬಗೆದ ಆಸ್ಟ್ರಿಯ, ಸರ್ಬಿಯದ ರಾಜಧಾನಿಯಾದ ಬೆಲಗ್ರೇಡ್ ಪಟ್ಟಣವನ್ನು ಆಕ್ರಮಿಸಿತು. ರಶಿಯವು ಸರ್ಬಿಯಕ್ಕೆ ನೆರವಾಯಿತು. ಜರ್ಮನಿಯು ರಶಿಯದ ವಿರುದ್ಧ ಯುದ್ಧ ಘೋಷಿಸಿತು. ಫ್ರಾನ್ಸು ರಶಿಯದ ಪರವಾಗಿ ಯುದ್ಧವನ್ನು ಪ್ರವೇಶಿಸಿತು. ಜರ್ಮನ್ ಸೇನೆಯು ತಟಸ್ಥ

ಬೆಲ್ಜಿಯಮ್ದ ಮೂಲಕ ಹಾಯಲು ಪ್ರಯತ್ನಿಸಿದಾಗ, ಇಂಗ್ಲಂಡ ಸಹ ಯುದ್ಧದಲ್ಲಿ ಭಾಗವಹಿಸಲು ತೀರ್ಮಾನಿಸಿ, ರಶಿಯ ಮತ್ತು ಫ್ರಾನ್ಸಗಳ ಪಕ್ಷ ವಹಿಸಿತು. ಜಾಗತಿಕ ಮಹಾ ಯುದ್ಧವು ಪ್ರಾರಂಭವಾಯಿತು. ಟ್ರಿಪಲ್ ಅಲಾಯನ್ಸದ ಮೂರನೆಯ ರಾಷ್ಟ್ರವಾದ ಇಟಲಿಯು ಸದ್ಯಕ್ಕೆ ಯುದ್ಧವನ್ನು ಸೇರಲಿಲ್ಲ.

ಈ ರೀತಿ ೧೯೧೪ ರ ಆಗಸ್ಟ ತಿಂಗಳಲ್ಲಿ ಪ್ರಾರಂಭವಾದ "ಮೊದಲನೆಯ ಜಾಗತಿಕ ಮಹಾಯುದ್ಧ"ವು ೧೯೧೮ ರ ನವ್ಹಂಬರದ ವರೆಗೆ ನಡೆಯಿತು. ಜಗತ್ತಿನ ಮುಖ್ಯಾಲು ಪಾಲು ರಾಷ್ಟ್ರಗಳು ಭಾಗವಹಿಸಿದ್ದ ಈ ಯುದ್ಧವು ಭಯಾನಕವಾ-ಗಿತ್ತು. ಪ್ರಪಂಚವು ಹಿಂದೆಂದೂ ಕಾಣದಿದ್ದಷ್ಟು ನಷ್ಟವ ನ್ನುಂಟುಮಾಡಿದ ಈ ಯುದ್ಧವು, ಭೂಮಿ, ಸಾಗರ ಮತ್ತು ಆಕಾಶ ಮೂರರಲ್ಲಿಯೂ ನಡೆಯಿತು. ಜರ್ಮನ್ನರು ಅನೇಕ ಹೊಸ ಹೊಸ ಯುದ್ಧಸಾಮಗ್ರಿಗಳನ್ನು ಬಳಕೆಗೆ ತಂದರು. ಮೊದಲನೆಯ ಬಾರಿಗೆ ಈ ಯುದ್ಧದಲ್ಲಿ ಸೈನಿಕರಲ್ಲದವರೂ ಸಹ ಎಳೆಯಲ್ಪಟ್ಟರು.

ಯುದ್ಧವು ತನ್ನ ಉನ್ನತ ಶಿಖಿರವನ್ನು ಮುಟ್ಟಿದಾಗ ಇಷ್ಟು ರಾಷ್ಟ್ರಗಳನ್ನೊಳಗೊಂಡಿತ್ತು-ಅಕ್ಷಪಕ್ಷ (Axis Powers) ವೆಂದು ಕರೆಯಲಾದ ಆಸ್ಟ್ರಿಯ, ಹಂಗೇರಿ, ಜರ್ಮನಿ, ಟರ್ಕಿ ಮತ್ತು ಬಲ್ಗೇರಿಯಾಗಳ ಗುಂಪು ಒಂದುಕಡೆ, ಮಿತ್ರಪಕ್ಷವೆಂದು ಕರೆಯಲಾದ ಸರ್ಬಿಯ, ರಶಿಯ, ಫ್ರಾನ್ಸ, ಇಂಗ್ಲಂಡ ಮತ್ತು ಅದರ ಅಧಿಪತ್ಯಕ್ಕೊಳಪಟ್ಟ ಕೆನಡಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಝೀಲ್ಯಾಂಡಗಳೂ, ಇಟಲಿ (ಯುದ್ಧಕ್ಕೆ

ಮೊದಲು ಇದು ಅಕ್ಷಪಕ್ಷದಲ್ಲಿದ್ದಿತಾದರೂ, ಯುದ್ಧದಲ್ಲಿ ಮಿತ್ರ ಪಕ್ಷವನ್ನೇ ಸೇರಿತು), ರುಮಾನಿಯಾ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನಗಳನ್ನೊಳಗೊಂಡ ಸಮೂಹವು ಮತ್ತೊಂದು ಕಡೆ. ಯುದ್ಧಪ್ರಾರಂಭದಲ್ಲಿ ಜರ್ಮನ್ನರೇ ಗೆಲ್ಲುವ ಸಂಭವವಿದ್ದಿತಾದರೂ, ಅಮೇರಿಕವು ಮಿತ್ರ ಪಕ್ಷವನ್ನು ಸೇರಿದ ನಂತರ ಆ ಸಂಭವ ಉಳಿಯಲಿಲ್ಲ. ಕೊನೆ ಕೊನೆಗೆ ಅಕ್ಷಪಕ್ಷದವರು ಹತಾಶರಾಗಿ ಕಾದಿದರು. ಬಹಳ ದಿನಗಳ ಯುದ್ಧದಿಂದಾಗಿ ಮಧ್ಯ ಯುರೋಪದಲ್ಲಿ ಆಹಾರ ಮತ್ತಿತರ ಅವಶ್ಯಕ ವಸ್ತುಗಳ ತುಟಾಗ್ರತೆಯುಂಟಾಯಿತು. ಟರ್ಕಿ ಮತ್ತು ಬಲ್ಗೇರಿಯಾಗಳು ಮೊದಲು ಕುಸಿದು ಬಿದ್ದವು. ಎದೆ ಗುಂದಿದ ಆಸ್ಟ್ರಿಯವು ಕಂಗಾಲಾಗಿ ಯುದ್ಧ ನಿಲ್ಲಿಸಿತು. ಮುಂದೆ ಬಹಳ ದಿನಗಳ ವರೆಗೆ ಕಾದಿದ ಜರ್ಮನ್ ದೊರೆಯು ಹತಾಶ ನಾಗಿ, ಕೊನೆಗೆ ಹಾಲಂಡಿಗೆ ಓಡಿ ಹೋದನು. ಆತನ ನಂತರ ಬಂದ ಸರಕಾರವು ಶಾಂತಿ ಒಪ್ಪಂದಕ್ಕಾಗಿ ಮಿತ್ರ ರಾಷ್ಟ್ರಗ ಳನ್ನು ಕೇಳಿಕೊಂಡಿತು. ಯುದ್ಧವು ಮುಗಿಯಿತು.

ವರ್ಸಾಯಿಲ್ಸ್ ಶಾಂತಿ ಒಪ್ಪಂದ (೧೯೧೯)

ಯುದ್ಧ ಮುಗಿಯುತ್ತ ಬಂದಾಗ, ಅಮೇರಿಕದ ಅಧ್ಯಕ್ಷ ವುಡ್ರೋ ವಿಲ್ಸನ್ ಅವರು, ಶಾಂತಿ ಒಪ್ಪಂದಕ್ಕೆ ನೆರವಾಗುವ ತಮ್ಮ 'ಹದಿನಾಲ್ಕು ತತ್ವ' ಗಳ (Fourteen Points) ಪ್ರಕಟನೆ ಮಾಡಿದರು. ನಿಶ್ಯಸ್ತ್ರೀಕರಣ, ಅಂತರ ರಾಷ್ಟ್ರೀಯ ಗುಟ್ಟಿನ ವ್ಯವಹಾರ ರದ್ಧತಿ, ಎಲ್ಲ ರಾಷ್ಟ್ರಗಳಿಗೂ ಸಾಗರ ಪ್ರಯಾಣವನ್ನು ಮುಕ್ತಗೊಳಿಸುವದು ಎಂಬ ಅನೇಕ ಕರಾರು

ಗಳನ್ನೊಳಗೊಂಡ 'ಹದಿನಾಲ್ಕು ತತ್ತ್ವಗಳು'. ಶಾಂತಿ ಸ್ಥಾಪನೆಗಾಗಿ 'ಲೀಗ್ ಆಫ್ ನೇಶನ್ಸ್' ಎಂಬ ಒಂದು ವಿಶ್ವ ಸಂಸ್ಥೆಯನ್ನು ಕಟ್ಟುವ ಆಶೆಯನ್ನು ಪ್ರತಿಪಾದಿಸಿದವು. ಈ ಹದಿನಾಲ್ಕು ತತ್ತ್ವಗಳ ಆಧಾರದ ಮೇಲೆ ಒಪ್ಪಂದ ಮಾಡಿಕೊಳ್ಳಲೆಳಸಿದ ಶಾಂತಿ ಸಭೆಯು ೧೯೧೯ರ ಪ್ರಾರಂಭದ ದಿನಗಳಲ್ಲಿ ಫ್ರಾನ್ಸದ ರಾಜಧಾನಿಯಾದ ಪ್ಯಾರಿಸ್ಸಿಗೆ ಹದಿನಾಲ್ಕು ಮೈಲು ದೂರದಲ್ಲಿರುವ ವರ್ಸಾಯಿಲ್ಸ್ (Versailles) ದಲ್ಲಿ ಸೇರಿತು. ತನ್ನ ದೇಶದಲ್ಲಿ ಆದ ಕಮ್ಯುನಿಸ್ಟ್ ಕ್ರಾಂತಿಯು ಘಟವಾಗಿ ೧೯೧೭ ರಲ್ಲಿಯೇ ಯುದ್ಧದಿಂದ ಹೊರನಡೆದ ರಶಿಯಾವು ಈ ಸಭೆಯಲ್ಲಿ ಪ್ರತಿನಿಧಿತವಾಗಿರಲಿಲ್ಲ. ಯುದ್ಧದಲ್ಲಿ ಅತಿ ಹೆಚ್ಚಿನ ಶ್ರಮವಹಿಸಿದ್ದ ಫ್ರಾನ್ಸ್ ಮತ್ತು ಇಂಗ್ಲಂಡಗಳು ಕ್ರಮವಾಗಿ ಕ್ಲೆಮೆನ್ಸೊ (Clemenceau) ಮತ್ತು ಲಾಯ್ಡ್ ಜಾರ್ಜ (Lloyd George) ಇವರಿಂದ ಪ್ರತಿನಿಧಿಸಲ್ಪಟ್ಟಿದ್ದವು. ಆದರೆ ಅಮೇರಿಕೆಯ ಅಧ್ಯಕ್ಷನಾದ ವುಡ್ರೋ ವಿಲ್ಸನ್‌ನೇ ಈ ಸಭೆಯಲ್ಲಿನ ಅತಿ ಪ್ರಭಾವೀ ವ್ಯಕ್ತಿಯಾಗಿದ್ದನು. ಒಟ್ಟಾರೆ ಈ ಮೂರು ಪ್ರಮುಖ ವ್ಯಕ್ತಿಗಳೇ ವರ್ಸಾಯಿಲ್ಸ್ ಒಪ್ಪಂದದ ಕರ್ತೃಗಳು.

ಶಾಂತಿ ಸಭೆಯ ಕಾರ್ಯವು ಅಂತಿಮವಾಗಿ ಐದು ಒಪ್ಪಂದಗಳ ರೂಪದಲ್ಲಿ ಹೊರಬಿತ್ತು. ಸೋತ ಐದು ರಾಷ್ಟ್ರಗಳಾಗಿದ್ದ ಜರ್ಮನಿ, ಆಸ್ಟ್ರಿಯ, ಹಂಗೇರಿ, ಬಲ್ಗೇರಿಯ ಮತ್ತು ಟರ್ಕಿಗಳೊಡನೆ ಒಂದೊಂದರೊಡನೆಯೂ ಕ್ರಮವಾಗಿ ವರ್ಸಾಯಿಲ್ಸ್ (Versailles), ಸೇಂಟ್ ಜರ್ಮೇನ್ (St. Germain), ಟ್ರಿಯನಾನ್ (Trianon), ನ್ಯೂಲಿ

(Neuilly) ಮತ್ತು ಸೆವ್ರಸ್ (Sevres) ಎಂಬ ಒಂದೊಂದು ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಸೋತ ರಾಷ್ಟ್ರಗಳಲ್ಲಿ ಪ್ರಮುಖವಾದ ಜರ್ಮನಿಯೊಡನೆ ಮಾಡಿಕೊಂಡ ಒಪ್ಪಂದವಾದ ವರ್ಸಾಯಿಲ್ಸ್‌ದ ಹೆಸರನ್ನೇ ಒಟ್ಟು ಈ ಒಪ್ಪಂದಗಳಿಗೆಲ್ಲ ಕೊಡಲಾಯಿತು.

ಯುದ್ಧವಾಗಲು ಜರ್ಮನಿಯೇ ಮುಖ್ಯ ಕಾರಣವೆಂದು ಬಗೆದ ಮಿತ್ರ ರಾಷ್ಟ್ರಗಳು, ಅದರ ಮೇಲೆ ಅಪಾರವಾದ ನಷ್ಟ ಭರ್ತಿಯನ್ನು ಹೇರಲು ಪ್ರಯತ್ನಿಸಿದವು. ಅದು ಪ್ರತಿವರ್ಷ ಒಂದುನೂರು ದಶಲಕ್ಷ ಪೌಂಡುಗಳಂತೆ ಅರವತ್ತಾರು ವರ್ಷಗಳ ಕಾಲ ನಷ್ಟಭರ್ತಿಯನ್ನು ತುಂಬಬೇಕೆಂದು ನಿರ್ಧರಿಸಿದವು. ಇದಲ್ಲದೆ, ಜರ್ಮನಿಯು, ತಾನು ಹೊಂದಿದ್ದ ವ್ಯಾಪಾರೀ ಹಡಗುಗಳಲ್ಲಿ ದೊಡ್ಡದಾದವುಗಳನ್ನು (೧೬೦೦ ಟನ್ನು ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯವುಳ್ಳವು) ಬಿಟ್ಟುಕೊಡಬೇಕು, ಹತ್ತು ವರ್ಷಗಳ ವರೆಗೆ ಫ್ರಾನ್ಸ್, ಬೆಲ್ಜಿಯಂ ಮತ್ತು ಇಟಲಿಗಳಿಗೆ ಪ್ರತಿ ವರ್ಷವೂ ಕಲ್ಲಿದ್ದಲಿನ ಕಾಣಿಕೆಯನ್ನು ಕೊಡಬೇಕು, ಮತ್ತು ಜರ್ಮನಿಯ ಸಾರ್ ಕಲ್ಲಿದ್ದಲಿನ ಪ್ರದೇಶಗಳು (Saar coal Fields) ಹದಿನೈದು ವರ್ಷಗಳ ಕಾಲ ಫ್ರಾನ್ಸದ ಸ್ವಾಧೀನದಲ್ಲಿರಬೇಕು; ರ್‍ಹೈನ್‌ಲ್ಯಾಂಡ್ (Rhineland) ಎಂಬ ಜರ್ಮನ್ ಪ್ರದೇಶದಲ್ಲಿ ಒಂದು 'ಆಕ್ರಮಣ ಸೈನ್ಯ'ವು ಇರತಕ್ಕದ್ದು ಎಂದು ತೀರ್ಮಾನಿಸಿ ಒಪ್ಪಿಕೊಳ್ಳಲಾಯಿತು. ಶಾಂತಿ ಒಪ್ಪಂದದ ನಂತರ ಜರ್ಮನಿಯು ಮತ್ತೆ ಯುದ್ಧವನ್ನು ಹೂಡೀತೆಂಬ ಭಯದಿಂದ ಮಿತ್ರಪಕ್ಷವು, ಸೋತ ರಾಜ್ಯಗಳ ಮೇಲೆ ಶಸ್ತ್ರತ್ಯಾಗದ ಕರಾರನ್ನೂ ಹೇರಿತು.

ಭೂಪ್ರದೇಶಗಳ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ರಾಷ್ಟ್ರೀಯತೆಗೆ ಪ್ರಾಮುಖ್ಯತೆಯನ್ನು ಕೊಡಲಾಯಿತು. ಒಂದು ಪ್ರದೇಶವನ್ನು ಬೇರೊಂದರ ಜೊತೆಗೂಡಿಸುವಾಗ ಆ ಪ್ರದೇಶದ ಜನತೆಯ ಅಭಿಪ್ರಾಯವನ್ನು ಸಾಮಾನ್ಯವಾಗಿ ತೆಗೆದುಕೊಳ್ಳಲಾಯಿತು. ಪೋಲಂಡವನ್ನು ಒಂದು ಸ್ವತಂತ್ರ ಗಣರಾಜ್ಯವಾಗಿ ಮಾಡಲಾಯಿತು. ರಶಿಯದ ಬಾಲ್ಟಿಕ್ ಪ್ರದೇಶದಲ್ಲಿ ಎಸ್ಟೋನಿಯ, (Esthonia), ಲಾಟ್ವಿಯ (Latvia), ಲಿಥುಯೇನಿಯ (Lithuania) ಎಂಬ ಮೂರು ಹೊಸ ರಾಜ್ಯಗಳನ್ನು ಸ್ಥಾಪಿಸಲಾಯಿತು. ಫಿನ್‌-ಲ್ಯಾಂಡಿನ ಸ್ವಾತಂತ್ರ್ಯವನ್ನು ಅಂಗೀಕರಿಸಲಾಯಿತು.

ಯುರೋಪದ ಆಗ್ನೇಯ (South-east) ಭಾಗವನ್ನೆಲ್ಲ ಪುನರ್ಘಟಿಸಲಾಯಿತು. ಒಂದು ಗಣರಾಜ್ಯವಾಗಿ ಏರ್ಪಡಿ-ಸಲ್ಪಟ್ಟ ಆಸ್ಟ್ರಿಯವು ಹಂಗೇರಿಯಿಂದ ಬೇರೆಯಾಯಿತು. ಹಂಗೇರಿಯ ಕೆಲ ಭಾಗಗಳನ್ನು, ಬೊಹೀಮಿಯಾ ಮತ್ತು ಮೊರೇವಿಯಾಗಳನ್ನು ಕೂಡಿಸಿ ಝೆಕೋಸ್ಲೋವಾಕಿಯಾ ಎಂಬ ಗಣರಾಜ್ಯವನ್ನೂ ಮಾಡಲಾಯಿತು. ಈ ರೀತಿ, ಆಸ್ಟ್ರಿಯವು ಒಂದು ಕೆಳದರ್ಜೆಯ ರಾಷ್ಟ್ರವಾಗಿ ಪರಿಣಮಿಸಿತು. ಅಷ್ಟೇ ಅಲ್ಲ, ಲೀಗ್ ಆಫ್ ನೇಶನ್ಸ್‌ದ ಅನುಮತಿಯಿಲ್ಲದೆ ಆಸ್ಟ್ರಿಯವು ಜರ್ಮನಿಯೊಡಗೂಡಕೂಡದೆಂಬ ನಿರ್ಬಂಧವನ್ನು ಹಾಕ-ಲಾಯಿತು.

ಅನೇಕ ಹೊಸ ಪ್ರದೇಶಗಳನ್ನು ಪಡೆದುಕೊಂಡ ಸರ್ಬಿಯವು ಯುಗೋಸ್ಲಾವಿಯ ಎಂಬ ಹೊಸ ಹೆಸರಿನಿಂದ

ಖ್ಯಾತಿ ಪಡೆಯಿತು. ಹಂಗೇರಿಯು ಮಗ್ಯಾರ (Magyar) ಜನಾಂಗದ ಒಂದು ಚಿಕ್ಕ ಗಣರಾಜ್ಯವಾಯಿತು. ರುಮಾನಿಯಾ (Roumania) ವು, ತನ್ನ ಮೊದಲಿನ ವಿಸ್ತೀರ್ಣದ ಎರಡ ರಷ್ಟಾಗಿ ಒಂದು ಮುಖ್ಯ ಮತ್ತು ಬಲಯುತ ರಾಷ್ಟ್ರವಾಯಿತು. ಬಲ್ಗೇರಿಯದ ವಿಸ್ತೀರ್ಣವು ಮೊದಲಿಗಿಂತ ಕಡಮೆ ಯಾಯಿತು.

ಯುರೋಪದ ರಾಜ್ಯಗಳ ಎಲ್ಲೆಗಳನ್ನು ನಿರ್ಧರಿಸು-ವಾಗಲೂ ಶಾಂತಿ ಸಭೆಯು ರಾಷ್ಟ್ರೀಯತೆಯ ತತ್ವವನ್ನೇ ಆಧಾರವಾಗಿಟ್ಟುಕೊಂಡಿತು. ಸಾಧ್ಯವಾದಷ್ಟು, ಒಂದು ರಾಜ್ಯವು ಒಂದೇ ಜನಾಂಗಕ್ಕೆ ಸೀಮಿತವಾಗಿರುವಂತೆಯೂ ಮತ್ತು ಒಂದು ಜನಾಂಗವು ಪೂರ್ಣವಾಗಿ ಒಂದೇ ರಾಜ್ಯದಲ್ಲಿ ಬರು ವಂತೆಯೂ ನೋಡಿಕೊಳ್ಳಲಾಯಿತು. ಆದರೆ ಮಿಶ್ರ ಜನಾಂಗ ಗಳನ್ನು ಹೊಂದಿದ ಕೆಲವು ಕಡೆ, ಬಹುಸಂಖ್ಯಾತರ ಇಷ್ಟಾರ್ಥ ದಂತೆ ಆ ಪ್ರದೇಶಗಳ ಭವಿಷ್ಯವು ನಿರ್ಧಾರವಾಯಿತು. ಪಾರ ತಂತ್ರದಲ್ಲುಳಿದ ಅಲ್ಪ ಸಂಖ್ಯಾತರಾದರೂ ಕಡೆಗಣಿಸಲ್ಪಡಲಿಲ್ಲ; ಪೋಲಂಡ್, ರುಮಾನಿಯಾ, ಝೆಕೋಸ್ಲೋವ್ಹಾಕಿಯ ಮತ್ತು ಯುಗೋಸ್ಲಾವಿಯಗಳೊಡನೆ, ಆ ರಾಜ್ಯಗಳಲ್ಲಿ ಇದ್ದ ಅಲ್ಪ ಸಂಖ್ಯಾತರ ಹಕ್ಕುಗಳನ್ನು ಕಾಯ್ದುಕೊಳ್ಳುವ ಸಲುವಾಗಿ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಅವರಿಗೆ ಪೂರ್ಣ ಪ್ರಜೆತನದ ಹಕ್ಕುಗಳಿರಬೇಕೆಂದೂ, ತಮ್ಮದೇ ಭಾಷೆಯನ್ನು ಪ ಯೋಗಿಸುವ ಸ್ವಾತಂತ್ರ್ಯವಿರಬೇಕೆಂದೂ, ಮತ್ತು ಪೂರ್ಣ ಮತಸ್ವಾತಂತ್ರ್ಯವನ್ನು ಕೊಡಬೇಕೆಂದೂ ಒಪ್ಪಿಕೊಳ್ಳಲಾ-ಯಿತು. ಅಲ್ಪ ಸಂಖ್ಯಾತರನ್ನು ರಕ್ಷಿಸುವ ಹೊಣೆಯನ್ನು

'ಲೀಗಿ'ಗೆ ಒಪ್ಪಿಸಲಾಯಿತು. ತಮ್ಮ ಮೇಲೆ ನಡೆಯಬಹುದಾದ ಯಾವುದೇ ಅನ್ಯಾಯವನ್ನು ಅವರು ಲೀಗಿಗೆ ತಿಳಿಸ-ಬೇಕೆಂದು ತೀರ್ಮಾನಿಸಲಾಯಿತು.

ಜರ್ಮನಿಯ ವಸಾಹತುಗಳೆಲ್ಲವನ್ನೂ ಕಿತ್ತುಕೊಳ್ಳಲಾಯಿತು; ಸಿರಿಯ, ಪ್ಯಾಲೆಸ್ಟೈನ್, ಮೆಸೊಪೊಟೇಮಿಯ ಮತ್ತು ಅರೇಬಿಯಗಳನ್ನು ಟರ್ಕಿ ಸಾಮ್ರಾಜ್ಯದಿಂದ ಬೇರ್ಪಡಿಸಲಾಯಿತು. ಅರೇಬಿಯಾವು ಸ್ವತಂತ್ರ ರಾಷ್ಟ್ರವಾಯಿತು. ಜರ್ಮನಿ ಮತ್ತು ಟರ್ಕಿಗಳ ಆಧೀನದಲ್ಲಿದ್ದ ಉಳಿದ ಪ್ರದೇಶಗಳನ್ನು ಲೀಗ್ ಆಫ್ ನೇಶನ್ಸ್‌ದ ಆದೇಶದ ಮೇರೆಗೆ, ಅವುಗಳ ಅಭಿವೃದ್ಧಿಗಾಗಿ, ಅನೇಕ ಮುಂದುವರಿದ ರಾಷ್ಟ್ರಗಳಿಗೆ ಒಪ್ಪಿಸಲಾಯಿತು. ಹೀಗೆ ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರೇಲಿಯ, ನ್ಯೂಝಿಲ್ಯಾಂಡ್ ಮತ್ತು ಜಪಾನಗಳಿಗೆ ಈ ಆದೇಶದನ್ವಯ ಅನೇಕ ಪ್ರದೇಶಗಳನ್ನು ಒಪ್ಪಿಸಲಾಯಿತು.

ಹಲವು ವಿಷಯಗಳಲ್ಲಿ ಸಮಂಜಸವಲ್ಲದ, ಮತ್ತು ಕಾರ್ಯಸಾಧ್ಯವಲ್ಲದ ಕೆಲ ತತ್ವಗಳ ಆಧಾರದ ಮೇಲೆ ರಚಿತವಾದರೂ, ವರ್ಸಾಯಿಲ್ಸ್ ಒಪ್ಪಂದವು ಅನೇಕ ಒಳ್ಳೆಯ ಅಂಶಗಳನ್ನೊಳಗೊಂಡು, ಒಟ್ಟಾರೆ ಖಾಯಂ ಆಗಿ ಉಳಿಯುವಂತಹ ಸುವ್ಯವಸ್ಥೆಯೊಂದರ ರಚನೆಯ ನಿಸ್ಪೃಹ ಪ್ರಯತ್ನವೆಂದು ಹೇಳಬಹುದು. ಮಿತ್ರಪಕ್ಷವು ಜರ್ಮನಿಯ ಮೇಲೆ ಹೇರಿದ ನಷ್ಟ ಭರ್ತಿಯು ವ್ಯವಹಾರಜ್ಞಾನರಹಿತವಾಗಿತ್ತು, ಇದನ್ನು ಪೂರ್ಣವಾಗಿ ಜರ್ಮನಿಯು ತುಂಬಿದ್ದರೆ, ನಷ್ಟ ಭರ್ತಿಯನ್ನು ತುಂಬಿದ ಮತ್ತು ಪಡೆದ ಎರಡೂ ಪಕ್ಷಗಳೂ ಹಾಳಾಗುತ್ತಿದ್ದವೋ ಏನೋ !

ಬಹುಭಾರವಾದ ಇಂತಹ ಹೊಣೆಯುನ್ನು ಜರ್ಮನಿಯ ಮೇಲೆ ಹೊರಿಸಿದ ರಾಷ್ಟ್ರಗಳೇ ಎರಡನೆಯ ಮಹಾಯುದ್ಧಕ್ಕೆ ಕಾರಣವೆಂಬುದು ನಿರ್ವಿವಾದ ವಿಷಯ. ಜರ್ಮನಿ-ಯೊಂದೇ ಕಾರಣವಲ್ಲದ ಮೊದಲನೆಯ ಮಹಾಯುದ್ಧದ ಫಲವಾಗಿ ಅದು ಅನುಭವಿಸಿದ ಶಿಕ್ಷೆ ಮಿತಿಮೀರಿದುದಾಗಿತ್ತು. ಅಂತಲೇ ಎರಡನೆಯ ಮಹಾಯುದ್ಧವು ಒದಗಿ ಬಂತು.

೫. ಲೀಗ್ ಆಫ್ ನೇಶನ್ಸ್

ಮೊದಲನೆಯ ಮಹಾಯುದ್ಧದ ಫಲವಾಗಿ ಜಗತ್ತಿಗೆ ಬಹಳಷ್ಟು ನಷ್ಟವಾಯಿತು. ಇದನ್ನು ಕಂಡು ನಾನಾದೇಶದ ಮುತ್ಸದ್ದಿಗಳು, "ಸಾಧ್ಯವಾದರೆ, ಇನ್ನು ಮುಂದೆ ಜಗತ್ತಿನಲ್ಲಿ ಯುದ್ಧವೇ ಆಗದಂತೆ ನೋಡಿಕೊಳ್ಳಬೇಕು"— ಎಂಬ ಭಾವನೆಯನ್ನು ತಾಳಿದರು. ಅಮೇರಿಕದ ಆಗಿನ ಅಧ್ಯಕ್ಷರಾದ ವುಡ್ರೋ ವಿಲ್ಸನ್ ಅವರು, ಜಗತ್ತಿನಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕೋಸ್ಕರ, ಪ್ರಜಾಪ್ರಭುತ್ವವನ್ನು ಉಳಿಸಲೋಸುಗ, ಸಣ್ಣ ರಾಷ್ಟ್ರಗಳನ್ನು ಸುರಕ್ಷಿತವಾಗಿ ಕಾಪಾಡುವ ಸಲುವಾಗಿ, "ಲೀಗ್ ಆಫ್ ನೇಶನ್ಸ್" ಎಂಬ ಒಂದು ಜಾಗತಿಕ ಸಂಸ್ಥೆಯನ್ನು ಅಸ್ತಿತ್ವದಲ್ಲಿ ತರಲು ಉದ್ದೇಶಿಸಿದರು. ಈ ವಿಚಾರವು ಅನೇಕ ದೇಶಗಳ ನಾಯಕರಿಗೂ ಒಪ್ಪಿತವಾಗಿ, 'ಲೀಗ್ ಆಫ್ ನೇಶನ್ಸ್' ಉದಯವಾಯಿತು.

'ಲೀಗ' ದ ಸದಸ್ಯರಾಗಲು ಜಗತ್ತಿನ ಎಲ್ಲ ಸ್ವತಂತ್ರ ರಾಷ್ಟ್ರಗಳನ್ನೂ ಆಮಂತ್ರಿಸಲಾಯಿತು. ಪರರಾಷ್ಟ್ರದೊಡನೆ ತಮ್ಮದೇನಾದರೂ ಕಲಹವಿದ್ದರೆ, ವಿವಾದಾಸ್ಪದ ಸಮಸ್ಯೆಯಿದ್ದರೆ ಅದನ್ನು ಬಗೆಹರಿಸಲು, ಸದಸ್ಯ ರಾಷ್ಟ್ರಗಳು ನೇರವಾಗಿ ಯುದ್ಧವನ್ನೇ ಹೂಡದೆ, 'ಲೀಗ'ದ ಮೂಲಕ ಅದನ್ನು ಪರಿಹರಿಸಿಕೊಳ್ಳುವ ಯತ್ನ ಮಾಡಬೇಕು. 'ಲೀಗು' ಸಮಸ್ಯೆಯನ್ನು ಕೂಲಂಕಷವಾಗಿ ಪರಿಶೀಲಿಸಿ ತನ್ನ ನಿರ್ಣಯವನ್ನು ನೀಡುವದು. ಅದು ವಾದಗ್ರಸ್ತ ರಾಷ್ಟ್ರಗಳಿಗೆ ಒಪ್ಪಿತವಾಗ-

ದಿದ್ದಲ್ಲಿ, ಲೀಗು ನಿರ್ಣಯ ಕೊಟ್ಟ ಮೂರು ತಿಂಗಳ ನಂತರ, ಬೇಕಾದರೆ ಅವರು ಯುದ್ಧ ಸಾರಬಹುದು. “ಸಿಟ್ಟು ಬಂದಾಗ ಹತ್ತು ಎಣಿಸಿ ಕಾರ್ಯಮಾಡು” ಎಂಬ ಗಾದೆಯ ಮಾತಿನಂತೆ, ರಾಷ್ಟ್ರಗಳಿಗೆ ಸಿಟ್ಟು ಬಂದಾಗ ಸ್ವಲ್ಪ ವಿಳಂಬ ಮಾಡುವುದರಿಂದ ಸಮಸ್ಯೆ ಪರಿಹಾರವಾದೀತು ಎಂಬ ಆಶೆ ‘ಲೀಗ’ನ್ನು ಕಟ್ಟಿದ ಮುತ್ಸದ್ದಿಗಳ ಮನಸ್ಸಿನಲ್ಲಿದ್ದಿತು. ಮೇಲೆ ಹೇಳಿದ ನಿಯಮವನ್ನು ಯಾವುದೇ ಸದಸ್ಯ ರಾಷ್ಟ್ರ ಉಲ್ಲಂಘಿಸಿದರೆ, ಉಳಿದ ಸದಸ್ಯ ರಾಷ್ಟ್ರಗಳೆಲ್ಲ ಕೂಡಿ ಅದರ ಮೇಲೆ ಯುದ್ಧವನ್ನು ಸಾರಬಹುದಾಗಿದ್ದಿತು. ಈ ರೀತಿಯಿದ್ದುದರಿಂದ, ಯಾವುದೇ ರಾಷ್ಟ್ರವು ತನ್ನ ನೆರೆಯ ರಾಷ್ಟ್ರದ ಮೇಲೆ ಯುದ್ಧ ಹೂಡುವ ಮೊದಲು ಅದರಿಂದಾಗುವ ದುಷ್ಪರಿಣಾಮವನ್ನು ನೆನೆದು, ಯುದ್ಧ ಹೂಡಲಾರದು ಎಂದು ಮುತ್ಸದ್ದಿಗಳು ನಂಬಿದ್ದರು.

‘ಲೀಗ್ ಆಫ್ ನೇಶನ್ಸ್’ ಆರು ಮುಖ್ಯ ಅಂಗಗಳನ್ನು ಹೊಂದಿತ್ತು.

೧. **ಸಾಮಾನ್ಯ ಸಭೆ:–** ಈ ಸಭೆಯಲ್ಲಿ ಪ್ರತಿಯೊಂದು ಸದಸ್ಯ ರಾಷ್ಟ್ರಕ್ಕೂ ಪ್ರಾತಿನಿಧ್ಯವಿತ್ತು ಮತ್ತು ಲೀಗಿಗೆ ಸಂಬಂಧಿಸಿದ ಎಲ್ಲ ಮುಖ್ಯ ವಿಷಯಗಳನ್ನು ಇದು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುತ್ತಿತ್ತು. ವರ್ಷಕ್ಕೊಮ್ಮೆಯಾದರೂ, ಸಪ್ಟಂಬರದಲ್ಲಿ, ಜಿನೇವಾದಲ್ಲಿ ಈ ಸಭೆ ಸೇರಲೇಬೇಕೆಂಬ ನಿರ್ಬಂಧವಿತ್ತು.

೨. **ಕೌನ್ಸಿಲ್ ಸಭೆ:–** ಸಾಮಾನ್ಯ ಸಭೆಯು ಬಹಳ ದೊಡ್ಡದಿದ್ದುದರಿಂದ ಮತ್ತು ಯಾವುದೇ ಅವಸರದ ಸಮಯ

ದಲ್ಲಿ ಅದನ್ನು ಕರೆಯುವದು ದುಸ್ತರವಿದ್ದುದರಿಂದ. ಲೀಗಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಸಾಮಾನ್ಯ ಸಭೆಗಿಂತ ಚಿಕ್ಕದಾದ ಕೌನ್ಸಿಲ್ ಸಭೆಯೇ ತೀರ್ಮಾನಿಸುತ್ತಿತ್ತು. ಇದು ವರ್ಷಕ್ಕೆ ಮೂರುಬಾರಿಯಾದರೂ ಸೇರುತ್ತಿತ್ತು; ಮತ್ತು ಅವಸರದ ಪ್ರಸಂಗಗಳಲ್ಲಿ ತಕ್ಷಣವೇ ಕೂಡುತ್ತಿತ್ತು. ಕೌನ್ಸಿಲ್ ದಲ್ಲಿ ದೊಡ್ಡ ರಾಷ್ಟ್ರ (Great powers) ಗಳನ್ನು ಪ್ರತಿನಿಧಿಸಲು ಕೆಲ ಖಾಯಂ ಸದಸ್ಯರೂ ಮತ್ತು ಸಣ್ಣ ರಾಷ್ಟ್ರಗಳಿಂದ ಕಾಲ ಕಾಲಕ್ಕೆ ಚುನಾಯಿಸಲ್ಪಟ್ಟ ಅನೇಕ ಖಾಯಂ ಅಲ್ಲದ ಸದಸ್ಯರೂ ಇದ್ದರು.

೩. ಕಾರ್ಯದರ್ಶಿ (ಕಾರ್ಯವಾಹಕ) ಕಚೇರಿ (Secretariat) :— ಲೀಗದ ಕೆಲಸ ಕಾರ್ಯಗಳನ್ನು ನೋಡಲು ಶಿಪಾಯರು, ಕಾರಕೂನರು ಮತ್ತು ಅಧಿಕಾರಿಗಳನ್ನುಳ್ಳ ಕಚೇರಿಯೊಂದನ್ನು ಜಿನೇವಾದಲ್ಲಿ ಸ್ಥಾಪಿಸಲಾಯಿತು.

೪. ಅಂತರರಾಷ್ಟ್ರೀಯ ನ್ಯಾಯಾಲಯ :— ರಾಷ್ಟ್ರಗಳ ನಡುವೆ ಉದ್ಭವಿಸಬಹುದಾದ ಜಗಳಗಳನ್ನು ಪರಿಹರಿಸಲೋಸುಗ ಹೇಗ್ (The Hague) ಎಂಬಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯವೊಂದನ್ನು ಸ್ಥಾಪಿಸಲಾಯಿತು. ಅನೇಕ ನ್ಯಾಯಾಧೀಶರನ್ನೊಳಗೊಂಡ ಈ ನ್ಯಾಯಾಲಯವು ಕಾಲ ಕಾಲಕ್ಕೆ ಸೇರಿ ತನ್ನ ಮುಂದೆ ಬಂದ ಅಂತರರಾಷ್ಟ್ರೀಯ ಜಗಳಗಳನ್ನು ಅಂತರರಾಷ್ಟ್ರೀಯ ಕಾಯದೆಗನುಗುಣವಾಗಿಯೂ ಮತ್ತು ಆ ರಾಷ್ಟ್ರಗಳ ನಡುವೆ ಇರಬಹುದಾದ ಒಪ್ಪಂದಗಳ ಪ್ರಕಾರವಾಗಿಯೂ ಪರಿಶೀಲಿಸಿ ತೀರ್ಪು ಕೊಡುತ್ತಿದ್ದಿತು.

ಎದ್ದ ಘರ್ಷಣೆಯಲ್ಲಿ ಮತ್ತು ೧೯೨೧-೨೨ ರಲ್ಲಿ ಗ್ರೀಸ ಮತ್ತು ಟರ್ಕಿಗಳ ಜಗಳದಲ್ಲಿ ಕೈಹಾಕುವದು ಇದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ, ಈ ಎರಡೂ ಜಗಳಗಳಲ್ಲಿ ಸಿಕ್ಕಿಕೊಂಡಿದ್ದ ರಾಷ್ಟ್ರಗಳ ಪೈಕಿ ಒಂದೊಂದು ಲೀಗದ ಸದಸ್ಯತ್ವವನ್ನು ಹೊಂದಿರಲಿಲ್ಲ. ಆಲಂಡ್ ದ್ವೀಪಗಳು (Aland Islands) ಯಾರಿಗೆ ಸೇರಬೇಕೆಂಬ ಬಗ್ಗೆ ಫಿನ್‌ಲ್ಯಾಂಡ್ ಮತ್ತು ಸ್ವೀಡನ್‌ಗಳು ಜಗಳ ಪ್ರಾರಂಭಿಸಿದಾಗ, ವಿಷಯವು ಲೀಗದ ಮುಂದೆ ತರಲ್ಪಟ್ಟಿತು; ಮತ್ತು ಲೀಗು ಫಿನ್‌ಲ್ಯಾಂಡದ ಪರವಾಗಿ ತನ್ನ ತೀರ್ಮಾನವನ್ನಿತ್ತಿತು. ಅದೇ ರೀತಿ ವಿಲ್ನಪ್ರಾಂತ (Vilna District) ದ ಬಗ್ಗೆ ಪೋಲಂಡ ಮತ್ತು ಲಿಥುಯೇನಿಯಾಗಳಲ್ಲಿ ಎದ್ದ ವಿವಾದದಲ್ಲಿ ಲೀಗ್ ಪೋಲಂಡದ ಪರವಾಗಿ ತೀರ್ಪನ್ನಿತ್ತಿತು. ನಷ್ಟಕ್ಕೀಡಾದ ರಾಷ್ಟ್ರವು, ಈ ಎರಡೂ ಸಂದರ್ಭಗಳಲ್ಲಿ ಲೀಗದ ತೀರ್ಪಿನ ವಿರುದ್ಧ ತನ್ನ ಪ್ರತಿಭಟನೆಯನ್ನು ಸಲ್ಲಿಸಿತಾದರೂ ಅದರ ಫಲವಾಗಿ ಯುದ್ಧವು ಪ್ರಾರಂಭವಾಗಲಿಲ್ಲ.

ಇವೆಲ್ಲಕ್ಕಿಂತಲೂ ಹೆಚ್ಚು ಕಠಿಣ ಸಮಸ್ಯೆಯೊಂದು ೧೯೨೩ ರಲ್ಲಿ ಇಟಲಿ ಮತ್ತು ಗ್ರೀಸಗಳ ನಡುವೆ ಉದ್ಭವಿಸಿತು. ಅಲ್ಬೇನಿಯಾದ ಮೇರೆಗಳನ್ನು ನಿಷ್ಕರ್ಷಿಸುತ್ತಿದ್ದ ಕೆಲ ಇಟಾಲಿಯನ್ ನಿಯೋಗಿಗಳು ಗ್ರೀಕ್ ಪ್ರದೇಶದಲ್ಲಿ ಕೊಲ್ಲಲ್ಪಟ್ಟರು. ಅಲ್ಬೇನಿಯನ್ನರೇ ಈ ಕೊಲೆಗೈದರೆಂಬುದು ಗ್ರೀಕ್ ಸರಕಾರದ ನಿಲುವೆಯಾಗಿತ್ತು. ಗ್ರೀಕರೇ ಈ ಕುತಂತ್ರಕ್ಕೆ ಕಾರಣರೆಂದು ಅಲ್ಬೇನಿಯನ್ ಸರಕಾರವು ತಿಳಿಸಿತು. ಗ್ರೀಕ್ ಪ್ರದೇಶದಲ್ಲಿಯೇ ಆದ ಕೊಲೆಯನ್ನು ತಡೆಗಟ್ಟುವದು ಗ್ರೀಕ್ ಸರಕಾರದ

ದಲ್ಲಿ ಅದನ್ನು ಕರೆಯುವದು ದುಸ್ತರವಿದ್ದುದರಿಂದ, ಲೀಗಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಸಾಮಾನ್ಯ ಸಭೆಗಿಂತ ಚಿಕ್ಕದಾದ ಕೌನ್ಸಿಲ್ ಸಭೆಯೇ ತೀರ್ಮಾನಿಸುತ್ತಿತ್ತು. ಇದು ವರ್ಷಕ್ಕೆ ಮೂರುಬಾರಿಯಾದರೂ ಸೇರುತ್ತಿತ್ತು; ಮತ್ತು ಅವಸರದ ಪ್ರಸಂಗಗಳಲ್ಲಿ ತಕ್ಷಣವೇ ಕೂಡುತ್ತಿತ್ತು. ಕೌನ್ಸಿಲ್ ದಲ್ಲಿ ದೊಡ್ಡ ರಾಷ್ಟ್ರ (Great powers) ಗಳನ್ನು ಪ್ರತಿನಿಧಿಸಲು ಕೆಲ ಖಾಯಂ ಸದಸ್ಯರೂ ಮತ್ತು ಸಣ್ಣ ರಾಷ್ಟ್ರಗಳಿಂದ ಕಾಲ ಕಾಲಕ್ಕೆ ಚುನಾಯಿಸಲ್ಪಟ್ಟ ಅನೇಕ ಖಾಯಂ ಅಲ್ಲದ ಸದಸ್ಯರೂ ಇದ್ದರು.

೩. ಕಾರ್ಯದರ್ಶಿ (ಕಾರ್ಯವಾಹಕ) ಕಚೇರಿ (Secretariat) :— ಲೀಗದ ಕೆಲಸ ಕಾರ್ಯಗಳನ್ನು ನೋಡಲು ಸಿಪಾಯರು, ಕಾರಕೂನರು ಮತ್ತು ಅಧಿಕಾರಿಗಳನ್ನುಳ್ಳ ಕಚೇರಿಯೊಂದನ್ನು ಜಿನೇವಾದಲ್ಲಿ ಸ್ಥಾಪಿಸಲಾಯಿತು.

೪. ಅಂತರರಾಷ್ಟ್ರೀಯ ನ್ಯಾಯಾಲಯ :— ರಾಷ್ಟ್ರಗಳ ನಡುವೆ ಉದ್ಭವಿಸಬಹುದಾದ ಜಗಳಗಳನ್ನು ಪರಿಹರಿಸಲೋಸುಗ ಹೇಗ್ (The Hague) ಎಂಬಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯವೊಂದನ್ನು ಸ್ಥಾಪಿಸಲಾಯಿತು. ಅನೇಕ ನ್ಯಾಯಾಧೀಶರನ್ನೊಳಗೊಂಡ ಈ ನ್ಯಾಯಾಲಯವು ಕಾಲ ಕಾಲಕ್ಕೆ ಸೇರಿ ತನ್ನ ಮುಂದೆ ಬಂದ ಅಂತರರಾಷ್ಟ್ರೀಯ ಜಗಳಗಳನ್ನು ಅಂತರರಾಷ್ಟ್ರೀಯ ಕಾಯಿದೆಗನುಗುಣವಾಗಿಯೂ ಮತ್ತು ಆ ರಾಷ್ಟ್ರಗಳ ನಡುವೆ ಇರಬಹುದಾದ ಒಪ್ಪಂದಗಳ ಪ್ರಕಾರವಾಗಿಯೂ ಪರಿಶೀಲಿಸಿ ತೀರ್ಪು ಕೊಡುತ್ತಿದ್ದಿತು.

ಎದ್ದ ಘರ್ಷಣೆಯಲ್ಲಿ ಮತ್ತು ೧೯೨೧-೨೨ ರಲ್ಲಿ ಗ್ರೀಸ ಮತ್ತು ಟರ್ಕಿಗಳ ಜಗಳದಲ್ಲಿ ಕೈಹಾಕುವದು ಇದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ, ಈ ಎರಡೂ ಜಗಳಗಳಲ್ಲಿ ಸಿಕ್ಕಿಕೊಂಡಿದ್ದ ರಾಷ್ಟ್ರಗಳ ಪೈಕಿ ಒಂದೊಂದು ಲೀಗದ ಸದಸ್ಯತ್ವವನ್ನು ಹೊಂದಿರಲಿಲ್ಲ. ಆಲಂಡ್ ದ್ವೀಪಗಳು (Aland Islands) ಯಾರಿಗೆ ಸೇರಬೇಕೆಂಬ ಬಗ್ಗೆ ಫಿನ್‌ಲ್ಯಾಂಡ್ ಮತ್ತು ಸ್ವೀಡನ್‌ಗಳು ಜಗಳ ಪ್ರಾರಂಭಿಸಿದಾಗ, ವಿಷಯವು ಲೀಗದ ಮುಂದೆ ತರಲ್ಪಟ್ಟಿತು; ಮತ್ತು ಲೀಗು ಫಿನ್‌ಲ್ಯಾಂಡದ ಪರವಾಗಿ ತನ್ನ ತೀರ್ಮಾನವನ್ನಿತ್ತಿತು. ಅದೇ ರೀತಿ ವಿಲ್ನಪ್ರಾಂತ (Vilna District) ದ ಬಗ್ಗೆ ಪೋಲಂಡ ಮತ್ತು ಲಿಥುಯೇನಿಯಾಗಳಲ್ಲಿ ಎದ್ದ ವಿವಾದದಲ್ಲಿ ಲೀಗ್ ಪೋಲಂಡದ ಪರವಾಗಿ ತೀರ್ಪ-ನ್ನಿತ್ತಿತು. ನಷ್ಟಕ್ಕೀಡಾದ ರಾಷ್ಟ್ರವು, ಈ ಎರಡೂ ಸಂದರ್ಭಗಳಲ್ಲಿ ಲೀಗದ ತೀರ್ಪಿನ ವಿರುದ್ಧ ತನ್ನ ಪ್ರತಿಭಟನೆಯನ್ನು ಸಲ್ಲಿಸಿತಾದರೂ ಅದರ ಫಲವಾಗಿ ಯುದ್ಧವು ಪ್ರಾರಂಭ-ವಾಗಲಿಲ್ಲ.

ಇವೆಲ್ಲಕ್ಕಿಂತಲೂ ಹೆಚ್ಚು ಕಠಿಣ ಸಮಸ್ಯೆಯೊಂದು ೧೯೨೩ ರಲ್ಲಿ ಇಟಲಿ ಮತ್ತು ಗ್ರೀಸಗಳ ನಡುವೆ ಉದ್ಭವಿಸಿತು. ಅಲ್ಬೇನಿಯಾದ ಮೇರೆಗಳನ್ನು ನಿಷ್ಕರ್ಷಿಸುತ್ತಿದ್ದ ಕೆಲ ಇಟಾಲಿ-ಯನ್ ನಿಯೋಗಿಗಳು ಗ್ರೀಕ್ ಪ್ರದೇಶದಲ್ಲಿ ಕೊಲ್ಲಲ್ಪಟ್ಟರು. ಅಲ್ಬೇನಿಯನ್ನರೇ ಈ ಕೊಲೆಗೈದರೆಂಬುದು ಗ್ರೀಕ್ ಸರಕಾರದ ನಿಲುಮೆಯಾಗಿತ್ತು. ಗ್ರೀಕರೇ ಈ ಕುತಂತ್ರಕ್ಕೆ ಕಾರಣರೆಂದು ಅಲ್ಬೇನಿಯನ್ ಸರಕಾರವು ತಿಳಿಸಿತು. ಗ್ರೀಕ್ ಪ್ರದೇಶದಲ್ಲಿಯೇ ಆದ ಕೊಲೆಯನ್ನು ತಡೆಗಟ್ಟುವದು ಗ್ರೀಕ್ ಸರಕಾರದ

ಕರ್ತವ್ಯವಾಗಿತ್ತು. ಆದ್ದರಿಂದ, ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದ ಗ್ರೀಸದ ಮೇಲೆ ಇಟಲಿಯು ಯುದ್ಧವನ್ನೇ ಹೂಡಿತು. ಕೆಲವರ ಮಧ್ಯಸ್ಥಿಕೆಯ ಫಲವಾಗಿ ಈ ಜಗಳವು ಪ್ಯಾರಿಸ್‌ದಲ್ಲಿ ಕೂಡಿದ "ರಾಷ್ಟ್ರಗಳ ರಾಯಭಾರಿಗಳ ಸಭೆ" (Council of Ambassadors of Powers at Paris) ಯೊಂದಕ್ಕೆ ಒಪ್ಪಿಸಲ್ಪಟ್ಟಿತು. ಯುದ್ಧವಿಲ್ಲದೆ ಜಗಳವು ತೀರ್ಮಾನವಾಯಿತು. ಈ ಜಗಳವನ್ನು ಬಗೆಹರಿಸುವಲ್ಲಿ ಲೀಗಿನ ಪಾತ್ರವೇನೂ ಇರ-ಲಿಲ್ಲವಾದರೂ ಯುದ್ಧವಾಗಲಿಲ್ಲವೆಂಬುದೇ ಮುಖ್ಯ.

೧೯೨೫ ರಲ್ಲಿ ಮತ್ತೊಂದು ಗುರುತರವಾದ ಪ್ರಶ್ನೆ ಎದ್ದಿತು. ಗ್ರೀಸ್ ಮತ್ತು ಬಲ್ಗೇರಿಯಾಗಳ ಗಡಿಗಳಲ್ಲಿ ಆದ ಕೆಲ ಸೈನಿಕ ಘರ್ಷಣೆಗಳ ಫಲವಾಗಿ ಗ್ರೀಕರು ಬಲ್ಗೇರಿಯವನ್ನೇ ಮುತ್ತಿದರು. ಇಂತಹ ಚಿಕ್ಕ ಘರ್ಷಣೆಗಳಿಂದಲೇ ಅನೇಕ ದೊಡ್ಡ ಯುದ್ಧಗಳು ಪ್ರಾರಂಭವಾಗುವವು ಎಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಈ ಸಂದರ್ಭದಲ್ಲಿ ಲೀಗಿನ ಕೌನ್ಸಿಲ್ ತಕ್ಷಣ ಸಭೆ ಸೇರಿ, ಹೋರಾಡಕೂಡದೆಂದು ಬಲ್ಗೇರಿಯನ್ನರಿಗೂ, ಮುಂದುವರಿಯಬಾರದೆಂದು ಗ್ರೀಕರಿಗೂ ಆದೇಶ ನೀಡಿತು. ಎರಡೂ ಪಕ್ಷಗಳು ಈ ಆದೇಶಕ್ಕೆ ತಲೆಬಾಗಿದವು. ಪ್ರಾರಂಭವಾಗಿದ್ದ ಯುದ್ಧವೊಂದು ನಿಂತಿತು.

ಆದರೆ ೧೯೩೫ ರಿಂದ ಮುಂದೆ ಲೀಗು ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲಾಗಲಿಲ್ಲ. ದೊಡ್ಡ ರಾಷ್ಟ್ರಗಳು ಪ್ರಾರಂಭಿಸಿದ್ದ ಯುದ್ಧ ಸಾಧನಗಳ ತಯಾರಿಕೆಯನ್ನು ಕಡಮೆ ಮಾಡಿಸುವದು ಇದಕ್ಕೆ ಅಸಾಧ್ಯವಾಯಿತು. ನೌಕಾ ಸಾಮಗ್ರಿಗಳನ್ನು ಆದಷ್ಟು ಕಡಮೆ ಮಾಡುವುದಾಗಿ ೧೯೨೦ ರಲ್ಲಿ ಬ್ರಿಟನ್,

೧೯೧೯ ರಲ್ಲಿ ತಾವು ಮಾಡಿದ ರಾಜಕೀಯ ವ್ಯವಸ್ಥೆಯು ಬದಲಾಗದೆ ಎಂದೆಂದಿಗೂ ಉಳಿಯುವುದೆಂಬ ಭಾವನೆಯಿಂದ ಮುತ್ಸದ್ದಿಗಳು ಲೀಗನ್ನು ರಚಿಸಿದ್ದರು. ಎರಡು ರಾಜ್ಯಗಳ ಪರಸ್ಪರ ಒಪ್ಪಿಗೆಯ ಮೇರೆಗೆ ಒಂದು ಪ್ರದೇಶದ ಭವಿಷ್ಯವನ್ನು ಬದಲಿಸಬಹುದಾಗಿದ್ದಿತಲ್ಲದೆ ಬೇರಾವ ರೀತಿಯಲ್ಲೂ ೧೯೧೯ರ ವ್ಯವಸ್ಥೆಯನ್ನು ಮಾರ್ಪಾಡು ಮಾಡುವಂತಿರಲಿಲ್ಲ. ಮುತ್ಸದ್ದಿಗಳು ತಾಳಿದ ಈ ಭಾವನೆ ತಪ್ಪಾಗಿದ್ದಿತು. ತನ್ನ ರಾಜ್ಯಾಡಳಿತ ಕ್ರಮವನ್ನು ತಾನೇ ನಿರ್ಣಯಿಸಿಕೊಳ್ಳುವ ಹಕ್ಕನ್ನು ಪ್ರತಿಯೊಂದು ಜನಾಂಗಕ್ಕೂ ವರ್ಸಾಯಿಲ್ಸ್ ಒಪ್ಪಂದದ ಪ್ರಕಾರ ಕೊಡಲಾಗಿದ್ದಿತು. ಆದರೆ ಈ ತತ್ವವನ್ನು ಸಂಪೂರ್ಣವಾಗಿ ಆಗಲೇ ಅನ್ವಯಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಅನೇಕ ಚಿಕ್ಕ ರಾಜ್ಯಗಳು ಉದಿಸಿದವಾದರೂ ಬೇರೊಂದು ಜನಾಂಗದ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತರೇ ಉಳಿಯದಂತೆ ಯುರೋಪದ ಜನಾಂಗಗಳನ್ನು ವಿಭಾಗಿಸುವುದು ದುಸ್ತರವಾಯಿತು. ಆದ್ದರಿಂದ ಪಾರತಂತ್ರ್ಯದಲ್ಲುಳಿದ ಅನೇಕ ಜನಾಂಗಗಳು ಸ್ವಾತಂತ್ರ್ಯವನ್ನು ಬಯಸಿದವು, ಅಥವಾ ತಮ್ಮ ನಂಟಿನ ಜನಾಂಗ (race akin to themselves) ದ ರಾಜ್ಯದಲ್ಲಿ ಸೇರಬಯಸಿದವು. ಇದರಿಂದ ಅನೇಕ ರಾಜಕೀಯ ಸಮಸ್ಯೆಗಳು ತಲೆದೋರಿದವು; ಅವುಗಳನ್ನೆದುರಿಸುವ ಶಕ್ತಿ ಲೀಗಿಗೆ ಇರಲಿಲ್ಲ.

ಸದಸ್ಯರಾಷ್ಟ್ರಗಳು ತಮ್ಮ ಕರ್ತವ್ಯವನ್ನು ತಾವು ಸರಿಯಾಗಿ ಪಾಲಿಸದಿದ್ದುದು ಲೀಗದ ವಿಫಲತೆಗೆ ಮತ್ತೊಂದು ಕಾರಣ. ಯಾವುದಾದರೊಂದು ತಲೆತಿರುಕ ರಾಷ್ಟ್ರ ತನ್ನ ನೆರೆಯ

ಕರ್ತವ್ಯವಾಗಿತ್ತು. ಆದ್ದರಿಂದ, ತಪ್ಪಿಸಿಕೊಳ್ಳಲು ಯುಕ್ತಿಸುತ್ತಿದ್ದ ಗ್ರೀಸದ ಮೇಲೆ ಇಟಲಿಯು ಯುದ್ಧವನ್ನೇ ಹೂಡಿತು. ಕೆಲವರ ಮಧ್ಯಸ್ಥಿಕೆಯ ಫಲವಾಗಿ ಈ ಜಗಳವು ಪ್ಯಾರಿಸ್‌ದಲ್ಲಿ ಕೂಡಿದ "ರಾಷ್ಟ್ರಗಳ ರಾಯಭಾರಿಗಳ ಸಭೆ" (Council of Ambassadors of Powers at Paris) ದೊಂದಕ್ಕೆ ಒಪ್ಪಿಸಲ್ಪಟ್ಟಿತು. ಯುದ್ಧವಿಲ್ಲದೆ ಜಗಳವು ತೀರ್ಮಾನವಾಯಿತು. ಈ ಜಗಳವನ್ನು ಬಗೆಹರಿಸುವಲ್ಲಿ ಲೀಗದ ಪಾತ್ರವೇನೂ ಇರಲಿಲ್ಲವಾದರೂ ಯುದ್ಧವಾಗಲಿಲ್ಲವೆಂಬುದೇ ಮುಖ್ಯ.

೧೯೨೫ ರಲ್ಲಿ ಮತ್ತೊಂದು ಗುರುತರವಾದ ಪ್ರಶ್ನೆ ಎದ್ದಿತು. ಗ್ರೀಸ್ ಮತ್ತು ಬಲ್ಗೇರಿಯಾಗಳ ಗಡಿಗಳಲ್ಲಿ ಆದ ಕೆಲ ಸೈನಿಕ ಘರ್ಷಣೆಗಳ ಫಲವಾಗಿ ಗ್ರೀಕರು ಬಲ್ಗೇರಿಯಾವನ್ನೇ ಮುತ್ತಿದರು. ಇಂತಹ ಚಿಕ್ಕ ಘರ್ಷಣೆಗಳಿಂದಲೇ ಅನೇಕ ದೊಡ್ಡ ಯುದ್ಧಗಳು ಪ್ರಾರಂಭವಾಗುವವು ಎಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಈ ಸಂದರ್ಭದಲ್ಲಿ ಲೀಗದ ಕೌನ್ಸಿಲ್ ತಕ್ಷಣ ಸಭೆ ಸೇರಿ, ಹೋರಾಡಕೂಡದೆಂದು ಬಲ್ಗೇರಿಯನ್ನರಿಗೂ, ಮುಂದುವರಿಯಬಾರದೆಂದು ಗ್ರೀಕರಿಗೂ ಆದೇಶ ನೀಡಿತು. ಎರಡೂ ಪಕ್ಷಗಳು ಈ ಆದೇಶಕ್ಕೆ ತಲೆಬಾಗಿದವು. ಪ್ರಾರಂಭವಾಗಿದ್ದ ಯುದ್ಧವೊಂದು ನಿಂತಿತು.

ಆದರೆ ೧೯೨೯ ರಿಂದ ಮುಂದೆ ಲೀಗು ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲಾಗಲಿಲ್ಲ. ದೊಡ್ಡ ರಾಷ್ಟ್ರಗಳು ಪ್ರಾರಂಭಿಸಿದ್ದ ಯುದ್ಧ ಸಾಧನಗಳ ತಯಾರಿಕೆಯನ್ನು ಕಡಮೆ ಮಾಡಿಸುವದು ಇದಕ್ಕೆ ಅಸಾಧ್ಯವಾಯಿತು. ನೌಕಾ ಸಾಮಗ್ರಿಗಳನ್ನು ಆದಷ್ಟು ಕಡಮೆ ಮಾಡುವುದಾಗಿ ೧೯೨೦ ರಲ್ಲಿ ಬ್ರಿಟನ್,

೧೯೧೯ರಲ್ಲಿ ತಾವು ಮಾಡಿದ ರಾಜಕೀಯ ವ್ಯವಸ್ಥೆಯು ಬದಲಾಗದೆ ಎಂದೆಂದಿಗೂ ಉಳಿಯುವುದೆಂಬ ಭಾವನೆಯಿಂದ ಮುತ್ಸದ್ದಿಗಳು ಲೀಗನ್ನು ರಚಿಸಿದ್ದರು. ಎರಡು ರಾಜ್ಯಗಳ ಪರಸ್ಪರ ಒಪ್ಪಿಗೆಯ ಮೇರೆಗೆ ಒಂದು ಪ್ರದೇಶದ ಭವಿಷ್ಯವನ್ನು ಬದಲಿಸಬಹುದಾಗಿದ್ದಿತಲ್ಲದೆ ಬೇರಾವ ರೀತಿಯಲ್ಲೂ ೧೯೧೯ರ ವ್ಯವಸ್ಥೆಯನ್ನು ಮಾರ್ಪಾಡು ಮಾಡುವಂತಿರಲಿಲ್ಲ. ಮುತ್ಸದ್ದಿಗಳು ತಾಳಿದ ಈ ಭಾವನೆ ತಪ್ಪಾಗಿದ್ದಿತು. ತನ್ನ ರಾಜ್ಯಾಡಳಿತ ಕ್ರಮವನ್ನು ತಾನೇ ನಿರ್ಣಯಿಸಿಕೊಳ್ಳುವ ಹಕ್ಕನ್ನು ಪ್ರತಿಯೊಂದು ಜನಾಂಗಕ್ಕೂ ವರ್ಸಾಯಿಲ್ಸ್ ಒಪ್ಪಂದದ ಪ್ರಕಾರ ಕೊಡಲಾಗಿದ್ದಿತು. ಆದರೆ ಈ ತತ್ತ್ವವನ್ನು ಸಂಪೂರ್ಣವಾಗಿ ಆಗಲೇ ಅನ್ವಯಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಅನೇಕ ಚಿಕ್ಕ ರಾಜ್ಯಗಳು ಉದಿಸಿದುವಾದರೂ ಬೇರೊಂದು ಜನಾಂಗದ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತರೇ ಉಳಿಯದಂತೆ ಯುರೋಪದ ಜನಾಂಗಗಳನ್ನು ವಿಭಾಗಿಸುವುದು ದುಸ್ತರವಾಯಿತು. ಆದ್ದರಿಂದ ಪಾರತಂತ್ರದಲ್ಲುಳಿದ ಅನೇಕ ಜನಾಂಗಗಳು ಸ್ವಾತಂತ್ರ್ಯವನ್ನು ಬಯಸಿದವು, ಅಥವಾ ತಮ್ಮ ನಂಟಿನ ಜನಾಂಗ (race akin to themselves) ದ ರಾಜ್ಯದಲ್ಲಿ ಸೇರಬಯಸಿದವು. ಇದರಿಂದ ಅನೇಕ ರಾಜಕೀಯ ಸಮಸ್ಯೆಗಳು ತಲೆದೋರಿದವು; ಅವುಗಳನ್ನೆದುರಿಸುವ ಶಕ್ತಿ ಲೀಗಿಗೆ ಇರಲಿಲ್ಲ.

ಸದಸ್ಯರಾಷ್ಟ್ರಗಳು ತಮ್ಮ ಕರ್ತವ್ಯವನ್ನು ತಾವು ಸರಿಯಾಗಿ ಪಾಲಿಸದಿದ್ದುದು ಲೀಗದ ವಿಫಲತೆಗೆ ಮತ್ತೊಂದು ಕಾರಣ. ಯಾವುದಾದರೊಂದು ತಲೆತಿರುಕ ರಾಷ್ಟ್ರ ತನ್ನ ನೆರೆಯ

ರಾಷ್ಟ್ರದ ಮೇಲೆ ಯುದ್ಧಮಾಡಲು ಯತ್ನಿಸಿದಾಗ, ಲೀಗದ ಸದಸ್ಯರಲ್ಲಿ, ತಾವು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಒಮ್ಮತವಿಲ್ಲದೆ ಹೋಗುತ್ತಿತ್ತು. ಅವರಲ್ಲಿ ಒಮ್ಮತವಿದ್ದಿದ್ದರೆ ಎಲ್ಲ ರಾಷ್ಟ್ರಗಳೂ ಸೇರಿ ಯುದ್ಧಮಾಡಲೆತ್ನಿಸಿದ ರಾಷ್ಟ್ರವನ್ನು ಹತ್ತಿಕ್ಕಲು ಬರುತ್ತಿತ್ತು.

ಚಿಕ್ಕ ಚಿಕ್ಕ ರಾಷ್ಟ್ರಗಳ ನಡುವೆ ಎದ್ದ ಘರ್ಷಣೆಗಳನ್ನು ಬಗೆಹರಿಸುವುದರ ಮೂಲಕ ಲೀಗು, ಪ್ರಾರಂಭದಲ್ಲಿ, ಕೀರ್ತಿ ಗಳಿಸಿತು. ಆದರೆ ಜಪಾನವು ಚೀನದ ಪ್ರಾಂತವಾಗಿದ್ದ ಮಂಚೂರಿಯುವನ್ನು ಕಬಳಿಸಿ, ಅಲ್ಲಿ ತನ್ನ ಅಧೀನದಲ್ಲಿ "ಮಂಚುಕುವೋ" ಎಂಬ ಗಣರಾಜ್ಯವನ್ನು ಸ್ಥಾಪಿಸಿದಾಗ (೧೯೩೧), ಜಪಾನವನ್ನು ಶಿಕ್ಷಿಸಲು ಲೀಗದ ಕೈಯಲ್ಲಾಗಲಿಲ್ಲ. ಜಪಾನದ ಮೇಲೆ ಕ್ರಮತೆಗೆದುಕೊಳ್ಳಲು ಸಾಧ್ಯವಾಗದುದನ್ನು ಕಂಡ ಇಟಲಿಯ ಸರ್ವಾಧಿಕಾರಿ ಮುಸ್ಸೋಲಿನಿಯು, ತನ್ನ ಆಕ್ರಮಣಶೀಲ ಪ್ರವೃತ್ತಿಯಲ್ಲಿ ಉತ್ತೇಜಿತನಾಗಿ, ಅಬಿಸೀನಿಯದ ಮೇಲೆ ಏರಿಹೋದನು (೧೯೩೫). ತಕ್ಷಣವೇ ಲೀಗ್ ಕೌನ್ಸಿಲ್ ಸಭೆ ಸೇರಿ ತಾನು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಚರ್ಚಿಸಿತು. ಆದರೆ ತನ್ನ ನಿರ್ಣಯವನ್ನು ಪರಿಣಾಮಕಾರಿಯಾಗಿ ವಿಧಿಸುವದು ಅದಕ್ಕೆ ಅಸಾಧ್ಯವಾಯಿತು. ಹೀಗೆ, ಚಿಕ್ಕ ರಾಷ್ಟ್ರಗಳ ಮೇಲಷ್ಟೇ ಅಧಿಕಾರ ನಡೆಯಿಸಿ, ಪ್ರಬಲ ರಾಷ್ಟ್ರಗಳ ಮೇಲೆ ಕ್ರಮ ಕೈಕೊಳ್ಳಲು ತಪ್ಪಿದ ಲೀಗದ ಬಗ್ಗೆ ಪ್ರಪಂಚದಲ್ಲಿ ಗೌರವಾದರಗಳು ಕಡಮೆಯಾಗಹತ್ತಿದವು. ೧೯೩೯ ರಲ್ಲಿ ಪ್ರಾರಂಭವಾದ ಯುದ್ಧವಂತೂ

ಲೀಗದ ಕಾರ್ಯವಿಫಲತೆಗೆ ಒಂದು ನಿಶ್ಚಿತ ದ್ಯೋತಕವಾಯಿತು.

ಅಂತೂ, ಪ್ರಬಲ ರಾಷ್ಟ್ರಗಳು ತಮ್ಮ ವಾಗ್ದಾನ ಮತ್ತು ಕರ್ತವ್ಯಗಳನ್ನು ಪಾಲಿಸದಿದ್ದುದೇ ಲೀಗದ ವಿಫಲತೆಗೆ ಮುಖ್ಯ ಕಾರಣವೆಂದು ಹೇಳಬಹುದು.

---

೬. ಎರಡನೆಯ ಮಹಾಯುದ್ಧ

ಮೊದಲನೆಯ ಮಹಾಯುದ್ಧದ ಕೊನೆಯಲ್ಲಿ ಆದ ವರ್ಸಾಯಿಲ್ಸ್ ಒಪ್ಪಂದದಂತೆ, ಜರ್ಮನಿಯು ತನ್ನ ಅನೇಕ ವಸಾಹತುಗಳನ್ನು ಕಳೆದುಕೊಂಡದ್ದಲ್ಲದೆ, ಮಿತಿ-ಮೀರಿದ ನಷ್ಟ ಭರ್ತಿಯನ್ನೂ ಅದು ಕೊಡಬೇಕಾಯಿತು. ಇದರಿಂದಾಗಿ, ಜರ್ಮನಿಯು ತನ್ನ ವೈರಿಗಳ ಮೇಲೆ ಸೇಡು ತೀರಿಸಿಕೊಳ್ಳಲು ಸಹಜವಾಗಿಯೇ ಹವಣಿಸುತ್ತಿತ್ತು. ವರ್ಷಕ್ಕೆ ಒಂದುನೂರು ದಶಲಕ್ಷ ಪೌಂಡು ಸ್ಟರ್ಲಿಂಗದಂತೆ ಅರವತ್ತಾರು ವರ್ಷಗಳು ತುಂಬಬೇಕಾಗಿದ್ದ ನಷ್ಟಭರ್ತಿಯನ್ನು ಪೂರೈಸುವುದೆಂದು, ತಾನು ಹಾಳಾಗುವದಂತೂ ನಿಶ್ಚಿತವೆಂದು ಜರ್ಮನಿಗೆ ಅನಿಸಿತು. ಜರ್ಮನಿಯ ಈ ನಷ್ಟವೇ, ಜನತೆಯಲ್ಲಿ ಒಂದು ತರಹದ ಸೇಡಿನ ಮನೋಭಾವನೆಯನ್ನು ಹುಟ್ಟಿಸಿ, ಎರಡನೆಯ ಮಹಾಯುದ್ಧಕ್ಕೆ ಕಾರಣವಾಯಿತೆಂದು ಹೇಳಬಹುದು.

ಅಡಾಲ್ಫ್ ಹಿಟ್ಲರನ ನೇತೃತ್ವದಲ್ಲಿ ನ್ಯಾಶನಲ್ ಸೋಶಿಯಲಿಸ್ಟ್ (National Socialist) ಅಥವಾ ನಾಝಿ (Nazi) ಪಾರ್ಟಿಯ ಬೆಳವಣಿಗೆಯು ಎರಡು ಮಹಾಯುದ್ಧಗಳ ಮಧ್ಯ ವೇಳೆಯ ಜರ್ಮನ್ ಇತಿಹಾಸದ ಒಂದು ಮುಖ್ಯ ಘಟನೆಯೆಂದರೆ ತಪ್ಪಾಗದು. ಜರ್ಮನ್ನರ ರಾಷ್ಟ್ರೀಯ ಭಾವನೆಗಳಿಗೆ ಹೆಚ್ಚು ಹೆಚ್ಚಾಗಿ ಪ್ರೋತ್ಸಾಹ ಕೊಟ್ಟು ಹಿಟ್ಲರನು ಜರ್ಮನಿಯನ್ನು ಹುರಿದುಂಬಿಸಿದನು. ಆತನು ಇಟ್ಟುಕೊಂಡಿದ್ದ ತತ್‌-ಕ್ಷಣದ ಗುರಿಯೆಂದರೆ, ಮೊದಲನೆಯ ಮಹಾಯುದ್ಧಕ್ಕೆ

ಜರ್ಮನಿಯೇ ಕಾರಣ ಎಂಬ ತಿಳುವಳಿಕೆಯನ್ನು ಖಂಡಿಸುವದು. ನಷ್ಟ-ಭರ್ತಿ ಸಂದಾಯವನ್ನು ನಿಲ್ಲಿಸುವದು. ಜರ್ಮನ್ ಸೈನಿಕರಿಗೆ ಹೊಸ ಹೊಸ ಶಸ್ತ್ರಾಸ್ತ್ರಗಳನ್ನೊದಗಿಸುವದು. ಯುದ್ಧಾನಂತರದಲ್ಲಿ ಜರ್ಮನಿಯು ಕಳೆದುಕೊಂಡಿದ್ದ ವಸಾಹತುಗಳನ್ನು ತಿರುಗಿ ಪಡೆಯುವದು, ಜರ್ಮನ್ ಜನಾಂಗಗಳು ವಾಸಿಸುತ್ತಿದ್ದ ಯುರೋಪದ ಎಲ್ಲ ಭಾಗಗಳನ್ನು ಜರ್ಮನಿಯೊಂದಿಗೆ ಸೇರಿಸುವದು- ಒಟ್ಟಾರೆ ಹೇಳುವದಾದರೆ, ವರ್ಸಾಯಿಲ್ಸ್ ಕರಾರಿನಲ್ಲಿದ್ದ ಪ್ರತಿಯೊಂದು ಅಂಶವನ್ನೂ ರದ್ದುಮಾಡುವದು ಮತ್ತು ಜರ್ಮನಿಯನ್ನು ಮೊದಲಿನ ಹಾಗೆ ಅಗ್ರಸ್ಥಾನಕ್ಕೇರಿಸುವುದು-ಇವು ಹಿಟ್ಲರನ ಗುರಿಗಳಾಗಿದ್ದವು. ತನ್ನ ಧ್ಯೇಯಗಳನ್ನು ಆತನು "ನನ್ನ ಹೋರಾಟ" (Mein Kampf) ಎಂಬ ಪುಸ್ತಕದಲ್ಲಿ ಪ್ರತಿಪಾದಿಸಿದನು.

೧೯೩೧-೩೨ರಲ್ಲಿ ಪ್ರಪಂಚವು ಎದುರಿಸಬೇಕಾಗಿ ಬಂದ ಆರ್ಥಿಕ ಮುಗ್ಗಟ್ಟು ಹಿಟ್ಲರನಿಗೂ ಮತ್ತು ಅವನ ನಾಝಿ ಪಾರ್ಟಿಗೂ ಸಹಾಯವನ್ನೇ ಮಾಡಿತು. ಆರ್ಥಿಕ ಮುಗ್ಗಟ್ಟಿನಿಂದ ತೊಂದರೆಗೀಡಾಗಿದ್ದ ಜರ್ಮನ್ ಜನತೆಯು, ನಷ್ಟಭರ್ತಿ ಸಂದಾಯವನ್ನು ನಿಲ್ಲಿಸಬೇಕೆಂದು ಪ್ರತಿಪಾದಿಸುತ್ತಿದ್ದ ನಾಝಿ ಪಾರ್ಟಿಯನ್ನು ಹೆಚ್ಚು ಹೆಚ್ಚಾಗಿ ಬೆಂಬಲಿಸಲಾರಂಭಿಸಿತು. ನಾಝಿ ಪಾರ್ಟಿಯು ಜನಪ್ರಿಯವಾಯಿತು.

ಹಿಟ್ಲರನು ಜರ್ಮನಿಯ ಪರಮೋಚ್ಚ ಅಧಿಕಾರಕ್ಕೆ ಬಂದ ರೀತಿಯಾದರೂ, ಫ್ರಾನ್ಸದಲ್ಲಿ ನೆಪೋಲಿಯನ್‌ಮಹಾಶಯನು (Napoleon the Great) ಅಧಿಕಾರಕ್ಕೆ ಬಂದುದರಷ್ಟೇ ಅದ್ಭುತವಾಗಿತ್ತು. ಆತನು ೧೯೩೩ ರಲ್ಲಿ ಜರ್ಮನಿಯ

ಚಾನ್ಸಲರ (ಪ್ರಧಾನ ಮಂತ್ರಿ) ನಾದನು. ಅದೇ ವರ್ಷ ಮಾರ್ಚ್ ತಿಂಗಳಲ್ಲಿ ಚುನಾವಣೆಗಳು ನಡೆಯಲಿದ್ದವು. ಚುನಾವಣೆಯ ದಿನಕ್ಕಿಂತ ಒಂದು ವಾರ ಪೂರ್ವದಲ್ಲಿ ಸಂಸತ್ ಭವನವು (Reichstag Building) ಬೆಂಕಿಯ ಅನಾಹುತಕ್ಕೀಡಾಗಿ ಹಾಳಾಯಿತು. ಆ ದುಷ್ಕಾರ್ಯದ ಹೊಣೆಯನ್ನು ನಾಝಿ ಪಕ್ಷವು, ದೇಶದಲ್ಲಿ ತನ್ನಷ್ಟೇ ಜನಾನುರಾಗಿಯಾದ ಕಮ್ಯೂನಿಸ್ಟ ಪಕ್ಷದ ಮೇಲೆ ಹೊರಿಸಿ ಒಂದು ಕ್ಷಿಪ್ರತಂತ್ರವನ್ನೇ (Coupd'etat) ಹೂಡಿತು. ಕಮ್ಯೂನಿಸ್ಟ ಸಂಸತ್ಸದಸ್ಯರನ್ನೂ ಮತ್ತು ಇತರ ಪ್ರಮುಖ ಕಮ್ಯೂನಿಸ್ಟರನ್ನು ಬಂಧಿಸಲಾಯಿತು. ಚುನಾವಣೆಯಲ್ಲಿ ನಾಝಿ ಮತ್ತು ಅದರ ಮಿತ್ರ ಪಕ್ಷಗಳಿಗೆ ಬಹುಮತ ದೊರೆಯಿತು. ಹೊಸ ಸಂಸತ್ತು ಕೂಡಲೇ ಸಭೆ ಸೇರಿ ನಾಝಿನಾಯಕನಾದ ಹಿಟ್ಲರನಿಗೆ ಸರ್ವಾಧಿಕಾರವನ್ನು ಕೊಟ್ಟು, ತನ್ನ ಇರವನ್ನು ತಾನೇ ರದ್ದುಪಡಿಸಿಕೊಂಡಿತು.

ಕೆಲ ಕಾಲದ ನಂತರ, ಹಿಟ್ಲರನ ವೈರಿಯಾದ ಕ್ಯಾಪ್ಟನ್ ರೋಹ್ಮ್ (Captain Rohm) ಎಂಬುವನು, ಅವನ ಏಳಿಗೆಯನ್ನೂ, ಅಧಿಕಾರವನ್ನೂ ಸಹಿಸದೆ, ಒಂದು ಒಳಸಂಚು ಹೂಡಿ ಆತನನ್ನು ಕೊಲ್ಲಲು ಪ್ರಯತ್ನಿಸಿದನು. ಆದರೆ ಸಂಚು ಬಯಲಾಗಿ ಅದರ ಮುಖ್ಯಸ್ಥರು ಶಿರಚ್ಛೇದನ ಮಾಡಲ್ಪಟ್ಟರು. ೧೯೩೪ ರಲ್ಲಿ ಜರ್ಮನಿಯ ಅಧ್ಯಕ್ಷ ಹಿಂಡನ್‌ಬರ್ಗ್‌ನ ಮರಣಾನಂತರ ಹಿಟ್ಲರನು ಅಧ್ಯಕ್ಷ ಮತ್ತು ಚಾನ್ಸಲರ್ ಪದವಿಗಳೆರಡನ್ನು ತಾನೇ ವಹಿಸಿಕೊಂಡನು. "ಫ್ಯೂರರ್" (FUHRER) ಅಥವಾ 'ನಾಯಕ' ಎಂದು ಕರೆಸಿಕೊಂಡನು.

ನಾಝಿ ಪಾರ್ಟಿಯು. ಜರ್ಮನಿಯಲ್ಲಿದ್ದ ಜ್ಯೂ ಜನರಿಗೆ (Jews) ಅತಿಯಾಗಿ ಕಿರುಕುಳ ಕೊಡಲಾರಂಭಿಸಿತು. ನಾಝಿ ಆಡಳಿತವನ್ನು ವಿರೋಧಿಸುತ್ತಿದ್ದ ರೋಮನ್ ಕ್ಯಾಥೋಲಿಕ್ ಮತ್ತು ಲುಥೇರಿಯನ್ ಪಂಗಡಗಳ ಮೇಲಂತೂ ಪಾಶವೀ ರೀತಿಯ ಹಿಂಸೆ ಪ್ರಾರಂಭವಾಯಿತು. ಜರ್ಮನಿಯು ಲೀಗದಿಂದ ಹೊರಬಿತ್ತು. ವರ್ಸಾಯಿಲ್ಸ್ ಒಪ್ಪಂದದಲ್ಲಿದ್ದ ಶಸ್ತ್ರತ್ಯಾಗ ಷರತ್ತುಗಳನ್ನು ಬದಿಗೊತ್ತಿ, ಬೇರೆ ಪ್ರಬಲ ರಾಷ್ಟ್ರಗಳೊಡನೆ ತನ್ನ ಸರಿಸಮಾನತೆಯನ್ನು ಸಾರಿತು. ಆಸ್ಟ್ರಿಯದಲ್ಲಿ ಜನಿಸಿದವನಾದ ಹಿಟ್ಲರನು, ವರ್ಸಾಯಿಲ್ಸ್ ಒಪ್ಪಂದದ ವಿರುದ್ಧ ಆಸ್ಟ್ರಿಯ, ಜರ್ಮನಿಗಳೆರಡನ್ನೂ ಒಂದುಗೂಡಿಸುವ ಮಹತ್ವಾಕಾಂಕ್ಷೆಯನ್ನೂ ಇಟ್ಟುಕೊಂಡಿದ್ದನು. ೧೯೩೪ ರಲ್ಲಿ ಆಸ್ಟ್ರಿಯದಲ್ಲಿ ನಾಝಿಪಾರ್ಟಿಯು ಪ್ರಯತ್ನಿಸಿದ ಕ್ಷಿಪ್ರಕ್ರಾಂತಿ ಫಲಿಸಲಿಲ್ಲ; ನಾಝಿ ತತ್ವದ ಪ್ರಚಾರ ಮಾತ್ರ ಮೊದಲಿಗಿಂತ ಬಿರುಸಾಗಿ ನಡೆಯಿತು. ೧೯೩೮ ರಲ್ಲಿ ಜರ್ಮನಿಯ ಸೈನ್ಯವು ಆಸ್ಟ್ರಿಯವನ್ನು ಮುತ್ತಿತು. ಆಸ್ಟ್ರಿಯವು ಜರ್ಮನ್ ರಾಷ್ಟ್ರದಲ್ಲಿ ಸೇರ್ಪಡೆಯಾಯಿತು. ಹೀಗೆ, ಹಿಟ್ಲರನು ವರ್ಸಾಯಿಲ್ಸ್ ಒಪ್ಪಂದದ ಕರಾರುಗಳನ್ನು ಒಂದೊಂದಾಗಿ ಮುರಿಯಲಾರಂಭಿಸಿದನು. ಜರ್ಮನಿಯನ್ನು ಮತ್ತೆ ಪ್ರಬಲ ರಾಷ್ಟ್ರವನ್ನಾಗಿ ಮಾಡಿದನು.

ಮೊದಲನೆಯ ಮಹಾಯುದ್ಧದಲ್ಲಿ ಗೆದ್ದ ರಾಷ್ಟ್ರಗಳಲ್ಲಿ ಇಟಲಿಯೂ ಒಂದು. ಆದರೆ ಯುದ್ಧದಿಂದ ತಾನು ಆಶಿಸಿದಷ್ಟು ಫಲ ಇದಕ್ಕೆ ದೊರೆಯಲಿಲ್ಲ. ಯುದ್ಧ ಸಿದ್ಧತೆಗಾಗಿ ಬಹಳಷ್ಟು ಹಣವನ್ನು ವ್ಯಯಿಸಿದ್ದ ಈ ದೇಶದಲ್ಲಿ ಈಗ ಅತಿ ಬಡತನವು

ಕಾಣಿಸಿಕೊಳ್ಳಲಾರಂಭಿಸಿತು. ಹತಾಶರಾದ ಇಟಾಲಿಯನ್ನರು ಫ್ಯಾಸಿಸ್ಟ್ (Fascist) ಪಕ್ಷದ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು. ಮುಸ್ಸೋಲಿನಿಯ ನೇತೃತ್ವದಲ್ಲಿ ಫ್ಯಾಸಿಸ್ಟರು (The Fascists or Black shirts) ರಾಜಧಾನಿಯಾದ ರೋಮ್ ಪಟ್ಟಣಕ್ಕೆ ನುಗ್ಗಿ, ಸರಕಾರ ನಿರ್ವಹಣೆಯನ್ನು ತಮಗೊಪ್ಪಿಸಬೇಕೆಂದು ದೊರೆಯೊಡನೆ ತಗಾದೆ ಮಾಡಿದರು. ದೊರೆಯು ಒಪ್ಪಿದನು; ಮುಸ್ಸೋಲಿನಿಯು ಇಟಲಿಯ ಸರ್ವಾಧಿಕಾರಿಯಾಗಿ 'ಡ್ಯೂಸ್' (Duce) ಎಂದು ಕರೆಯಿಸಿಕೊಳ್ಳಲ್ಪಟ್ಟನು.

ಇಟಲಿಯ ಆಂತರಿಕ ಸ್ಥಿತಿ, ಜನರ ಬಡತನದಿಂದಾಗಿ, ದಿನೇ ದಿನೇ ಕೆಟ್ಟು ಚಿಂತಾಜನಕವಾಯಿತು. ಸಮೃದ್ಧಿಯಾದ ಯಾವುದಾದರೊಂದು ನೆರೆಯ ರಾಷ್ಟ್ರವನ್ನು ಆಕ್ರಮಿಸುವುದರಿಂದ ಪರಿಸ್ಥಿತಿ ಸುಧಾರಿಸಬಹುದೆಂದು ನಂಬಿದ ಮುಸ್ಸೋಲಿನಿಯು ೧೯೩೫ ರಲ್ಲಿ ಅಬಿಸೀನಿಯದ ಮೇಲೆ ಏರಿ ಹೋದನು. 'ಲೀಗ್' ತನ್ನ ಮೇಲೆ ಶಿಸ್ತಿನ ಕ್ರಮಕೈಕೊಂಡೀತೆಂಬ ಭಯ ಅವನಿಗೆ ಎಳ್ಳಷ್ಟೂ ಇರಲಿಲ್ಲ. ಕ್ರಮ ತೆಗೆದುಕೊಳ್ಳಲು 'ಲೀಗ್' ಪ್ರಯತ್ನಿಸಿತಾದರೂ ಅದರ ಕೈಸಾಗಲಿಲ್ಲ. ಈ ಮಧ್ಯೆ ಜರ್ಮನಿ ಮತ್ತು ಇಟಲಿಗಳು ರೋಮ್-ಬರ್ಲಿನ್ ಅಕ್ಷ (Rome-Berlin-Axis) ಎಂಬ ಒಂದು ಒಪ್ಪಂದವನ್ನು ಮಾಡಿಕೊಂಡವು.

ಜರ್ಮನಿ ಮತ್ತು ಇಟಲಿಗಳಲ್ಲಿ ಯುದ್ಧ ತಯಾರಿಯು ಬಹಳ ಭರದಿಂದ ಸಾಗಿತು. ಹಿಟ್ಲರನು ನಷ್ಟ ಭರ್ತಿ ಸಂದಾಯವನ್ನು ನಿಲ್ಲಿಸಿದನು. ಕಡ್ಡಾಯವಾಗಿ ಜನರನ್ನು ಸೈನ್ಯಕ್ಕೆ

ಸೇರಿಸುವ ಪದ್ಧತಿಯನ್ನು ಪುನಃ ಜಾರಿಗೆ ತಂದು, ಸೇನಾ ಬಲವನ್ನು ಹೆಚ್ಚಿಸಿದನು. ಬಂದೂಕುಗಳೂ, ಫಿರಂಗಿ ರಥಗಳೂ ಮತ್ತು ಅನೇಕ ತರಹದ ಎಲ್ಲ ಯುದ್ಧ ಸಾಮಗ್ರಿಗಳೂ ಅಮಿತ ಪ್ರಮಾಣದಲ್ಲಿ ತಯಾರಾದವು. ಯುದ್ಧದ ಹಡಗುಗಳು ಕಾವಲು ಹಡಗುಗಳು (Cruisers), ಟಾರ್ಪೆಡೋ ಬೋಟು-ಗಳು (Torpedo boat destroyer), ಜಲಾಂತರ್ಗಾಮಿ ಹಡಗುಗಳು (ಸಬ್ಮರೀನ್) ಮುಂತಾದವುಗಳನ್ನೊಳಗೊಂಡ ಒಂದು ನೌಕಾಪಡೆಯೂ ಸಿದ್ಧವಾಯಿತು. ಹೊಸದೊಂದು ವಾಯುದಳವೂ ಸಜ್ಜಾಯಿತು.

ಇಷ್ಟೆಲ್ಲ ತಯಾರಿಯಾದ ಮೇಲೆ, ವರ್ಸಾಯಿಲ್ಸ್ ಒಪ್ಪಂದದಂತೆ ಜರ್ಮನಿಯು ಕಳೆದುಕೊಂಡಿದ್ದ ಎಲ್ಲ ಭೂ ಭಾಗಗಳನ್ನೂ ತನಗೆ ಹಿಂದಿರುಗಿಸಿ ಜರ್ಮನಿಯ ಎಲ್ಲೆಗಳನ್ನು ಸರಿಪಡಿಸಬೇಕೆಂದು ಹಿಟ್ಲರನು ಸಂಬಂಧಪಟ್ಟ ರಾಷ್ಟ್ರಗಳಿಗೆ ಆಗ್ರಹದಿಂದ ಒತ್ತಾಯಿಸಿದನು. ಜರ್ಮನ್ ಜನಾಂಗದಿಂದ ತುಂಬಿದ್ದ ಮತ್ತು ಝೆಕೋಸ್ಲೋವಾಕಿಯದ ಭಾಗವಾದ ಸುಡೆಟಾನ್‌ಲ್ಯಾಂಡ್ (Sudetanland) ತನಗೆ ಸೇರತಕ್ಕದ್ದೆಂದು ೧೯೩೮ರಲ್ಲಿ ಹಿಟ್ಲರನು ವಾದಿಸಿದನು. ಝೆಕ್ ಜನರು (Czechs) ತಮ್ಮ ಪ್ರಾಂತಕ್ಕಾಗಿ ಹೋರಾಡಲು ಸಿದ್ಧರಿದ್ದರು. ಆದರೆ ಈ ವಿವಾದದಲ್ಲಿ ಇಂಗ್ಲೆಂಡು ಕೈಹಾಕಿ ಸುಡೆಟಾನ್-ಲ್ಯಾಂಡನ್ನು ಜರ್ಮನಿಗೆ ಕೊಡಿಸಿತು. ಸದ್ಯ ಯುದ್ಧ ಪ್ರಾರಂಭವಾಗಲಿಲ್ಲ.

ಇಷ್ಟರಿಂದ ತೃಪ್ತಿಯಾಗದ ಹಿಟ್ಲರನು ೧೯೩೯ ರಲ್ಲಿ ಝೆಕೋಸ್ಲೋವಾಕಿಯದ ಮೇಲೆ ದಾಳಿ ಮಾಡಿ ಅದನ್ನು ಪೂರ್ಣವಾಗಿ ವಶಪಡಿಸಿಕೊಂಡನು. ಅದೇ ವರ್ಷ ಬೇಸಗೆಯಲ್ಲಿ ಆತನ ಗಮನವು ಪೋಲಂಡ್ ಮತ್ತು ಡ್ಯಾನ್ಜಿಗ್‌ಗಳ ಕಡೆಗೆ ಹರಿಯಿತು.

ಡ್ಯಾನ್ಜಿಗ್ ಎಂಬುದು ಬಾಲ್ಟಿಕ್ ಸಮುದ್ರ ತೀರದಲ್ಲಿಯ ಒಂದು ಬಂದರ. ಪೋಲಂಡ ದೇಶಕ್ಕೆ ತನ್ನದೇ ಆದ ಬಂದರವೇ ಇರಲಿಲ್ಲವಾದ್ದರಿಂದ ಇದನ್ನು ಉಪಯೋಗ ಮಾಡಿಕೊಳ್ಳುವ ಹಕ್ಕನ್ನು ವರ್ಸಾಯಿಲ್ಸ್ ಒಪ್ಪಂದದ ಪ್ರಕಾರ ಅದಕ್ಕೆ ಕೊಡಲಾಗಿತ್ತು. ಪೋಲಂಡ್ ಮತ್ತು ಡ್ಯಾನ್ಜಿಗ್‌ಗಳನ್ನು ಜರ್ಮನ್ ದೇಶವು ಬೇರ್ಪಡಿಸುತ್ತಿತ್ತಾದ್ದರಿಂದ ಇವುಗಳಿಗೆ ಮಾರ್ಗವನ್ನೇರ್ಪಡಿಸಲು, ಜರ್ಮನ್ ಪ್ರದೇಶದಲ್ಲಿ "ಪೋಲಿಶ್ ಕಾರಿಡಾರ್" ಎಂಬ ಒಂದು ಭೂ ಪಟ್ಟಿಯನ್ನು ಪೋಲಂಡಕ್ಕೆ ಕೊಡಲಾಗಿತ್ತು. ಈ ಭೂಪಟ್ಟಿಯು ಪೂರ್ವ ಪ್ರಶಿಯವನ್ನು ಜರ್ಮನಿಯ ಉಳಿದ ಭಾಗಗಳಿಂದ ಬೇರ್ಪಡಿಸುತ್ತಿತ್ತು. ಮತ್ತು ಮುಖ್ಯವಾಗಿ ಜರ್ಮನ್ ಜನಾಂಗವನ್ನೇ ಒಳಗೊಂಡ ಡ್ಯಾನ್ಜಿಗ್ ನಗರವು 'ಲೀಗ್'ದ ನೇರ ಅಧೀನಕ್ಕೊಳಪಟ್ಟಿತ್ತು. ಪೂರ್ವ ಪ್ರಶಿಯವನ್ನು ಜರ್ಮನಿಯೊಡನೆ ಒಂದುಗೂಡಿಸುವ ಸಲುವಾಗಿ ಹಿಟ್ಲರನು ಡ್ಯಾನ್ಜಿಗ್ ನಗರವನ್ನೂ ಮತ್ತು ಪೋಲಿಶ್ ಕಾರಿಡಾರ್‌ವನ್ನು ವಶಪಡಿಸಿಕೊಳ್ಳಲು ಆಶಿಸಿದನು. ಜರ್ಮನಿಯು ಉಪಯೋಗಕ್ಕಾಗಿ ಪೋಲಿಶ್ ಭೂ ಪಟ್ಟಿಗೆ ಅಡ್ಡವಾಗಿ ಒಂದು ಸೈನಿಕ ರಸ್ತೆಯು ನಿರ್ಮಾಣವಾಗಬೇಕೆಂದು

ಸೂಚಿಸಿದನು. ಇದಕ್ಕೆ ಪೋಲಂಡ್ ಸರಕಾರವು ತನ್ನ ಅನುಮತಿಯನ್ನು ಸಹಜವಾಗಿಯೇ ನಿರಾಕರಿಸಿತು. ಆ ಸಂದರ್ಭದಲ್ಲಿ ಜರ್ಮನಿಯೇನಾದರೂ ಆಕ್ರಮಿಸಿದರೆ ತಾನು ಜರ್ಮನಿಯ ವಿರುದ್ಧ ಯುದ್ಧ ಹೂಡುವುದಾಗಿ ಇಂಗ್ಲಂಡವು ಘೋಷಿಸಿತು.

೧೯೩೯ ರ ಆಗಸ್ಟ್ ತಿಂಗಳದಲ್ಲಿ ಹಿಟ್ಲರನು ರಶಿಯ ದೊಂದಿಗೆ ಸ್ನೇಹಪರ ಸಂಧಾನ ಮಾಡಿಕೊಂಡನು. ನಂತರ ಅದೇ ವರ್ಷ ಸಪ್ಟಂಬರ ೧ ರಂದು ಜರ್ಮನ್ ಸೈನ್ಯವು ಮುನ್ಸೂಚನೆಯಿಲ್ಲದೆ ಪೋಲಂಡವನ್ನೂ ಆಕ್ರಮಿಸಿತು. ಸೈನ್ಯ ವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದೂ, ಇಲ್ಲವಾದರೆ ಯುದ್ಧಕ್ಕೆ ತಯಾರಾಗಬೇಕೆಂದೂ, ಇಂಗ್ಲಂಡವು ಜರ್ಮನಿಗೆ ತನ್ನ ಅಂತಿಮ ನಿರ್ಧಾರವನ್ನು ತಿಳಿಸಿತು. ಸೆಪ್ಟಂಬರ ಮೂರ ರಂದು ಯುದ್ಧವು ಪ್ರಾರಂಭವಾಯಿತು.

ಸೆಪ್ಟಂಬರ ೧೯೩೯ ರಲ್ಲಿ ಪ್ರಾರಂಭವಾದ ಎರಡನೇ ಮಹಾಯುದ್ಧವು ೧೯೪೫ ರ ಎಪ್ರಿಲದ ವರೆಗೆ ನಡೆಯಿತು. ಈ ಯುದ್ಧದ ವಿವರಗಳನ್ನು ತಿಳಿಯುವದಕ್ಕಿಂತ ಅದರ ಕೆಲ ಮುಖ್ಯ ಲಕ್ಷಣಗಳನ್ನಷ್ಟು ಮಾತ್ರ ವಿವೇಚಿಸಬಹುದು.

ಯುದ್ಧದ ಪ್ರಾರಂಭದಲ್ಲಿ ಜರ್ಮನ್ನರು ಎಲ್ಲೆಲ್ಲೂ ವಿಜಯಿ ಗಳಾದರು. ಪೋಲಂಡವು ಜರ್ಮನ್ನರ ವಶವಾಯಿತು. ಡೆನ್ಮಾರ್ಕ, ನಾರ್ವೆ, ಹಾಲಂಡ್ ಮತ್ತು ಬೆಲ್ಜಿಯಂ ದೇಶ ಗಳೂ ೧೯೪೦ ರಲ್ಲಿ ಅವರ ಆಧೀನವಾದವು. ನಂತರ ಫ್ರಾನ್ಸದ ಮೇಲೂ ಜಯಗಳಿಸಿದರು, ಪ್ಯಾರಿಸ್ಸನ್ನು ಆಕ್ರಮಿಸಿದರು.

ಜರ್ಮನ್ ಸೈನಿಕರಿಗೆ ದೊಡ್ಡ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನೊದಗಿಸುವುದಾಗಿ ಫ್ರಾನ್ಸು ಒಪ್ಪಿಕೊಂಡಿತು.

೧೯೪೦ ರ ಶರತ್ಕಾಲದಲ್ಲಿ ಜರ್ಮನಿಯು ಇಂಗ್ಲೆಂಡದ ಮೇಲೆ ದಾಳಿಯನ್ನು ಪ್ರಾರಂಭಿಸಿತು. ಇಂಗ್ಲೆಂಡದ ರಾಯಲ್ ಏರ್‌ಫೋರ್ಸ್‌ನ್ನು ಹಾಳುಮಾಡಲು ಜರ್ಮನಿಯು ಮೊದಲು ಪ್ರಯತ್ನಿಸಿತು. ಇದು ಸಾಧ್ಯವಾಗಲಿಲ್ಲ. ನಂತರ, ರಾತ್ರಿವೇಳೆಯಲ್ಲಿ ಲಂಡನ್ ಮತ್ತು ಇತರ ಪ್ರಮುಖ ನಗರಗಳ ಮೇಲೆ ಜರ್ಮನ್ ಸೈನಿಕರು ಗುಂಡಿನ ಮಳೆಯನ್ನೇ ಸುರಿಸ-ಲಾರಂಭಿಸಿದರು. ಇದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಇಂಗ್ಲೆಂಡಿನ ಯುದ್ಧ ಕೈಗಾರಿಕೆಗಳಿಗಂತೂ ಯಾವ ನಷ್ಟವೂ ಆಗಲಿಲ್ಲ.

ಈ ಯುದ್ಧಕ್ಕೂ ತಮಗೂ ಯಾವ ಸಂಬಂಧವೂ ಇಲ್ಲ, ಇದೊಂದು ಯುರೋಪಿಯನ್ನರ ಜಗಳ ಎಂಬ ಧೋರಣೆಯನ್ನು ಯುದ್ಧದ ಪ್ರಾರಂಭದಲ್ಲಿ ತಳೆದ ಅಮೇರಿಕವು, ಇಂಗ್ಲೆಂಡವು ಚಂಡಿಯಾಗಿಯೇ ಧೈರ್ಯದಿಂದ ಜರ್ಮನಿ-ಇಟಲಿಗಳನ್ನು ಎದುರಿಸುತ್ತಿದ್ದುದನ್ನು ಕಂಡು, ಬರಬರುತ್ತಾ, ಇಂಗ್ಲೆಂಡಕ್ಕೆ ಸಹಾಯಮಾಡುವ ವಿಚಾರವನ್ನು ಮಾಡಿತು. ಇಂಗ್ಲೆಂಡವು ವಶವಾದರೆ, ಅಮೇರಿಕೆಯ ಮೇಲೆಯೂ ಹಿಟ್ಲರನು ಎರಗುವನೆಂಬ ಒಂದು ವದಂತಿಯೂ ಅಮೇರಿಕನ್ನರನ್ನು ಬಡಿದೆಬ್ಬಿಸಿತು. ಅವರು ಇಂಗ್ಲೆಂಡಕ್ಕೆ ಹೆಚ್ಚು ಹೆಚ್ಚು ಸಹಾಯಮಾಡಲು ಪ್ರಾರಂಭಿಸಿದರು. ಅಮೇರಿಕದ ಅಧ್ಯಕ್ಷ ರೂಸವೆಲ್ಟ್ ಮತ್ತು ಇಂಗ್ಲೆಂಡದ ಪ್ರಧಾನಿ ಚರ್ಚಿಲ್

ಇಬ್ಬರೂ ಸೇರಿ “ಅಟ್ಲಾಂಟಿಕ್ ಚಾರ್ಟರ್” ಎಂಬ ಒಂದು ಒಪ್ಪಂದವನ್ನು ಮಾಡಿಕೊಂಡರು. ತಮ್ಮ ರಾಷ್ಟ್ರಗಳು ಜರ್ಮನಿಯ ಮೇಲೆ ಯುದ್ಧ ಮಾಡುತ್ತಿದ್ದುದರ ಕಾರಣ ಗಳನ್ನೂ ಮತ್ತು ಗುರಿಯನ್ನೂ ಈ ಒಪ್ಪಂದದಲ್ಲಿ ಪ್ರತಿಪಾದಿಸಲಾಯಿತು.

ಇಷ್ಟರಲ್ಲಿ ಹಿಟ್ಲರನು ಒಂದು ದೊಡ್ಡ ತಪ್ಪನ್ನೇ ಮಾಡಿದ್ದನು. ರಶಿಯದಂತಹ ದೊಡ್ಡ ರಾಷ್ಟ್ರದ ಸಂಪನ್ಮೂಲ ಗಳೆಲ್ಲ ತನ್ನ ವಶವಾದರೆ ಇಂಗ್ಲಂಡದ ಮೇಲೆ ಹೆಚ್ಚು ಫಲಕಾರಿ ಯಾಗಿ ದಾಳಿಮಾಡಬಹುದೆಂದು ಬಗೆದು ರಶಿಯದ ಮೇಲೆ ಏರಿಹೋದನು. ಹಿಂದೆ ೧೮೧೨ರಲ್ಲಿ ನೆಪೋಲಿಯನ್ನನು ಮಾಡಿದ ತಪ್ಪನ್ನೇ ಹಿಟ್ಲರನು ಪುನಃ ಮಾಡಿದನೆಂದು ಧಾರಾಳ ವಾಗಿ ಹೇಳಬಹುದು. ರಶಿಯ ಹಿಟ್ಲರನಿಗೆ ಮಾರಕ ಪೆಟ್ಟನ್ನೆ ಕೊಟ್ಟಿತು.

ಏಶಿಯ ಖಂಡದ ಒಂದು ಚಿಕ್ಕ ರಾಷ್ಟ್ರವಾದ ಜಪಾನವು ಈ ಶತಮಾನದ ಪ್ರಾರಂಭದಲ್ಲಿ ಒಮ್ಮೆ ರಶಿಯವನ್ನೇ ಸೋಲಿ ಸಿತ್ತು. ಹೀಗಾಗಿ, ಪ್ರಪಂಚದಲ್ಲಿ ತಾನೂ ಒಂದು ಪ್ರಬಲ ರಾಷ್ಟ್ರ ಎಂದು ತಿಳಿದುಕೊಂಡಿತ್ತು. ಈ ರಾಷ್ಟ್ರ ಜರ್ಮನಿ, ಇಟಲಿಗಳೊಡನೆ ಮೈತ್ರಿ ಬೆಳಸಿ, ಅವುಗಳೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡು, ಅದಾಗಲೇ ಅಸ್ತಿತ್ವದಲ್ಲಿದ್ದ ರೋಮ್-ಬರ್ಲಿನ್ ಅಕ್ಷವನ್ನು ರೋಮ್–ಬರ್ಲಿನ್-ಟೋಕಿಯೋ ಅಕ್ಷ (Rome–Berlin– Tokyo–Axis) ವನ್ನಾಗಿ ಪರಿ– ವರ್ತಿಸಿತು.

೧೯೪೧ ರಲ್ಲಿ ಜಪಾನವು, ಪ್ಯಾಸಿಫಿಕ್ ಮಹಾಸಾಗರದಲ್ಲಿರುವ, ಅಮೇರಿಕದ ಅಧೀನದಲ್ಲಿದ್ದ, ಪರ್ಲ್ ಹಾರ್ಬರ್‌ವನ್ನು ಮುತ್ತಿತು. ತಕ್ಷಣವೇ ಅಮೇರಿಕವು ಜಪಾನದ ಮೇಲೆ ಯುದ್ಧ ಘೋಷಿಸಿತು. ಇಂಗ್ಲಂಡವು ಅಮೇರಿಕದ ಕಡೆ ಸೇರಿತು; ಯುದ್ಧವು ಪ್ರಪಂಚವನ್ನೆಲ್ಲ ಆವರಿಸಿತು. ಒಂದು ಕಡೆ ದಾಳಿಗಾರರಾದ ಜರ್ಮನಿ, ಇಟಲಿ, ಜಪಾನ (ಅಕ್ಷಪಕ್ಷ) ಗಳಿದ್ದರೆ, ಇನ್ನೊಂದು ಕಡೆ ಇಂಗ್ಲಂಡ್ ಮತ್ತು ಅದರ ಅಧಿಪತ್ಯಕ್ಕೊಳಪಟ್ಟ ರಾಷ್ಟ್ರಗಳು, ಅಮೇರಿಕ, ರಶಿಯಾ ಮತ್ತು ಚೀನ (ಮಿತ್ರಪಕ್ಷ) ಗಳಿದ್ದವು.

ಜಪಾನವು ಯುದ್ಧಪ್ರಾರಂಭದಲ್ಲಿ ಅನೇಕಾನೇಕ ಪ್ರದೇಶಗಳನ್ನು — ಹಾಂಗಕಾಂಗ್, ಫಿಲಿಫೈನ್ಸ್, ಮಲಯಾ, ಸಿಂಗಾಪುರ, ನ್ಯೂಗಿನಿ— ವಶಪಡಿಸಿಕೊಂಡಿತಾದರೂ, ಪ್ಯಾಸಿಫಿಕ್ ಮಹಾಸಾಗರದಲ್ಲಿ ಮಿತ್ರರಾಷ್ಟ್ರಗಳ ಬಲವು ಹೆಚ್ಚಿದಂತೆಲ್ಲ ಅದರ ಕೈಸಾಗಲಿಲ್ಲ.

೧೯೪೩ ರಿಂದ ಮುಂದೆ ಮಿತ್ರರಾಷ್ಟ್ರಗಳ ಕೈ ಮೇಲಾಯಿತು, ಮತ್ತು ಯುದ್ಧವು ಕೊನೆಗೊಳ್ಳುತ್ತ ಬಂತು. ಆ ವರ್ಷದ ಬೇಸಗೆಯಲ್ಲಿ ಮಿತ್ರರಾಷ್ಟ್ರಗಳು ಇಟಲಿ ದೇಶದ ಒಳನುಗ್ಗಿದವು. ಮುಸೋಲಿನಿಯ ಮೇಲೆ ಇಟಲಿಯ ಜನರೇ ಒಂದು ಕ್ರಾಂತಿ ನಡೆಸಿ, ಅವನನ್ನು ಬಂಧಿಸಿದರು. ಅನಂತರ ಅಧಿಕಾರಕ್ಕೆ ಬಂದ ಹೊಸ ಸರಕಾರವು ಮಿತ್ರರಾಷ್ಟ್ರಗಳಿಗೆ ಶರಣಾಗತವಾಯಿತು. ಅಷ್ಟೇ ಅಲ್ಲದೆ, ಇಟಲಿಯು ಜರ್ಮನಿಯ ಮೇಲೆ ಯುದ್ಧ ಘೋಷಿಸಿತು. ೧೯೪೫ ರಲ್ಲಿ ಮುಸೋಲಿನಿಯನ್ನು ಇಟಾಲಿಯನ್ನರೇ ಗುಂಡಿಕ್ಕಿ ಕೊಂದರು.

ಜರ್ಮನಿಗೂ ಕಡೆಗಾಲ ಸನ್ನಿಹಿತವಾಗುತ್ತಲಿತ್ತು. ಜನರಲ್ ಐಸೆನ್‌ಹಾವರನ ನೇತೃತ್ವದಲ್ಲಿ ಮಿತ್ರರಾಷ್ಟ್ರಗಳ ಸೇನೆಯು ಜರ್ಮನಿಯ ಮೇಲೆ ದಾಳಿ ಮಾಡಿತು. ರಶಿಯನ್ನರೂ ಪೂರ್ವದಿಕ್ಕಿನಿಂದ ಅದರ ಮೇಲೆರಗಿದರು. ಜರ್ಮನಿಯ ಸ್ಥಿತಿ ಚಿಂತಾಜನಕವಾಯಿತು. ಕೈಸಾಗದೆ ಹಿಟ್ಲರನು ೧೯೪೫ ರ ಎಪ್ರಿಲ್ ತಿಂಗಳಲ್ಲಿ ಆತ್ಮಹತ್ಯೆ ಮಾಡಿಕೊಂಡನು. ಜರ್ಮನ್ ಸರಕಾರದ ಇನ್ನೂ ಕೆಲ ಪ್ರಮುಖರು ಓಡಿಹೋದರು. ಮೇ ತಿಂಗಳದಲ್ಲಿ ಜರ್ಮನಿಯು ಶರಣು ಬಂತು.

ಇನ್ನುಳಿದುದೆಂದರೆ ಜಪಾನ ಒಂದೇ. ಅದರ ಕೊನೆಯೂ ಇನ್ನು ಬಹಳ ದೂರವೇನಿರಲಿಲ್ಲ. ೧೯೪೫ ರ ಅಗಸ್ಟ್ ತಿಂಗಳಲ್ಲಿ ಅಮೇರಿಕನ್ನರು ಜಪಾನದ ಎರಡು ಮುಖ್ಯ ನಗರಗಳಾದ ಹಿರೋಶಿಮಾ ಮತ್ತು ನಾಗಾಸಾಕಿಗಳ ಮೇಲೆ ಅಣುಬಾಂಬುಗಳನ್ನು ಹಾಕಿದರು. ಅದು ಭಯಾನಕ ಪರಿಣಾಮ ಮಾಡಿತು; ಜಪಾನ ಸರಕಾರವು ಶರಣಾಗತಿಯನ್ನು ಒಪ್ಪಿಕೊಂಡಿತು. ಮಿತ್ರರಾಷ್ಟ್ರಗಳ ಸೇನೆಯು ಜನರಲ್ ಮೆಕಾರ್ಥರನ ನೇತೃತ್ವದಲ್ಲಿ ಜಪಾನದ ಆಡಳಿತವನ್ನು ವಹಿಸಿಕೊಂಡಿತು.

೭. ಸಂಯುಕ್ತ ರಾಷ್ಟ್ರಸಂಸ್ಥೆ (ಯು. ಎನ್. ಓ.)

ಯುದ್ಧವಂತೂ ಕೊನೆಗೊಂಡಿತು. ೧೯೪೫ರ ಏಪ್ರಿಲ್ ಂಗಳಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ ಎಂಬಲ್ಲಿ ಮಿತ್ರ ರಾಷ್ಟ್ರಗಳೂ ುತ್ತು ಎಲ್ಲ ತಟಸ್ಥ ರಾಷ್ಟ್ರಗಳೂ ಸಭೆ ಸೇರಿದವು. ಜಗತ್ತಿ ಲ್ಲಿ ಶಾಂತಿ ಸ್ಥಾಪನೆ ಮಾಡುವುದಕ್ಕಾಗಿ, ಇದುವರೆಗೂ ೆಲಸ ಮಾಡಿ ವಿಫಲವಾಗಿದ್ದ, ಲೀಗ್ ಆಫ್ ನೇಶನ್ಸ್‌ದ ದಲು ಸಂಯುಕ್ತ ರಾಷ್ಟ್ರ ಸಂಸ್ಥೆ (ಯು.ಎನ್.ಓ.) ಎಂಬ ಂದು ಹೊಸ ಸಂಸ್ಥೆಯನ್ನು ಸ್ಥಾಪಿಸಲು ಎಲ್ಲರೂ ಒಪ್ಪಿದರು. ೀಗದ ಇದ್ದುಬಿದ್ದ ಆಸ್ತಿ ಮತ್ತು ಹೊಣೆಗಳನ್ನು ಹೊಸ ಸಂಸ್ಥೆಗೆ ವರ್ಗಾಯಿಸಲಾಯಿತು. ೧೯೪೬ರ ಏಪ್ರಿಲ್ ನೇ ತಾರೀಖು ಲೀಗದ ಅಸೆಂಬ್ಲಿಯು ಕೊನೆಯಬಾರಿ ಸಭೆ ೇರಿ ತನ್ನ ಇರವನ್ನು ರದ್ದುಗೊಳಿಸಲು ತಾನೇ ನಿರ್ಣಯ ಕೊಂಡಿತು.

ಈಗ, ಸುಮಾರು ೧೧೭ ರಾಷ್ಟ್ರಗಳು ಈ ಅಂತರ ಾಷ್ಟ್ರೀಯ ಸಂಸ್ಥೆಯ ಸದಸ್ಯರಾಗಿವೆ. ಜಾಗತಿಕ ಶಾಂತಿ ್ಥಾಪನೆ, ರಾಷ್ಟ್ರಗಳಲ್ಲಿ ಸ್ನೇಹಪರ ಭಾವನೆಯನ್ನು ಬೆಳೆಸು- ದು, ಅಂತರರಾಷ್ಟ್ರೀಯ ಸಹಕಾರ ಬೆಳವಣಿಗೆಗೆ ಸಹಾಯ ಾಡುವದು, ಮತ್ತು ಜಗತ್ತಿನ ಜನರ ಜೀವನ ಮಟ್ಟವನ್ನು ಧಾರಿಸುವದು ಇವೇ ಇದರ ಮುಖ್ಯ ಗುರಿಗಳು. ಈ ಸಂಸ್ಥೆ ್ನ ಆರು ಮುಖ್ಯ ಅಂಗಗಳ ಮೂಲಕ ಹಲವು ಕ್ಷೇತ್ರ ್ಯಾಗಿ ಕೆಲಸ ಮಾಡುತ್ತಿದೆ.

(೧) ಸಾಮಾನ್ಯಸಭೆ (General Assembly):— ಈ ಸಭೆಯಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳೂ ಇರುವರು. ಪ್ರತಿಯೊಂದು ಸದಸ್ಯ ರಾಷ್ಟ್ರವೂ, ಹೆಚ್ಚೆಂದರೆ, ಐವರು ಪ್ರತಿನಿಧಿಗಳನ್ನು ಕಳುಹಿಸ ಬಹುದು. ಆದರೆ ಒಂದು ರಾಷ್ಟ್ರಕ್ಕೆ ಒಂದು ಮತ ಮಾತ್ರ ವಿರುವದು. ಇದು ವರ್ಷಕ್ಕೊಮ್ಮೆಯಾದರೂ ಸಪ್ಟಂಬರದಲ್ಲಿ. ಸೇರಲೇಬೇಕು. ಮತ್ತು ಸಂಸ್ಥೆಗೆ ಸಂಬಂಧಪಟ್ಟ ಎಲ್ಲ ವಿಷಯು ಗಳ ಇಲ್ಲವೆ ಸಂಸ್ಥೆಯ ಯಾವುದೇ ಅಂಗದ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಕೊಳ್ಳಬಹುದು. ಸಂ. ರಾ. ಸಂಸ್ಥೆಯ ಆಯವ್ಯಯದ ಅಂದಾಜುಪಟ್ಟಿಯನ್ನೂ ಇದೇ ಸಭೆ ಮಂಜೂರು ಮಾಡುವುದು.

(೨) ಭದ್ರತಾಸಮಿತಿ (Security Council):— ಈ ಸಭೆಯಲ್ಲಿ ಹನ್ನೊಂದು ಮಂದಿ ಸದಸ್ಯರಿದ್ದು. ಅವರಲ್ಲಿ ಐವರು—ರಶಿಯ, ಅಮೇರಿಕ, ಚೀನ (Kuomintang China or Formosa), ಫ್ರಾನ್ಸ ಮತ್ತು ಬ್ರಿಟನ್— ಖಾಯಂ ಸದಸ್ಯರು ಮತ್ತು ಉಳಿದ ಆರು ಮಂದಿ —ಪ್ರತಿ ವರ್ಷ ಮೂವರಂತೆ ಎರಡು ವರ್ಷದ ಅವಧಿಗಾಗಿ, ಸಾಮಾನ್ಯ ಸಭೆಯಿಂದ ಚುನಾಯಿಸಲ್ಪಟ್ಟ ಖಾಯಂ ಅಲ್ಲದ ಸದಸ್ಯರು. ಪ್ರತಿಯೊಂದು ಖಾಯಂ ಸದಸ್ಯ ರಾಷ್ಟ್ರಕ್ಕೂ ವಿಶೇಷ ನಿರಾಕರಣೆ ಅಧಿಕಾರ (Veto Power) ಕೊಡಲಾಗಿದೆ. ಅಂದರೆ ಯಾವುದೇ ಖಾಯಂ ಸದಸ್ಯನು ತನ್ನ ನಿರಾಕರಣಾಧಿಕಾರವನ್ನು ಚಲಾಯಿಸಿದರೆ ಸಂಬಂಧಿಸಿದ ವಿಷಯದ ಮೇಲೆ ಈ ಸಭೆಯು

ನಿರ್ಣಯ ತೆಗೆದುಕೊಳ್ಳಲಾರದು. ನಿರ್ಣಯಕ್ಕೆ ಐದೂ ಖಾಯಂ ಸದಸ್ಯರ ಒಪ್ಪಿಗೆ ಬೇಕೇಬೇಕು. ಅಂತರ ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಳನ್ನು ನೆಲೆಗೊಳಿಸುವದೇ ಈ ಸಭೆಯ ಮುಖ್ಯ ಜವಾಬ್ದಾರಿ.

(೩) **ಆರ್ಥಿಕ ಮತ್ತು ಸಾಮಾಜಿಕ ಸಭೆ**:- ಇದರಲ್ಲಿ ಹದಿನೆಂಟು ಮಂದಿ ಸದಸ್ಯರಿರುವರು. ಸದಸ್ಯರ ಅವಧಿ ಮೂರು ವರ್ಷಗಳು ಮಾತ್ರ. ಹದಿನೆಂಟು ಮಂದಿಯ ಪೈಕಿ ಆರು ಮಂದಿ ಪ್ರತಿ ವರ್ಷವೂ ನಿವೃತ್ತರಾಗುವರು. ಆ ಸ್ಥಳಗಳನ್ನು ಸಾಮಾನ್ಯ ಸಭೆಯು ಚುನಾವಣೆಯ ಮೂಲಕ ತುಂಬುವದು. ತನ್ನ ಮುಂದೆ ಬರುವ ಸಮಸ್ಯೆಗಳನ್ನು ಅಭ್ಯಸಿಸಿ, ಕೂಲಂಕಷ ವಿವೇಚನೆ ಮಾಡಿ, ಸಲಹೆ ಸಿಫಾರಸು ಮಾಡುವದು ಈ ಸಭೆಯ ಕೆಲಸ. ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆ, ಉತ್ತಮ ಜೀವನ ಮಟ್ಟವನ್ನು ಕಾಯ್ದುಕೊಳ್ಳುವಿಕೆ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿಷಯಗಳ ಮೇಲ್ವಿಚಾರಣೆ- ಇವೇ ಮೊದಲಾದವು ಈ ಸಭೆಯ ಕಕ್ಷೆಯಲ್ಲಿ ಬರುವ ಜವಾಬ್ದಾರಿಗಳು. ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ILO). ಸಂ. ರಾ. ಶೈಕ್ಷಣಿಕ— ವೈಜ್ಞಾನಿಕ-ಸಾಂಸ್ಕೃತಿಕ ಸಂಸ್ಥೆ (UNESCO) ಜಾಗತಿಕ ಆರೋಗ್ಯ ಸಂಸ್ಥೆ (WHO). ಅಂತರ ರಾಷ್ಟ್ರೀಯ ಅಭಿವೃದ್ಧಿ ಬ್ಯಾಂಕು (IBRD). ಆಹಾರ ಮತ್ತು ಒಕ್ಕಲುತನ ಸಂಸ್ಥೆ FAO). ಇವು ಈ ಸಭೆಯ ಕೆಲವು ಮುಖ್ಯ ಶಾಖೆಗಳು.

(೪) **ವಿಶ್ವಸ್ಥ ಸಮಿತಿ** (Trusteeship Council) :- ನ್ಯಾಸ ನಾಡುಗಳ (Trust Territories) ಆಡಳಿತ ನಿರ್ವಹಣೆ

ಮಾಡುತ್ತಿರುವ ಎಲ್ಲ ದೇಶಗಳ ಪ್ರತಿನಿಧಿಗಳನ್ನೂ, ಭದ್ರತಾ ಸಮಿತಿಯ ಎಲ್ಲ ಖಾಯಂ ಸದಸ್ಯರನ್ನೂ ಮತ್ತು ಈ ಎರಡೂ ರೀತಿಯ ಸದಸ್ಯರ ಸಂಖ್ಯೆಯಷ್ಟೇ. ನ್ಯಾಸ ನಿರ್ವಹಣಾ ಜವಾಬ್ದಾರಿ ಇಲ್ಲದ ರಾಷ್ಟ್ರಗಳ ಪ್ರತಿನಿಧಿಗಳನ್ನೂ ಈ ಸಭೆ ಒಳಗೊಂಡಿದೆ. ನ್ಯಾಸ ನಿರ್ವಹಣೆ ಕೆಲಸ ಇಲ್ಲದ ರಾಷ್ಟ್ರಗಳನ್ನು ಸಂ. ರಾ. ಸಾಮಾನ್ಯ ಸಭೆಯು ಮೂರು ವರ್ಷಕ್ಕೊಮ್ಮೆ ಚುನಾಯಿಸಿ ಕಳಿಸುತ್ತದೆ. ಪ್ರತಿಯೊಬ್ಬ ಸದಸ್ಯನಿಗೂ ಒಂದು ಮತ (Vote) ಇರುತ್ತದೆ—ಮತ್ತು ಯಾವುದೇ ನಿರ್ಣಯ ವನ್ನು ಸಾಮಾನ್ಯ ಬಹುಮತದಿಂದ ನಿರ್ಧರಿಸಲಾಗುವದು. ತಮ್ಮ ಆಧೀನದಲ್ಲಿರುವ ಪ್ರದೇಶಗಳ ಸಮರ್ಪಕ ಆಡಳಿತ ಮತ್ತು ಮೇಲ್ವಿಚಾರಣೆಯೇ ಈ ಸಭೆಯ ಮುಖ್ಯ ಕಾರ್ಯ. 'ಲೀಗ' ದ ಶಾಸನಾದೇಶ ಪದ್ಧತಿಯಂತೆ, ನ್ಯಾಸನಾಡುಗಳ ಜನತೆಯ ಅಭಿವೃದ್ಧಿಗಾಗಿ ಪ್ರಯತ್ನ ಮಾಡಿ, ಮುಂದುವರಿದ ರಾಷ್ಟ್ರಗಳ ಮಟ್ಟಕ್ಕೆ ಅವರನ್ನು ತರುವುದೇ ಈ ಸಭೆಯ ಗುರಿ.

(೫) ಅಂತರ ರಾಷ್ಟ್ರೀಯ ನ್ಯಾಯಾಲಯ:- ಇದ ರಲ್ಲಿ ಒಂಭತ್ತು ವರ್ಷಗಳ ಅವಧಿಗಾಗಿ ಸಂ ರಾ. ಸಾಮಾನ್ಯ ಸಭೆ ಮತ್ತು ಭದ್ರತಾ ಸಮಿತಿಗಳು ಜಂಟಿಯಾಗಿ ಆರಿಸಿದ ಹದಿ- ನೈದು ಮಂದಿ ನ್ಯಾಯಾಧೀಶರು ಇರುವರು. ಹೇಗ್(ಹಾಲಂಡ್) ಎಂಬಲ್ಲಿ ಕೂಡುವ ಈ ನ್ಯಾಯಾಲಯವು ತನ್ನಿಂದಲೇ ರಚಿತ ವಾದ ಕೆಲ ನಿಯಮಗಳಂತೆ ಕಾರ್ಯ ಮಾಡುವದು. ರಾಷ್ಟ್ರಗಳ ನಡುವೆ ಎದ್ದ ಕಲಹಗಳನ್ನಷ್ಟೇ ಈ ನ್ಯಾಯಾಲಯವು ವಿಚಾರ ಣೆಗೆ ತೆಗೆದುಕೊಳ್ಳುವದು. ಮತ್ತು ಕಲಹಕ್ಕೆ ಸಂಬಂಧಪಟ್ಟ

ಎರಡು ರಾಷ್ಟ್ರಗಳ ಒಪ್ಪಿಗೆಯಿಲ್ಲದೆ ಯಾವ ಜಗಳವೂ ಈ ನ್ಯಾಯಾಲಯದ ಮುಂದೆ ಬರಲಾರದು.

(೬) **ಕಾರ್ಯ ನಿರ್ವಾಹಕ ಕಛೇರಿ :-** ಪ್ರಧಾನ ಕಾರ್ಯದರ್ಶಿ ಮತ್ತು ಆತನ ಕೆಳಗೆ ಅನೇಕ ನೌಕರರೂ ಇರುವರು. ಭದ್ರತಾ ಸಮಿತಿಯ ಶಿಫಾರಸಿನ ಮೇಲೆ ಸಾಮಾನ್ಯ ಸಭೆಯು ಪ್ರಧಾನ ಕಾರ್ಯದರ್ಶಿಯ ನೇಮಕ ಮಾಡುವದು. ಈತನೇ ಸಂ. ರಾ. ಸಂಸ್ಥೆಯ ಪ್ರಮುಖ ಆಡಳಿತಾಧಿಕಾರಿ. ಸಂ. ರಾ. ಸಂಸ್ಥೆಯ ಆದಾಯದ ಸುಮಾರು ಮುಕ್ಕಾಲುಭಾಗ ಹಣವು ಈ ಕಛೇರಿಗಾಗಿಯೇ ವಿನಿಯೋಗವಾಗುತ್ತದೆ. ಸಂ. ರಾ. ಸಂಸ್ಥೆಯ ಎಲ್ಲ ಅಂಗೋಪಾಂಗಗಳ ಕಾರ್ಯವನ್ನು ಸಂಘಟಿಸುವುದರ ಸಲುವಾಗಿ ಈ ಕಛೇರಿಯು ಇದೆ.

ಸಂಯುಕ್ತ ರಾಷ್ಟ್ರ ಸಂಸ್ಥೆಯ ಕಾರ್ಯ

ಪ್ರಾರಂಭವಾಗಬಹುದಾಗಿದ್ದ ಯುದ್ಧಗಳನೇಕವನ್ನು ಸಂ. ರಾ. ಸಂಸ್ಥೆ ನಿಲ್ಲಿಸಿದೆ. ಪ್ಯಾಲೆಸ್ಟೈನ್‌ದಲ್ಲಿ, ಕಾಶ್ಮೀರದಲ್ಲಿ, ಕೋರಿಯಾದಲ್ಲಿ, ಇಂಡೋನೇಶಿಯಾದಲ್ಲಿ ಸಮಸ್ಯೆಗಳು ಎದ್ದಾಗ, ಸಂಬಂಧಪಟ್ಟ ರಾಷ್ಟ್ರಗಳು ಯುದ್ಧದಿಂದಲೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ತಯಾರಾಗಿದ್ದವು. ಸಂ. ರಾ. ಸಂಸ್ಥೆಯು ಅಸ್ತಿತ್ವದಲ್ಲಿರದಿದ್ದರೆ, ಈ ಸಂದರ್ಭಗಳಲ್ಲಿ ಖಂಡಿತವಾಗಿ ಯುದ್ಧವು ಅನಿವಾರ್ಯವಾಗುತ್ತಿತ್ತು. ಆದರೆ ಈ ಸಂಸ್ಥೆ, ಸಮಸ್ಯೆಗಳನ್ನು ಪರಿಹರಿಸಲು, ಶಾಂತಿಯುತ ಸಂಧಾನಗಳನ್ನು ಏರ್ಪಡಿಸುವುದರ ಮೂಲಕ, ಕೆಲವೊಮ್ಮೆ

ತಪ್ಪಿತಸ್ಥ ರಾಷ್ಟ್ರವನ್ನು ಹೆದರಿಸುವುದರ ಮೂಲಕ, ಯುದ್ಧವನ್ನು ತಡೆಗಟ್ಟಿದೆ ಎಂದು ಹೇಳಬಹುದು.

ಪ್ಯಾಲೆಸ್ಟೈನ್:– ಪ್ಯಾಲೆಸ್ಟೈನ್ ದೇಶದ ರಕ್ಷಣೆಯ ಹೊಣೆಯನ್ನು (Mandate) ಇಂಗ್ಲಂಡು ಹೊತ್ತಿತ್ತು. ಮತ್ತು ಈ ಹೊಣೆ ೧೯೪೮ ರಲ್ಲಿ ಕೊನೆಗೊಳ್ಳುವುದಿತ್ತು. ಆದಕ್ಕೆ ಪೂರ್ವದಲ್ಲಿಯೇ, ಈ ದೇಶದ ಪ್ರಮುಖ ಜನಾಂಗಗಳಾದ ಜ್ಯೂಜನರು ಮತ್ತು ಅರಬರು, ದೇಶಕ್ಕಾಗಿ ಹೋರಾಟ ಪ್ರಾರಂಭಿಸಿದರು. ತನ್ನ ಕೈಯಲ್ಲಿ ಈ ಕಲಹವನ್ನು ತೀರ್ಮಾನಿಸುವುದು ಸಾಧ್ಯವಾಗಲಿಲ್ಲವಾದ್ದರಿಂದ, ಇಂಗ್ಲಂಡು ಈ ಪ್ರಶ್ನೆಯನ್ನು ಸಂ.ರಾ. ಸಂಸ್ಥೆಗೆ ಒಪ್ಪಿಸಿತು. ಸಂ.ರಾ. ಸಂಸ್ಥೆಯು ಒಂದು ವಿಶೇಷ ಸಮಿತಿಯು, ಈ ಪ್ರಶ್ನೆಯನ್ನು ಕೂಲಂಕಷವಾಗಿ ಅಭ್ಯಸಿಸಿ, ಪ್ಯಾಲೆಸ್ಟೈನನ್ನು ಎರಡು ಭಾಗವಾಗಿ ಒಡೆದು, ಜ್ಯೂಜನರಿಗೆ ಒಂದನ್ನೂ, ಅರಬರಿಗೆ ಮತ್ತೊಂದನ್ನೂ ಕೊಡಬೇಕೆಂದು ಸೂಚಿಸಿತು. ಇದರಿಂದ ಜ್ಯೂಜನರಿಗೆ ಬಹಳ ಸಂತೋಷವಾಯಿತಾದರೂ, ಅರಬರು ಪ್ರತಿಭಟಿಸಿದರು. ಈ ಮಧ್ಯೆ ೧೯೪೮ ರ ಮೇ ೧೪ ರಂದು ದೇಶವು ಇಬ್ಭಾಗವಾಗಿ, ಪ್ಯಾಲೆಸ್ಟೈನ್‌ದ ಜೊತೆಗೆ, ಇಸ್ರೇಲ್ ಎಂಬ ಹೊಸ ರಾಷ್ಟ್ರವೂ ಉದಯವಾಯಿತು. ಟೆಲ್‌ಆವೀವ್ (Tel AVIV) ನಗರವು ಹೊಸ ರಾಷ್ಟ್ರದ ರಾಜಧಾನಿಯಾಯಿತು.

ಸಿಟ್ಟಿಗೆದ್ದು ಅರಬರು ಇಸ್ರೇಲ್‌ದ ಮೇಲೆ ಆಕ್ರಮಣ ನಡೆಸಿದರು. ಸಂ. ರಾ. ಸಂಸ್ಥೆಯಿಂದ ಮಧ್ಯಸ್ಥನೆಂದು

ಪ್ಯಾಲೆಸ್ಟೈನ್‌ಕ್ಕೆ ಕಳುಹಿಸಲ್ಪಟ್ಟ ಕೌಂಟ್ ಬೆರ್ನೊಡಾಟನು ಕೊಲೆಗೈಯಲ್ಪಟ್ಟನು. ಆದರೂ ಎದೆಗುಂದದೆ ಸಂ. ರಾ. ಸಂಸ್ಥೆಯು ಮತ್ತೊಬ್ಬ ಮಧ್ಯಸ್ಥನನ್ನು ಕಳುಹಿಸಿ ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನಿಸಿತು. ಅರಬರಿಗೂ ಜ್ಯೂಗಳಿಗೂ ಅಕ್ಟೋಬರ ತಿಂಗಳದಲ್ಲಿ ಆದ ಘರ್ಷಣೆಯಲ್ಲಿ ಇಸ್ರೇಲವು ವಿಜಯಿಯಾಯಿತು. ಮೇ ೧೪ ರಂದು ಇಸ್ರೇಲವು ಸಂ. ರಾ. ಸಂಸ್ಥೆಯ ೫೯ ನೆಯ ರಾಷ್ಟ್ರವಾಗಿ ಸದಸ್ಯತ್ವ ಪಡೆಯಿತು. ಸಂ. ರಾ. ಸಂಸ್ಥೆಯ ಪ್ರಯತ್ನದಿಂದಾಗಿ ಪ್ಯಾಲೆಸ್ಟೈನ್‌ದಲ್ಲಿ ಯುದ್ಧವಾಗಲಿಲ್ಲ.

ಕಾಶ್ಮೀರ:— ಭಾರತದ ಉತ್ತರಗಡಿ ಪ್ರದೇಶವಾದ ಕಾಶ್ಮೀರವು ೧೯೪೮ ರಲ್ಲಿ ಒಂದು ಸಮಸ್ಯೆಯು ತವರಾಯಿತು. ಇಂಗ್ಲೀಷರು ಭಾರತವನ್ನಾಳುತ್ತಿದ್ದ ಕಾಲದಲ್ಲಿ ಇದು ಅವರ ಒಂದು ಆಶ್ರಿತ ಸಂಸ್ಥಾನವಾಗಿತ್ತು. ಈ ದೇಶದ ಜನರಲ್ಲಿ ನೂರಕ್ಕೆ ಸುಮಾರು ೮೫ ರಷ್ಟು ಮುಸ್ಲಿಮರಿರುವರಾದರೂ ಒಂದು ಹಿಂದೂ ಮನೆತನವು ಈ ರಾಜ್ಯವನ್ನಾಳುತ್ತಿತ್ತು.

೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ದೇಶವು ಇಬ್ಭಾಗವಾಗಬೇಕಾಯಿತು. ಬ್ರಿಟಿಷರ ನೇರ ಆಳ್ವಿಕೆಗೊಳಪಟ್ಟಿದ್ದ ಪ್ರಾಂತಗಳ ಪೈಕಿ, ಬಹು ಮಂದಿ ಮುಸಲ್ಮಾನರು ವಾಸಿಸುತ್ತಿದ್ದ ಜಿಲ್ಲೆಗಳನ್ನೊಳಗೊಂಡು ಪಾಕಿಸ್ತಾನ ಎಂಬ ರಾಷ್ಟ್ರವೂ, ಉಳಿದ ಭಾಗಗಳನ್ನೊಳಗೊಂಡು ಇಂಡಿಯ ರಾಷ್ಟ್ರವೂ ಉದಯವಾದುವು. ಆದರೆ ಆಶ್ರಿತ ಸಂಸ್ಥಾನಗಳು ತಮ್ಮಿಷ್ಟದಂತೆ, ಈ ಎರಡರಲ್ಲಿ ಯಾವುದೇ ರಾಷ್ಟ್ರವನ್ನೂ

ಸೇರಬಹುದಾಗಿತ್ತು. ಕಾಶ್ಮೀರವನ್ನು ಬಲಪ್ರಯೋಗದಿಂದ ತನ್ನಲ್ಲಿ ಸೇರಿಸಿಕೊಳ್ಳಲಿಚ್ಛಿಸಿದ ಪಾಕಿಸ್ತಾನವು ಕಾಶ್ಮೀರವನ್ನು ಆಕ್ರಮಿಸಿತು. ಆಕ್ರಮಣವನ್ನೆದುರಿಸಲಾರದ ಕಾಶ್ಮೀರವು ಭಾರತವನ್ನು ಸೇರಿತು. ಮತ್ತು ಭಾರತವು ತನ್ನ ಭಾಗವಾದ ಕಾಶ್ಮೀರವನ್ನು ರಕ್ಷಿಸಲು ಸೈನಿಕ ಕ್ರಮ ಕೈಕೊಂಡಿತು. ಜಾಗತಿಕ ಶಾಂತಿಯನ್ನೇ ತನ್ನ ಗುರಿಯಾಗಿ ಪ್ರತಿಪಾದಿಸುತ್ತಿದ್ದ ಭಾರತವು ಪಾಕಿಸ್ತಾನೀ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸೈನ್ಯವನ್ನು ಕಳುಹಿಸಿತಾದರೂ, ಕಾಶ್ಮೀರ ಸಮಸ್ಯೆಯನ್ನೂ, ಸಂ. ರಾ. ಸಂಸ್ಥೆಗೆ ಕೊಂಡೊಯ್ದಿತು. ಈ ಪ್ರಶ್ನೆಯು ಈಗ್ಗೆ ಸುಮಾರು ಹದಿನೆಂಟು ವರ್ಷಗಳಿಂದಲೂ ಇತ್ಯರ್ಥವಾಗದೆ ಉಳಿದಿದೆಯಾದರೂ, ಹೆಚ್ಚಿನ ಘರ್ಷಣೆಗೆ, ಯುದ್ಧಕ್ಕೆ ಎಡೆ ಕೊಟ್ಟಿಲ್ಲ. ಸಂ. ರಾ. ಸಂಸ್ಥೆಯಿಂದ ಇಷ್ಟು ಮಾತ್ರವಾದರೂ ಕಾರ್ಯವಾಗಿರುವುದು ಸಮಾಧಾನಕಾರಕ.

ಕಾಶ್ಮೀರ ಪ್ರಶ್ನೆಯನ್ನು ಯುದ್ಧದಿಂದಲೇ ಬಗೆಹರಿಸುವುದು ಉತ್ತಮವೆಂದು ತಿಳಿದ ಪಾಕಿಸ್ತಾನ ಸರಕಾರವು, ಸರ್ವಾಧಿಕಾರಿ ಅಯೂಬಖಾನ್ ಮತ್ತು ಅವನ ಆಪ್ತ ಸಲಹೆಗಾರನಾದ ಭುಟ್ಟೋ ಇವರೀರ್ವರ ನೇತೃತ್ವದಲ್ಲಿ ೧೯೬೫ರ ಆಗಸ್ಟ್ ೫ರಂದು ಕಾಶ್ಮೀರದ ಮೇಲೆ ಮತ್ತೆ ಆಕ್ರಮಣ ನಡಸಿತು. ಪಾಕಿಸ್ತಾನದ ಕುಹಕ ನೀತಿಯನ್ನು ಭಾರತವಾದರೂ ಎಷ್ಟು ದಿನ ತಾನೆ ತಾಳೀತು! ಅದರ ಗರ್ವವನ್ನೊಮ್ಮೆ ಅಡಗಿಸಲೇ ಬೇಕು ಎಂಬ ಭಾವನೆಯನ್ನು ತಳೆದ ಭಾರತ ಸರಕಾರವು, ಪ್ರಧಾನಮಂತ್ರಿ ಲಾಲಬಹದ್ದೂರ ಶಾಸ್ತ್ರಿಯವರ ಹಿರಿತನದಲ್ಲಿ ಆಕ್ರಮಣಕಾರರನ್ನು ಸದೆಬಡಿಯಲು ಪ್ರಾರಂಭಿಸಿತು. ಭಾರತದ

ಸೈನ್ಯವು ಎಲ್ಲೆಲ್ಲೂ ವಿಜಯಿಯಾಯಿತು. ಇನ್ನೂ ಕೆಲದಿನಗಳು ಮಾತ್ರ ಈ ಘರ್ಷಣೆಯು ಮುಂದುವರಿದಿದ್ದರೆ ಪಾಕಿಸ್ತಾನದ ಪಾಡು ನಾಯಿಯ ಪಾಡಾಗುತ್ತಿತ್ತು. ಆದರೆ ಅಷ್ಟರಲ್ಲಿಯೇ ಸಂ.ರಾ. ಸಂಸ್ಥೆಯು ಮಧ್ಯಪ್ರವೇಶಿಸಿ, ಪ್ರಧಾನಕಾರ್ಯದರ್ಶಿ ಉಥಾಂಟ್ ಅವರನ್ನು ಕಾಶ್ಮೀರಕ್ಕೆ ಕಳಿಸಿತು. ಇವರ ಸಂಧಾನದ ಯತ್ನದಿಂದಾಗಿ ಆಗಸ್ಟ್ ೨೨ರಂದು ಪಾಕಿಸ್ತಾನ-ಭಾರತಗಳು ಯುದ್ಧವಿರಾಮವನ್ನೊಪ್ಪಿಕೊಂಡುವು.

ಕೊರಿಯ:— ೧೯೫೦ ರಲ್ಲಿ ಉತ್ತರ ಕೊರಿಯಾವು ದಕ್ಷಿಣ ಕೊರಿಯಾವನ್ನು ಆಕ್ರಮಿಸಿದಾಗ, ಭದ್ರತಾಸಮಿತಿಯು ಒಡನೆಯೇ ಸಭೆ ಸೇರಿ, ಉತ್ತರ ಕೊರಿಯಾವು ತನ್ನ ಸೇನೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂಬ ಆದೇಶವನ್ನಿತ್ತಿತು. ಉತ್ತರ ಕೊರಿಯ ಇಷ್ಟಕ್ಕೇ ಬಗ್ಗಲಿಲ್ಲ. ಆದ್ದರಿಂದ ಸಂ. ರಾ. ಸಂಸ್ಥೆಯು ತನ್ನ ಸದಸ್ಯ ರಾಷ್ಟ್ರಗಳ ಸೈನಿಕ ನೆರವು ಪಡೆದು, ಜನರಲ್ ಮ್ಯಾಕಾರ್ಥರನ ನೇತೃತ್ವದಲ್ಲಿ ತಪ್ಪಿತಸ್ಥ ರಾಷ್ಟ್ರದ ಮೇಲೆ ಏರಿ ಹೋಗಿ, ಬುದ್ಧಿ ಕಲಿಸಿತು. ೧೯೫೩ರಲ್ಲಿ ಶಾಂತಿ ಒಪ್ಪಂದವಾಗಿ ಹಗೆತನ ಕೊನೆಯಾಯಿತು.

೧೯೪೭ ರಲ್ಲಿ ಇಂಡೊನೇಶಿಯದ ಸ್ವಾತಂತ್ರ್ಯದ ಸಂಬಂಧವಾಗಿ ನೆದರಲ್ಯಾಂಡ್ ಮತ್ತು ಇಂಡೊನೇಶಿಯಾಗಳ ಮಧ್ಯೆ ಎದ್ದ ಘರ್ಷಣೆಯನ್ನು ಸಂಧಾನದ ಮೂಲಕ ಪರಿಹರಿಸಿ, ೧೯೪೯ ರಲ್ಲಿ ಸ್ವತಂತ್ರ ಇಂಡೊನೇಶಿಯಾವನ್ನು ಅಸ್ತಿತ್ವಕ್ಕೆ ತಂದ ಕೀರ್ತಿ ಸಂ. ರಾ. ಸಂಸ್ಥೆಗೇ ಸಲ್ಲಬೇಕು.

ಇಷ್ಟಲ್ಲದೆ ಇರಾಣ್, ಗ್ರೀಸ್. ಸಿರಿಯ, ಲೆಬನಾನ್, ಲಿಬಿಯ, ಮೊರಾಕೋ, ಕಾಂಗೋ, ಮತ್ತಿತರ ಕಡೆಗಳಲ್ಲಿ ಸಂ. ರಾ. ಸಂಸ್ಥೆಯು ಗಮನಾರ್ಹ ಕೆಲಸ ಮಾಡಿದೆ. ಆದರೆ ಅಮೇರಿಕೆ ಮತ್ತು ರಶಿಯಗಳ ನಡುವಿನ ಶೀತಲ ಯುದ್ಧವನ್ನು ಪರಿಹರಿಸುವುದು ಇದಕ್ಕಿನ್ನೂ ಸಾಧ್ಯವಾಗಿಲ್ಲ. ೧೯೫೬ ರಲ್ಲಿ ಸೂಯೆಜ್ ಕಾಲುವೆ ಸಮಸ್ಯೆ ತಲೆದೋರಿದಾಗ, ಪ್ರಬಲ ರಾಷ್ಟ್ರಗಳಾದ ಬ್ರಿಟನ್ ಮತ್ತು ಫ್ರಾನ್ಸುಗಳು ಸಂ. ರಾ. ಸಂಸ್ಥೆಯನ್ನು ಧಿಕ್ಕರಿಸಿ ಮುಂದುವರಿಯಲಾಗಲಿಲ್ಲವೆಂಬಂಶವು ಈ ಸಂಸ್ಥೆ ಇನ್ನೂ ನಿಷ್ಪ್ರಯೋಜಕವಾಗಿಲ್ಲವೆಂಬುದಕ್ಕೆ ಒಂದು ನಿಶ್ಚಿತ ದ್ಯೋತಕವಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ರಂಗಗಳಲ್ಲಿ ಸಂ. ರಾ. ಸಂಸ್ಥೆ ಬಹಳಷ್ಟು ಪ್ರಗತಿ ಸಾಧಿಸಿದೆ. ಜಗತ್ತಿನ ಜನತೆಯ ಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಅನೇಕ ಯೋಜನೆಗಳನ್ನು ಕೈಕೊಂಡಿದೆ. ಅಂತರ ರಾಷ್ಟ್ರೀಯ ಮಕ್ಕಳ ವಿಪತ್ ನಿಧಿ, ಜಾಗತಿಕ ಆರೋಗ್ಯ ಸಂಸ್ಥೆ, ಆಹಾರ ಮತ್ತು ಒಕ್ಕಲತನ ಸಂಸ್ಥೆ, ನಿರಾಶ್ರಿತರಿಗಾಗಿ ಇರುವ ಸಂಸ್ಥೆ, ಕೂಲಿಕಾರ ಸಂಸ್ಥೆ, ಇವುಗಳ ಮೂಲಕ ಅಗಾಧ ಕಾರ್ಯಸಾಧನೆಯಾಗಿದೆ. ಕೈಗಾರಿಕೆಗಳಲ್ಲಿ ಹಿಂದುಳಿದ ರಾಷ್ಟ್ರಗಳಿಗೆ ಶಾಸ್ತ್ರತಂತ್ರಜ್ಞರನ್ನು ಮತ್ತು ಆರ್ಥಿಕ ಸಹಾಯವನ್ನು ಒದಗಿಸಿ ಅವುಗಳ ಅಭಿವೃದ್ಧಿಯನ್ನೂ ಮಾಡಲಾಗುತ್ತಿದೆ. ಅಂತರ ರಾಷ್ಟ್ರೀಯ ನ್ಯಾಯಾಲಯವು ಅನೇಕ ಕಲಹಗಳಲ್ಲಿ ತನ್ನ ತೀರ್ಪನ್ನೂ ಕೊಟ್ಟಿದೆ. ಶಾಂತಿ ಸ್ಥಾಪನೆ ಮಾಡುವಲ್ಲಿ ಈ ಕಾರ್ಯದ ಮಹತ್ವ ಬಹಳ.

ಇಷ್ಟೆಲ್ಲ ಕಾರ್ಯ ಸಾಧಿಸಿದ ಯು. ಎನ್. ಓ.ದ ಸಂಘಟನೆಯಲ್ಲಿ ಕೆಲ ನ್ಯೂನತೆಗಳೂ ಇವೆ.

(i) ಸಂ. ರಾ. ಸಂಸ್ಥೆಯ ಚಾರ್ಟರ್ (Charter)ದ ಪ್ರಕಾರ ಐದು ಪ್ರಬಲ ರಾಷ್ಟ್ರ — ಇಂಗ್ಲಂಡು, ಅಮೇರಿಕೆ, ರಶಿಯ, ಫ್ರಾನ್ಸ್, ಮತ್ತು ಚೀನಗಳಿಗೆ ನಿರಾಕರಣಾಧಿಕಾರ (Veto Power) ಕೊಡಲಾಗಿದೆ. ಅಂದರೆ ಈ ಐದೂ ರಾಷ್ಟ್ರಗಳ ಒಪ್ಪಿಗೆಯಿಲ್ಲದೆ ಯಾವ ಕಾರ್ಯವೂ ನಡೆಯುವಂತಿಲ್ಲ. ಅನೇಕಬಾರಿ ಇವುಗಳಲ್ಲಿ ಒಮ್ಮತ ಸಾಧಿಸುವುದೇ ದುಸ್ತರವಾಗುತ್ತದೆ. ಇವುಗಳ ಪೈಕಿ ಯಾವುದಾದರೊಂದು ಆಕ್ರಮಣ ಪ್ರವೃತ್ತಿಯುಳ್ಳದ್ದಾದರೆ, ಅಥವಾ ಆಕ್ರಮಣ ಪ್ರವೃತ್ತಿಯುಳ್ಳ ಯಾವುದಾದರೊಂದು ದೇಶದ ಪಕ್ಷ ವಹಿಸಿದರೆ ಸಂ. ರಾ. ಸಂಸ್ಥೆ ಅಸಹಾಯಕವಾಗುತ್ತದೆ. ಇದರಿಂದ ಈ ಸಂಸ್ಥೆ ಬಹಳ ದುರ್ಬಲವಾಗಿದೆಯೆಂದು ಹೇಳಬಹುದು.

(ii) ಸದಸ್ಯ-ರಾಷ್ಟ್ರಗಳೆಲ್ಲವೂ ಸಮಾನ ಹಕ್ಕು ಬಾಧ್ಯತೆಗಳನ್ನು ಹೊಂದಿರಬೇಕು ಎಂಬ ತತ್ವದ ಮೇಲೆ ಸಂ. ರಾ. ಸಂಸ್ಥೆ ಆಧರಿತವಾಗಿದೆ. ತನ್ನ ಗಾತ್ರ ಮತ್ತು ಸಂಪನ್ಮೂಲಗಳ ಸಾಮರ್ಥ್ಯದಿಂದ ಒಂದು ರಾಷ್ಟ್ರ ಎಷ್ಟೇ ಹಿರಿಯದಾದರೂ ಸಂ. ರಾ. ಸಂಸ್ಥೆಯ ದೃಷ್ಟಿಯಲ್ಲಿ ಅದು ಬೇರೊಂದು ಚಿಕ್ಕ ರಾಷ್ಟ್ರಕ್ಕೆ ಸರಿಸಮ. ತತ್ವಶಃ ಹೀಗಿದ್ದರೂ ಸಹ ಇಲ್ಲಿ ಚಿಕ್ಕ ರಾಷ್ಟ್ರಗಳ ಅಭಿಪ್ರಾಯಕ್ಕೆ ಬೆಲೆಯೇ ಇಲ್ಲದಂತಾಗಿದೆ.

(iii) ತಪ್ಪಿತಸ್ಥ ರಾಷ್ಟ್ರಗಳನ್ನು ಶಿಕ್ಷೆಗೆ ಗುರಿಪಡಿಸುವ, ಅಥವಾ ತನ್ನ ನಿರ್ಣಯವನ್ನು ಅಂತಹ ರಾಷ್ಟ್ರಗಳ ಮೇಲೆ ಬಲವಂತವಾಗಿ ಹೇರುವ ಯಾವುದೇ ಅಧಿಕಾರವನ್ನು ಸಂ. ರಾ. ಸಂಸ್ಥೆ ಪಡೆದಿಲ್ಲ. ಇದಕ್ಕೆ ತನ್ನದೇ ಆದ ಸೈನ್ಯವೂ ಇಲ್ಲ. ಪ್ರಸಂಗ ಬಂದಾಗ ಸದಸ್ಯ-ರಾಷ್ಟ್ರಗಳಿಂದ ಸೈನ್ಯವನ್ನು ಪಡೆದು, ಅದರ ಬಲದ ಮೇಲೆ ಅಧಿಕಾರ ಚಲಾಯಿಸಬೇಕು. ಸದಸ್ಯ ರಾಷ್ಟ್ರಗಳು ಸೈನ್ಯವನ್ನೊದಗಿಸಲು ನಿರಾಕರಿಸಿದ ಪ್ರಸಂಗಗಳು ಇನ್ನೂ ವರೆಗೂ ಒದಗಿಲ್ಲವಾದರೂ ಹಾಗಾದಲ್ಲಿ ಇದರ ಪಾಡು ತೀರ ಅತಂತ್ರವಾಗುವುದು.

---

೮. ಉಪಸಂಹಾರ

೧೮೧೫ ರಿಂದ ಇಲ್ಲಿಯವರೆಗಿನ ಸುಮಾರು ನೂರೈವತ್ತು ವರ್ಷಗಳ ಅವಧಿಯಲ್ಲಿ ಪ್ರಪಂಚವು, ಶಾಂತಿ ಮತ್ತು ಭದ್ರತೆಗಳನ್ನು ಕಾಯ್ದುಕೊಳ್ಳುವ ಸಲುವಾಗಿ ರಚಿಸಲ್ಪಟ್ಟ ಮೂರು ಜಾಗತಿಕ ಸಂಸ್ಥೆಗಳನ್ನು ಕಂಡಿದೆ. ಜಗತ್ತಿನಲ್ಲಿ ಹೊಸ ಹೊಸ ವಿಚಾರಗಳು ತಲೆ ಎತ್ತುತ್ತಿರುವಾಗ, ಹಳೆಯ ವಿಚಾರಗಳ ರಕ್ಷಣೆಗಾಗಿ ಹೋಲಿ ಅಲಾಯನ್ಸ್ ಉದಯವಾಯಿತು. ಫ್ರಾನ್ಸಿನ ಮಹಾಕ್ರಾಂತಿ ಮತ್ತು ನೆಪೋಲಿಯನ್ನನ ಯುದ್ಧಗಳ ಫಲವಾಗಿ ಯುರೋಪಿನಲ್ಲಿ ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಬಡವ ಬಲ್ಲಿದರಲ್ಲಿ ಸಮಾನತೆ, ಮುಂತಾದ ನ್ಯಾಯವಾದ ಕೆಲ ವಿಚಾರಗಳು ರೂಪುಗೊಳ್ಳುತ್ತಿದ್ದ ಕಾಲದಲ್ಲಿ, ಇದು ರಾಜಪ್ರಭುತ್ವವನ್ನು ಉಳಿಸುವ, ಪ್ರಗತಿಶೀಲ ವಿಚಾರಗಳನ್ನು ಹತ್ತಿಕ್ಕುವ ಕಾರ್ಯದಲ್ಲಿ ತೊಡಗಿತು. ಹೋಲಿ ಅಲಾಯನ್ಸ್ ಕೇವಲ ನಾಲ್ಕು ದೊರೆಗಳ ಒಂದು ಒಪ್ಪಂದವೂ ತಮ್ಮ ಸ್ವಾರ್ಥ ಸಾಧನೆಗಾಗಿ ಮಾಡಿಕೊಂಡ ಒಂದು ಸಾಧನವೂ ಆಗಿದ್ದಿತು. ಅಂತರ ರಾಷ್ಟ್ರೀಯ ಸಮಸ್ಯೆಗಳನ್ನಷ್ಟೇ ಪರಿಹರಿಸಿ, ಹಳೆಯ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಂಡು, ಯುದ್ಧಗಳನ್ನು ತಡೆಗಟ್ಟುವುದರ ಮೂಲಕ ಎಲ್ಲೆಲ್ಲೂ ಶಾಂತಿ, ಸುಭದ್ರತೆಗಳನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಪ್ರಾರಂಭವಾದ ಈ ಸಂಸ್ಥೆ, ಮೆಟರ್ನಿಕ್ ಮ. ಹಾಶಯನ ನಾಯಕತ್ವದಲ್ಲಿ ಎಲ್ಲಾ ತತ್ವಗಳನ್ನೂ ತ್ಯಜಿಸಿ ಸ್ವಾರ್ಥ ಸಾಧನೆ

ಯನ್ನಷ್ಟೇ ತನ್ನ ಗುರಿಯನ್ನಾಗಿ ಮಾಡಿಕೊಂಡಿತು. ದೇಶಗಳ ಆಂತರಿಕ ಸಮಸ್ಯೆಗಳಲ್ಲಿ ಸಹ ಕೈ ಹಾಕತೊಡಗಿತು. ಕಾಲಮಾನದ ಸೆಳೆತಕ್ಕೆ ವಿರೋಧವಾಗಿ ಮುನ್ನಡೆಯಲು ಪ್ರಯತ್ನಿಸಿದ ಈ ಸಂಸ್ಥೆ ತನ್ನ ಕಾರ್ಯ ಸಾಧನೆಯಲ್ಲಿ ಸಹಜವಾಗಿಯೇ ವಿಫಲವಾಯಿತು.

ಲೀಗ್ ಆಫ್ ನೇಶನ್ಸ್ ಉದಾತ್ತ ಧ್ಯೇಯಗಳ ಆಧಾರದ ಮೇಲೆಯೇ ರಚಿತವಾಗಿತ್ತು. ರಾಷ್ಟ್ರೀಯತೆಯ ಎಲ್ಲೆಯನ್ನೂ ಮೀರಿ ವಿಶ್ವಬಂಧುತ್ವವನ್ನು ಬೆಳೆಸಲೋಸುಗ, ರಾಷ್ಟ್ರಗಳಲ್ಲಿ ಸಹಕಾರೀ ಮನೋಭಾವವನ್ನು ರೂಪಿಸುವುದಕ್ಕಾಗಿ, ಚಿಕ್ಕ ರಾಷ್ಟ್ರಗಳನ್ನು ರಕ್ಷಿಸುವುದಕ್ಕಾಗಿ, ಒಟ್ಟಾರೆ ಜನತೆಯ ವಿಚಾರಗಳಿಗನುಗುಣವಾಗಿ ಲೋಕಕಲ್ಯಾಣವೆಸಗುವುದಕ್ಕಾಗಿ ಈ ಸಂಸ್ಥೆ ಹೆಣಗಾಡಿತು. ಆದರೆ ರಾಷ್ಟ್ರಗಳು ಇಂಥ ಉದಾತ್ತ ಭಾವನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳುವಷ್ಟು ಮುಂದುವರಿದಿರಲಿಲ್ಲ. ಹೀಗಾಗಿ ಯುದ್ಧಾನಂತರ ಕಾಲದಲ್ಲಿ ರಾಷ್ಟ್ರೀಯತೆಯ ಸೆಳವು ಮೊದಲಿಗಿಂತಲೂ ಹೆಚ್ಚಾಗಿಯೇ ಇತ್ತೆಂದೂ ಹೇಳಬಹುದು. ರಾಷ್ಟ್ರದ ಘನತೆಯನ್ನುಳಿಸಿಕೊಳ್ಳುವ ನೆವ ಹಾಕಿ ಅನೇಕ ದೇಶಗಳು ತಾವು ಕೊಟ್ಟಿದ್ದ ವಚನಗಳನ್ನೆಲ್ಲ ಮುರಿಯಲಾರಂಭಿಸಿದವು; 'ಲೀಗ್'ದ ಮಾತಿಗೆ ಬೆಲೆಯೇ ಇಲ್ಲವಾಯಿತು. ಸದಸ್ಯ ರಾಷ್ಟ್ರಗಳ ಬೆಂಬಲದ ಮೇಲೆಯೇ ನಿಂತಿದ್ದ, ಸ್ವತಃ ಯಾವ ಪರಮಾಧಿಕಾರವನ್ನೂ ಪಡೆಯದ ಲೀಗು ಬೇರೆ ಮಾರ್ಗವನ್ನು ಕಾಣದೆ, ತನ್ನ ಅಸ್ತಿತ್ವದ ಇಪ್ಪತ್ತನೆಯ ವರುಷದಲ್ಲಿ ಮತ್ತೊಂದು ಜಾಗತಿಕ ಯುದ್ಧಕ್ಕೇ ಎಡೆಮಾಡಿಕೊಟ್ಟಿತು.

ಪ್ರಪಂಚದಲ್ಲಿ ಶಾಂತಿಯನ್ನು ನೆಲೆಗೊಳಿಸಲು ಎರಡು ಜಾಗತಿಕ ಸಂಸ್ಥೆಗಳು ವಿಫಲವಾದುದನ್ನು ಕಂಡ ಮುತ್ಸದ್ದಿಗಳು, ನಾಯಕರು, ಎಂದಿಗಿಂತಲೂ ಹೆಚ್ಚು ಉತ್ಸಾಹ ಮತ್ತು ನಿರ್ಣಯದಿಂದೊಡಗೂಡಿ, ಎರಡನೆಯ ಮಹಾಯುದ್ಧದನಂತರ (೧೯೪೫) ಮತ್ತೊಂದು ಸಂಸ್ಥೆಯನ್ನು ಸ್ಥಾಪಿಸಿದರು. ಸಂ. ರಾ. ಸಂಸ್ಥೆ ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ, ಹಾಗೆಯೇ ರಾಜಕೀಯ ರಂಗದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಜನತೆಯ ಜೀವನ ಮಟ್ಟವನ್ನು ಹೆಚ್ಚಿಸುವಲ್ಲಿ, ಜ್ಞಾನ ಪ್ರಸಾರ ಮಾಡುವಲ್ಲಿ, ಅನೇಕ ರೋಗರುಜಿನಗಳನ್ನು ನಿರ್ಮೂಲನ ಮಾಡುವಲ್ಲಿ, ಹಿಂದುಳಿದ ರಾಷ್ಟ್ರಗಳ ಪ್ರಗತಿ ಸಾಧಿಸುವಲ್ಲಿ, ಇದು ಬೇಕಾದಷ್ಟು ಕೆಲಸ ಮಾಡುತ್ತಿದೆ. ಯುದ್ಧವು ಪ್ರಾರಂಭ ವಾಗಬಹುದಾಗಿದ್ದ ಅನೇಕ ಸಂದರ್ಭಗಳಲ್ಲಿ ಸಂ. ರಾ. ಸಂಸ್ಥೆಯ ಪ್ರಯತ್ನದ ಫಲವಾಗಿ, ಅವು ನಿಂತಿವೆ. ಆದರೆ ಈ ಸಂಸ್ಥೆ. ತನ್ನ ಕಾರ್ಯ ಸಾಧಿಸುವಲ್ಲಿ ಪೂರ್ಣ ಫಲಕಾರಿಯಾಗಿದೆ ಎಂದು ಹೇಳಲೂ ಬರುವಂತಿಲ್ಲ. ಏಕೆಂದರೆ ಜಗತ್ತು ಇಂದು ಎರಡು ಬಣಗಳಾಗಿ ಒಡೆಯಲ್ಪಟ್ಟಿದೆ. ಒಂದು ಬಣಕ್ಕೂ ಮತ್ತೊಂದು ಬಣಕ್ಕೂ ಎಷ್ಟೋ ವಿಷಯಗಳಲ್ಲಿ ಘರ್ಷಣೆಯೂ ಇದೆ. ಎರಡೂ ಬಣಗಳೂ, ಸಾಧ್ಯವಾದಾಗ ತಮ್ಮ ಸ್ವಾರ್ಥ ಸಾಧನೆಯನ್ನೂ ಗೈಯುತ್ತಿವೆ. ಎಲ್ಲರೂ ಸಹಕಾರದಿಂದ ಬಾಳಿ ಲೋಕ ಕಲ್ಯಾಣವನ್ನುಂಟುಮಾಡಬೇಕು ಎಂಬ ಭಾವನೆ ಈ ಸಂಸ್ಥೆಯ ಪ್ರಮುಖ ಸದಸ್ಯರಲ್ಲಂತೂ ಕಂಡುಬರುತ್ತಿಲ್ಲ. ತಮ್ಮ ರಾಷ್ಟ್ರದ ಘನತೆಯನ್ನು ಬೆಳೆಸಿಕೊಳ್ಳುವ ಭರದಲ್ಲಿ ಮುತ್ಸದ್ದಿಗಳು, ತಮ್ಮ ನಿಲುವನ್ನೆ, ಅದು ಸರಿ–

ಯಿರಲಿ ಅಥವಾ ತಪ್ಪೇ ಇರಲಿ, ಉಳಿಸಿಕೊಳ್ಳುವ ಆಸಕ್ತಿಯಲ್ಲಿ-ದ್ದಾರೆ. ಅಂದರೆ, ತಾನು ಸಾಧಿಸಿರುವ ಕಾರ್ಯವನ್ನು ಇದು ಇಷ್ಟೆಲ್ಲಾ ವಿಷಮ ಪರಿಸ್ಥಿತಿಯ ಮಧ್ಯೆಯೇ ಸಾಗಿಸಿದೆ.

ಸಂಯುಕ್ತ ರಾಷ್ಟ್ರ ಸಂಸ್ಥೆ ಸರ್ವ ಸ್ವತಂತ್ರ ರಾಜ್ಯಗಳ ಸಮಾನಾಧಿಕಾರದ ಆಧಾರದ ಮೇಲೆ ಸ್ವಪ್ರೇರಣೆಯಿಂದ ಒಂದು ಸೇರಿದ ಅನೇಕ ರಾಷ್ಟ್ರಗಳ ಒಂದು ಸಂಸ್ಥೆಯೇ ಹೊರತು, ಒಂದು ಜಾಗತಿಕ ರಾಜ್ಯ (World State) ವಲ್ಲ ಎಂಬ ಮಾತನ್ನು ನಾವು ನೆನಪಿನಲ್ಲಿಡಬೇಕು. ಅಂದರೆ, ತನ್ನ ಕಕ್ಷೆಯಲ್ಲಿ ಬರುವ ಎಲ್ಲ ಜನರ ಮೇಲೆ, ಅಥವಾ ಜನರ ಸಂಘಗಳ ಮೇಲೆ ಶಾಸನಗಳನ್ನು ವಿಧಿಸುವ ಪರಮಾಧಿಕಾರ (Sovereignty) ವನ್ನು ಈ ಸಂಸ್ಥೆಯು ಪಡೆದಿಲ್ಲ. ಹೀಗಾಗಿ ತನ್ನ ಕಾರ್ಯದಲ್ಲಿ ಸಫಲವಾಗಬೇಕೆಂಬ ಇದರ ಇಚ್ಛೆಯು ಸದಸ್ಯ-ರಾಷ್ಟ್ರಗಳ ಸಂಕಲ್ಪವನ್ನೇ ಅವಲಂಬಿಸಿದೆ. ಹೀಗಿರುವುದರಿಂದ ರಾಷ್ಟ್ರಗಳು, ತಮ್ಮ ಸಂಕುಚಿತ ಭಾವನೆಗಳನ್ನು ತೊಡೆದು ಹಾಕಿ, ಸಹಕಾರ ಮನೋಭಾವದಿಂದ, ಯಾವುದಾದರೊಂದು ಸಾರ್ವಜನಿಕ ಸಂಸ್ಥೆಯ ಮೂಲಕ ಶಾಂತಿಯನ್ನು ನೆಲೆಗೊಳಿಸುವ ಕಾರ್ಯದಲ್ಲಿ ನೆರವಾಗದಿದ್ದರೆ, ಈ ಅಣುಯುಗದಲ್ಲಿ ಯಾವ ರಾಷ್ಟ್ರವೂ ಉಳಿಯಲಾರದು.

———